بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 01

ವಾರ್ಷಿಕ ಶುಲ್ಕ ರೂ.500/-

ಸಂಚಿಕೆ: 49

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

17 ಡಿಸೆಂಬರ್ 2020, 17 ಫತಹ್ 1399 ಹಿಜರಿ ಶಮ್ಸಿ,
01 ಜಮಾದಿಉಲ್ ಅವ್ವಲ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَلِلّٰهِ مَا فِي السَّمٰوٰتِ وَمَا فِي الْاَرْضِ ؕ وَكَفٰى بِاللّٰهِ وَكِيْلًا ○ اِنْ يَّشَاْ يُذْهِبْكُمْ اَيُّهَا النَّاسُ وَيَاْتِ بِاٰخَرِيْنَ ؕ وَكَانَ اللّٰهُ عَلٰى ذٰلِكَ قَدِيْرًا ○ (النساء:133،134)

***(ಅನ್ನಿಸಾಅ್:133-134)***

ಅಂದರೆ: ಆಕಾಶಗಳಲ್ಲಿರುವ ಮತ್ತು ಭೂಮಿಯಲ್ಲಿರುವ ಎಲ್ಲವೂ ಅಲ್ಲಾಹನದ್ದೇ ಆಗಿವೆ. ರಕ್ಷಕನಾಗಿ ಅಲ್ಲಾಹನು ಸಾಕು, ಎಲೈ ಜನರೇ, ಅವನು ಬಯಸುವನಾದರೆ ನಿಮ್ಮನ್ನು ಅವನು ನಾಶಪಡಿಸಿ (ಬದಲಿಗೆ) ಬೇರೆಯವರನ್ನು ತರುವನು. ಹಾಗೆ ಮಾಡಲು ಅಲ್ಲಾಹನಿಗೆ ಪೂರ್ಣ ಸಾಮರ್ಥ್ಯವಿದೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಖುತ್‌ಬದ ನಡುವೆ ಮಸೀದಿಗೆ ಬರುವವರು ಎರಡು ರಕ್‌ಅತ್‌ಗಳನ್ನು ಲಘುಕರಿಸಿ ನಿರ್ವಹಿಸಿ

ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ. ನಬಿ(ಸ) ಕುತುಬಾ ನಿರ್ವಹಿಸುತ್ತಿದ್ದ ಸಂಧರ್ಭ. ಅವರು ನುಡಿದರು. ನೀವು ನಮಾಝ್ ಮಾಡಿದ್ದೀರ. ಅವನು ಹೇಳಿದನು. ಇಲ್ಲ ಅವರು(ಸ) ಹೇಳಿದರು (ಏಳಿರಿ) ಎರಡು ರಕಅತುಗಳನ್ನು ನಿರ್ವಹಿಸಿರಿ.

ಹಝ್ರತ್ ಝೈತುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್(ರ) ಈ ಹದೀಸಿನ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಇಮಾಮ್ ಮಾಲೀಕರ ದೃಷ್ಟಿಯಲ್ಲಿ ಕುತುಬ ನಡುವೆ ಯಾವುದೇ ನಫಲ್ ನಿರ್ವಹಿಸುವುದು ಜಾಯಝ್‌ಅಲ್ಲ (ಧರ್ಮ ಸಮ್ಮತವಲ್ಲ). ಬದಲು ಕುತುಬ ಆಲಿಸುವುದಕ್ಕೆ ಆಧ್ಯತೆ ಕೊಡಲಾಗಿದೆ.

ಅವರು ಹೇಳುತ್ತಾರೆ. ತಹಯ್ಯ ಮಸ್ಜಿದ್‌ಗೆ ಸಂಬಂದಿಸಿದ ನಫಲ್ ಪಠಿಸಿದವರಿಗೆ ಕುತುಬಾ ಆಲಿಸುವುದು ಕಡ್ಡಾಯವಾಗಿದೆ ಎಂದಾದರೆ ಹಝ್ರತ್ ರಸೂಲುಲ್ಲಾಹ್(ಸ) ಹಝ್ರತ್ ಸುಲೈಕ ಗ್ತತಫಾನಿ ಅವರಿಗೆ ಎರಡು ರಖಾತ್ ನಫಲ್ ಪಠಿಸಲು ಏಕೆ ಹೇಳುತ್ತಿದ್ದರು. ಅವರ ಈ ನುಡಿಯಿಂದ ಸ್ಪಷ್ಟವಿದೆ. ಎರಡೂ ಆಜ್ಞೆಗಳು ತನ್ನ ತನ್ನ ಸ್ಥಾನದಲ್ಲಿ ಸರಿಯಾಗಿವೆ. ಅದರಲ್ಲಿ ಯಾವುದೇ ತಾರತಮ್ಯವಿಲ್ಲ. ಕುತುಬಾ ನಡುವೆ ಬರುವವನು ಆ ಸಮಯ ಸಭಿಕರಲ್ಲಿಯೇ ಪರಿಗಣಿಸಲ್ಪಡುವನು. ಆಗ ಅವನು ತಹಯ್ಯ ಮಸ್ಜಿದ್ ಪಠಿಸುವ ಆಜ್ಞೆಪಾಲನೆ ಮಾಡಬೇಕು **(ಸಹೀ ಬುಖಾರಿ, ಸಂಪುಟ-2, ಕಿತಾಬುಲ್ ಜುಮುಅ)**

**ಕೇವಲ ವೈದ್ಯರ ಅಥವಾ ಚಿಕಿತ್ಸೆಯ ಮೇಲೆ ಭರವಸೆ ಹೊಂದುವುದು ವಿವೇಕತನವಲ್ಲ. ಅಲ್ಲಾಹನು ಬಯಸುವುದು ಪರಲೋಕದ ಮೇಲೂ ವಿಶ್ವಾಸವಿರಬೇಕು.**

**ಮೂಢ ಮನುಷ್ಯನು ತೀವ್ರತರ ರೋಗಗಳಿಗೆ ಒಳಗಾದಾಗ ಅಲ್ಲಾಹನನ್ನು ಸ್ಮರಿಸುವನು. ಆದರೆ ಹಾಗೆಯೇ ಪರೀಕ್ಷೆ ರೂಪದಲ್ಲಿ ಗುಣಪಡುವಾಗ ಅದೆಂತಹ ತತ್ವಗಳನ್ನು ಅನುಸರಿಸುತ್ತಾನೆಂದರೆ ಅವನಿಗೆ ಮರಣವೇ ಇಲ್ಲ ಎಂಬಂತೆ ಭಾಸವಾಗುತ್ತದೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಎಚ್ಚರಿಕೆದಾಯಕ ಭವಿಷ್ಯವಾಣಿಗಳನ್ನು ಕ್ಷಮೆ ಹಾಗೂ ಪಶ್ಚಾತ್ತಾಪ ಪಡುವ ಮೂಲಕ ದೂರಿಕರಿಸಬಹುದು. ನರಕದ ಎಚ್ಚರಿಕೆಯೂ ದೂರವಾಗಬಹುದು. ಆದುದರಿಂದ ಜನರು ಇತ್ತ ಕಡೆ ಗಮನಹರಿಸಬೇಕು. ಆ ಮೂಲಕ ಅಲ್ಲಾಹನು, ಆ ದೇಶ ಮತ್ತು ಪ್ರದೇಶಗಳನ್ನು ರಕ್ಷಿಸಬಹುದಾಗಿದೆ. ಅವನು ಬಯಸಿದ್ದನ್ನು ಮಾಡಬಹುದು. ಆದರೆ ಹೇಳುವನು: **"ಖುಲ್ ಮಾ ಯಬೂ ಬಿಕುಂ ರಬ್ಬಿ ಲೌಲ ದುಆಉಕುಂ"** (ಅಲ್-ಫುರ್ಖಾನ್-70) ಹೇಳು. ನಿಮ್ಮ ಪ್ರಾರ್ಥನೆ ಇಲ್ಲದಿದ್ದರೆ ನನ್ನ ಪ್ರಭು ನಿಮ್ಮನ್ನು ಏನು ಗಮನಿಸಲಿಕ್ಕೆ? ಜನರು ಹೇಳುತ್ತಾರೆ. ಹೆಜ್ಜೆ ಹೆಜ್ಜೆಗೆ ವೈದ್ಯರಿದ್ದಾರೆ, ಡಾಕ್ಟರುಗಳಿದ್ದಾರೆ ಚಿಕಿತ್ಸಾಲಯಗಳಿವೆ. ತಕ್ಷಣ ಚಿಕಿತ್ಸೆ ಪಡೆದು ಗುಣಪಡಿಸಿಕೊಳ್ಳಬಹುದು? ಆದರೆ ಅವರಿಗೆ ಗೊತ್ತಿಲ್ಲ. ಮುಂಬಯಿ ಮತ್ತು ಕರಾಚಿಯಲ್ಲಿ ಎಂತೆಂತಹ ಗಣ್ಯ ಡಾಕ್ಟರುಗಳು ರೋಗಗ್ರಸ್ತರಾಗಿ ಅಗಲಿ ಹೋದರು? ಯಾವ ಕಾರ್ಯದ ಮೇಲೆ ಅವರು ನಿಯುಕ್ತರಾಗಿದ್ದರೋ ಸ್ವಯಂ ಅದಕ್ಕೆ ತುತ್ತಾದರು. ಇದು ಅಲ್ಲಾಹನು ತನ್ನ ಕ್ಷಮತೆಗಳನ್ನು ತೋರಿಸುವ ವಿಧಾನವಾಗಿದೆ. ಕೇವಲ ವೈದ್ಯರ ಅಥವಾ ಚಿಕಿತ್ಸೆಯ ಮೇಲೆ ಭರವಸೆ ಹೊಂದುವುದು ವಿವೇಕತನವಲ್ಲ. ಅಲ್ಲಾಹನು ಬಯಸುವನು ಪರಲೋಕದ ಮೇಲೂ ವಿಶ್ವಾಸವಿರಬೇಕು. ಈಗ ಜನರು ಶಕ್ತಿ ಪ್ರಯೋಗ ಮಾಡಿ ತೋರಿಸಲಿ. ಯಾವ ರೀತಿ ಮನುಷ್ಯನು ಒಂದು ಗೇಣು ಭೂಮಿಗಾಗಿ ಹಾತೊರೆಯುತ್ತಾನೆ. ಪಿತೂರಿಗಳನ್ನು ನಡೆಸುತ್ತಾನೆ ಮತ್ತು ಮೊಕದ್ದೊಮೆಗಳನ್ನು ಹೂಡುತ್ತಾನೆ. ಅಂತಹುದೇ ತಳಮಳ ಕಳವಳ ಅಲ್ಲಾಹನ ಯಾವುದೇ ಒಂದು ಆಜ್ಞೆಯನ್ನು ಪಾಲಿಸದಿದ್ದಾಗ ಉಂಟಾಗುತ್ತದೆಯೇ? ಎಂದೂ ಇಲ್ಲ. ಮೂಢ ಮನುಷ್ಯನು ತೀವ್ರತರದ ರೋಗಗಳಿಗೆ ಒಳಗಾದಾಗ ಅಲ್ಲಾಹನನ್ನು ಕರೆಯುತ್ತಾನೆ. ಆದರೆ ಪರೀಕ್ಷಾ ರೂಪದಲ್ಲಿ ಗುಣಪಡುವಾಗ ಎಂದೂ ಮರಣವೇ ಇಲ್ಲ ಎಂಬಂತಹ ತತ್ವಗಳನ್ನು ಅನುಸರಿಸುತ್ತಾನೆ. ಸಣ್ಣ ಕಾಯಿಲೆಗಳಿಂದಲೂ ಮರಣ ಹೊಂದಿದಾಗಲೂ ಅವರ ಹೃದಯಗಳ ಮೇಲೆ ಏನು ಪರಿಣಾಮ ಬೀರುವುದಿಲ್ಲ. ಎರಡು ಮೂರು ದಿನಗಳು ಒಂದಿಷ್ಟು ಆತಂಕಪಡುತ್ತಾನೆ. ಮತ್ತೆ ಅದೇ ಅಪಹಾಸ್ಯ ಮನೋರಂಜನೆ, ಸ್ಮಶಾನಕ್ಕೆ (ಖಬರಸ್ತಾನ್) ಹೋಗುತ್ತಾರೆ. ಶವಗಳನ್ನು ಹೇಳುತ್ತಾರೆ. ಆದರೆ ನಾವು ಒಂದು ದಿನ ಆಗಲಿ ದೇವನಲ್ಲಿ ಹಾಜರಾಗಬೇಕಾಗಿದೆ ಎಂದು ಯೋಚಿಸುವುದಿಲ್ಲ. ಇದೀಗ ಸಣ್ಣಪುಟ್ಟ ಕಾಯಿಲೆ ಅವರ ಮೇಲೆ ಏನೂ ಪರಿಣಾಮ ಬೀರುತ್ತಿಲ್ಲ ಎಂದು ಅಲ್ಲಾಹನು ಕಂಡಾಗ ಬೇರೆ ವಿಧಾನ ತೆಗೆದುಕೊಳ್ಳುತ್ತಾನೆ ಮತ್ತು ಪ್ಲೇಗ್ ಮೂಲಕ ಜನರನ್ನು ಎಚ್ಚರಿಸ ಬಯಸುತ್ತಾನೆ.

**(ಮಲ್ಫೂಝಾತ್, ಸಂಪುಟ 1, ಪುಟ-233-234, ಮುದ್ರಣ ಖಾದಿಯನ್ 2018)**

**ಪವಿತ್ರ ಖುರ್‌ಆನ್ ಮೂಲಕ ಇಡೀ ಲೋಕದೊಂದಿಗೆ ಜಿಹಾದ್ ಮಾಡು. ಅದು ಮಹತ್ತರ ಜಿಹಾದ್ ಆಗಿದೆ ಅಂದರೆ ತಬ್ಲಿಲಿಗಿನ ಜಿಹಾದ್ (ಪ್ರಚಾರದ ಜಿಹಾದ್).**

**ಹದಿಮೂರು ನೂರು ವರ್ಷಗಳಲ್ಲಿಯೂ ಲೋಕದಾದ್ಯಂತ ಇಸ್ಲಾಮ್ ತಲುಪಿಲ್ಲ ಎಂದಾದರೆ ಅದಕ್ಕೆ ಕಾರಣ ಇಸ್ಲಾಮಿನ ಖಡ್ಗವು ಮೊಂಡಾಗಿತ್ತು ಎಂಬುದಲ್ಲ. ಬದಲು ಅದಕ್ಕೆ ಪ್ರಮುಖ ಕಾರಣ ಮುಸಲ್ಮಾನರು ಈ ಖಡ್ಗದಿಂದ (ಖುರ್‌ಆನ್) ಕಾರ್ಯ ಕೈಗೊಳ್ಳುವುದನ್ನು ಬಿಟ್ಟುಬಿಟ್ಟರು.**

**ಜಾಹಿದ್‌ಹುಮ್ ಬಿಹಿ ಜಿಹಾದನ್ ಕಬೀರ'** ವಚನದ ವ್ಯಾಖ್ಯಾನದಲ್ಲಿ ಸಯ್ಯದನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ಅಲ್ಲಾಹನು ಹೇಳುವನು. ನೀನು ಅವಿಶ್ವಾಸಿಗಳ ಮಾತುಗಳನ್ನು ಮನ್ನಿಸಬೇಡ. ಬದಲು ಪವಿತ್ರ ಖುರ್‌ಆನ್ ಮೂಲಕ ಲೋಕದಾದ್ಯಂತ ಜಿಹಾದ್ ಮಾಡು. ಅದು ಮಹತ್ತರ ಜಿಹಾದ್ ಆಗಿದೆ. ಅಂದರೆ ತಬ್ಲೀಗಿನ ಜಿಹಾದ್ (ಪ್ರಚಾರದ ಜಿಹಾದ್) ಅದರ ಸಮೀಪ ಹೋಗಲು ಸಹ ಇಂದಿನ ಮುಸಲ್ಮಾನರು ಹಿಂಜರಿಯುತ್ತಾರೆ. ಅಸಲ್ ಜಿಹಾದ್ ಖಡ್ಗದ ಜಿಹಾದ್ ಎಂಬ ನೆಪವೊಡ್ಡಿ ಈ ಜಿಹಾದಿನಿಂದ ದೂರ ಹೋಗುತ್ತಾನೆ. ಮತ್ತು ಖಡ್ಗದ ಜಿಹಾದಿನಿಂದ ಏಕೆ ಓಡುತ್ತಿದ್ದಾನೆಂದರೆ ಶತ್ರುಗಳು ಶಕ್ತಿಶಾಲಿಗಳಾಗಿದ್ದಾರೆಂದು. ಮೌಲ್ವಿ ಪತ್ವ ಹೊರಡಿಸುತ್ತಾನೆ.

***(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)***

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِی الْعَالَمِ ۞ شَرَّ السُّمُوْمِ عَدَاوَۃُ الصُّلَحَاءِ

**ಮೌಲ್ವಿ ಮುಹಮ್ಮದ್ ಹುಸೇನ್‌ರವರು "ಇಶಾಅತುಸ್ಸುನ್ನ" ದಲ್ಲಿ ದೇವವಾಣಿಯನ್ನು ಸಾಕ್ಷಿ ಮತ್ತು ಪುರಾವೆ ಎಂದು ಸ್ವೀಕರಿಸಿರುತ್ತಾರೆ. ಅದರ ವಿರುದ್ಧ ಸಾಬೀತುಮಾಡಿದರೆ ಅವರಿಗೆ ಒಂದು ನೂರು ರೂಪಾಯಿಗಳ ಬಹುಮಾನ.**

ಹಿಂದಿನ ಸಂಚಿಕೆಗಳಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲವಿ ಅವರ ಮಧ್ಯೆ ಒಂದು ಚರ್ಚೆ ಆಯಿತು. ಅದು ಲೂಧಿಯಾನ ನಗರದಲ್ಲಿ 20 ರಿಂದ 31 ಜುಲಾಯಿ 1891 ಚರ್ಚೆಯ ವಿಷಯವು ಹಝ್ರತ್ ಮಸೀಹ್ ಮೌಊದ್(ಅ) ––– "ಹಝ್ರತ್ ಈಸಾ(ಅ) ರವರ ಜೀವನ ಮರಣ ಎಂದು ನಿರ್ಣಯಿಸಿದ್ದರು. ಆಗ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲವಿ ಬರೆದಿದ್ದರು. ಮೊದಲು ನಿಮ್ಮ ವಾಗ್ದತ್ತ ಮಸೀಹರಾಗುವ ಕುರಿತು ಚರ್ಚಿಸೋಣ. ಮತ್ತೆ ಹಝ್ರತ್ ಮಸೀಹರ ಮರಣ ಹೊಂದಿದ ಕುರಿತು. ಆಗ ಹಝ್ರತ್ ಮಸೀಹ್ ಮೌಊದ್(ಅ) ಬರೆದಿದ್ದರು. "ಈ ಚರ್ಚೆಯಲ್ಲಿ ಮೂಲ ವಿಷಯವೇ ಮಸೀಹ್ ಇಬ್ನು ಮರಿಯಮ್ ಅವರ ದೇವನ ಮರಣ ಕುರಿತೇ ಆಗಿದೆ. ನನಗೆ ಆದ ದೇವವಾಣಿಯಲ್ಲಿಯೂ ಅದನ್ನೇ ಅಸರು ಎಂದು ಹೇಳಲಾಗಿದೆ.  ಏಕೆಂದರೆ ದೇವವಾಣಿಯಲ್ಲಿ ಮಸೀಹ್ ಇಬ್ನು ಮರಿಯಮ್ ಮರಣ ಹೊಂದಿರುವರು. ಅವರ ಬದಲಿ ರೂಪದಲ್ಲಿ ವಾಗ್ದಾನ ಪ್ರಕಾರ ನಿನ್ನ ಆಗಮನ ಆಗಿದೆ. ಆದುದರಿಂದ ಮೊದಲ ಮತ್ತು ಅಸಲು ದೇವವಾಣಿಯ ಉದ್ದೇಶ ಇದೇ ಆಗಿದೆ. ಮಸೀಹ್ ಇಬ್ನು ಮರಿಯಮ್ ಮರಣ ಹೊಂದಿರುವರು ಎಂದು ಇದೀಗ ಸ್ಪಷ್ಟವಿದೆ. ನೀವು ಹಝ್ರತ್ ಮಸೀಹ್ ಅವರ ಜೀವಂತಿಕೆ ಸಾಬೀತುಪಡಿಸಿದರೆ ಹೇಳಿದಂತೆ ದೇವವಾಣಿಯ ಮೊದಲು ಉದ್ಧರಣೆಯೇ ಮಿಥ್ಯ ಎಂದಾಗುವುದು. ಹಾಗೆಯೇ ಎರಡನೆಯ ಉದ್ಧರಣೆ ಸಹ. ಏಕೆಂದರೆ ನನ್ನ ದಾವೆಯ ಮೂಲ ಮಸೀಹರ ಮರಣ ಎಂದು ಹೇಳಲಾಗಿದೆ.

ಅವರು ಹೇಳಿದರು. ನಾನು ಹೇಳುತ್ತೇನೆ, ದೃಢವಾಗಿ ಹೇಳುತ್ತೇನೆ. ನೀವು ಅಲ್ಲಾಹನ ಗ್ರಂಥ ಪವಿತ್ರ ಖುರ್‌ಆನ್‌ನಿಂದ ಮಸೀಹರು ಜೀವಂತವಿರುವರು ಎಂದು ಸಾಬೀತುಗೊಳಿಸಿದರೆ ನಾನು ನನ್ನ ದಾವೆಯಿಂದ ಹಿಂದೆ ಸರಿಯುವೆನು ಮತ್ತು ದೇವವಾಣಿಯನ್ನು ಶೈತನನ ಊಹೆಯೆಂದು ತಿಳಿದು ಪಶ್ಚಾತ್ತಾಪ ಪಡುವೆನು. (ರೂಹಾನಿ ಖಝಾಈನ್, ಸಂಪುಟ–4, ತಅರುಫ್ ಮುಬಾಹಿಸ ಲುಧಿಯಾನ ಪುಟ–XIII)

ಆದರೆ ಹಿಂದಿನ ಸಂಚಿಕೆಯಲ್ಲಿ ವಿವರಿಸಿದಂತೆ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಇಡೀ ಚರ್ಚೆಯಲ್ಲಿ "ಹದೀಸುಗಳು ವಿಶೇಷವಾಗಿ ಸಹೀ ಬುಖಾರಿ ಮತ್ತು ಸಹೀ ಮುಸ್ಲಿಂ ಹದೀಸುಗಳ ಸ್ಥಾನಮಾನವೇನು? ಎಂಬ ಚರ್ಚೆಯಲ್ಲಿ ಕಳೆದಿದ್ದಾರೆ. ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರ ಅಭಿಪ್ರಾಯವೇನೆಂದರೆ ಸಹೀಹೈನ್‌ರ ಎಲ್ಲ ಹದೀಸುಗಳು ಸಾರಸಗಟಾಗಿ ಸತ್ಯಶೋಧನೆಗಳನ್ನು ಒಪ್ಪಿಕೊಳ್ಳುವಂತಿದೆ. ಪವಿತ್ರ ಖುರ್‌ಆನ್‌ಗೆ ಹೋಲಿಕೆ ಮಾಡಿ ನೋಡುವ ಅಗತ್ಯವಿಲ್ಲ. ಅಂತೆಯೇ ಯಾವ ಹದೀಸನ್ನು ಸಹ ಅದರ ಸತ್ಯತೆಯಾಗಿ ಪವಿತ್ರ ಖುರ್‌ಆನ್ ತಾಳೆ ಹಾಕಿ ನೋಡುವ ಅಗತ್ಯವಿಲ್ಲ. ಏಕೆಂದರೆ ಸಹೀ ಹದೀಸುಗಳು ಪವಿತ್ರ ಖುರ್‌ಆನ್‌ಗೆ ವಿರುದ್ಧವಾಗಿರಲು ಸಾಧ್ಯವೇ ಇಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಅಭಿಪ್ರಾಯ ಹೀಗೆ ವಿವರಿಸಿದ್ದಾರೆ. ಖುರ್‌ಆನ್, ಹದೀಸುಗಳ ಮೇಲೆ ಪ್ರಧಾನ್ಯತೆ ವಹಿಸಿದೆ ಮತ್ತು ಹದೀಸುಗಳನ್ನು ಸತ್ಯ ಎಂದು ಘೋಷಿಸಲು ಪವಿತ್ರ ಖುರ್‌ಆನ್ ಸಾಕ್ಷ್ಯವಾಗಿದೆ. ಖುರ್‌ಆನ್‌ಗೆ ವಿರುದ್ಧವಿಲ್ಲದ ಹದೀಸುಗಳ ಮಾತ್ರ ಸ್ವೀಕಾರಾರ್ಹವಾಗಿದೆ. ಯಾವುದಾದರೊಂದು ಹದೀಸು ಖುರ್‌ಆನ್‌ನ ವಿಷಯಕ್ಕೆ ತಾಳೆಯಾಗದಿದ್ದರೆ ಅದಕ್ಕೆ ತಕ್ಕುದಾದ ಉತ್ತರ ಕಂಡುಹಿಡಿಯಬೇಕಾಗಿದೆ. ಯಾವುದೇ ರೀತಿಯಲ್ಲಿ ತಕ್ಕುದಾದ ಹೊಂದಾಣಿಕೆ ಸಿಗದಿದ್ದರೆ ಆ ಹದೀಸನ್ನು ದುರ್ಬಲ ಎಂದು ತಿಳಿದು ಅದನ್ನು ಬಿಡಬೇಕಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು. ಹದೀಸಿನ ಇಮಾಮ್‌ಗಳ ಈ ಹೇಳಿಕೆ ಯಾವುದೇ ಹದೀಸ್ ಕುರಿತು ಅವರು ಇದು ಸರಿಯಾಗಿದೆ ಎಂದು ಹೇಳಿದರೆ ಅದರ ಅರ್ಥ ಎಲ್ಲ ರೀತಿಯಿಂದ  ಸರ್ವಸ್ವ ಪರಿಪೂರ್ಣವಾಗಿದೆ ಎಂದರ್ಥವಲ್ಲ. ಅದರಲ್ಲಿ ಯಾವುದೇ ತಪ್ಪಿಲ್ಲ ಎಂದರ್ಥವಲ್ಲ. ಬದಲು ಅದರರ್ಥ ಸರಿಯಾಗಿದೆ ಎಂದರೆ ಕೇವಲ ಅದು ಅವರ ಅಭಿಪ್ರಾಯ ಮೇರೆಗೆ ಸರಿಯಾಗಿದೆ ಎಂದಾಗುವುದೇ ಹೊರತು ವಾಸ್ತವವಾಗಿಯೂ ಸರಿಯೆಂದಲ್ಲ. ಇತರ ಸಹೀ ಹದೀಸುಗಳಂತೆ ತಪ್ಪಿನ ಸಾಧ್ಯತೆ ಇರಬಹುದಾಗಿದೆ.  ಒಂದು ಹದೀಸ್ ಸರಿಯಿದ್ದಾಗಲೂ ವಾಸ್ತವದಲ್ಲಿ ಯಥಾರ್ಥ ರೂಪದಲ್ಲಿ ಸರಿಯಿಲ್ಲದಿರಬಹುದು. (ಮುಬಾಹಿಸ ಲುಧಿಯಾನ, ರೂಹಾನಿ ಖಝಾಯಿನ್ ಖಝಾಈನ್ ಸಂಪುಟ–4, ಪುಟ–25)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಈ ನಿಲುವಿನ ಸಮರ್ಥನೆಯಲ್ಲಿ ಒಂದು ಹದೀಸ್ ಐಹಿಕ ಕಾನೂನಿನ ರೀತ್ಯ ಸರಿಯಾದುದ್ದಾಗಿದೆ. ವಾಸ್ತವದಲ್ಲಿ ಸರಿಯಿಲ್ಲವಾದರೆ ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಸಾಹಿಬರಿಗೆ ಅವರ ಮಾತೇ ನೆನಪಿಸಿಕೊಟ್ಟರು. ಅದನ್ನು ಅವರು ತನ್ನ ಪತ್ರಿಕೆಯಾಗಿದ್ದ 'ಇಶಾಅತುಸ್ಸುನ್ನ' ದಲ್ಲಿ ಮುಹಿಯುದ್ದೀನ್ ಇಬ್ನು ಅರಬಿ ಬರೆದು ಪ್ರಕಟಿಸಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

ತಾವು ಸ್ವಯಂ ತನ್ನ ಪತ್ರಿಕೆ "ಇಶಾಅತುಸ್ಸುನ್ನ" ದಲ್ಲಿ ಬರೆದು ಪ್ರಕಟಿಸಿದ್ದೀರಿ. ಹದೀಸುಗಳ ಕುರಿತು ಕೆಲವು ಗಣ್ಯರ ಮಾತಾಗಿತ್ತು. ಒಬ್ಬ ದೇವವಾಣಿ ಪಡೆದ ವ್ಯಕ್ತಿ ಒಂದು ಸಹೀ ಹದೀಸನ್ನು ದೇವವಾಣಿ ಪ್ರಕಾರ ದುರ್ಬಲ ಎಂದು ಹೇಳಬಹುದಾಗಿದೆ ಮತ್ತು ಒಂದು ದುರ್ಬಲ ಹದೀಸನ್ನು ದೈವಿಕ ನೀತಿ ಪ್ರಕಾರ ಸರಿ ಎಂದು ಹೇಳಬಹುದಾಗಿದೆ. ಇದೀಗ ನಾನು ಪ್ರಶ್ನಿಸುವುದೇನಂದರೆ. ಪರಿಸ್ಥಿತಿ ಹೀಗಿರುವಾಗ ಯಾವುದೇ ಬುಖಾರಿ ಅಥವಾ ಮುಸ್ಲಿಮ್‌ನ ಹದೀಸ್‌ಗಳನ್ನು ದೈವಿಕ ಸ್ವಪ್ನದ ಮುಖಾಂತರ ಆಧಾರ ಎಂದು ಹೇಳಿದರೆ ಇಂತಹ ಹದೀಸ್‌ಗಳನ್ನು ನಾವು ಏಕೆ ಪವಿತ್ರ ಖುರ್‌ಆನಿನ ಸಮಾನ ಎಂದು ಹೇಳಬೇಕು? ನಮ್ಮ ಸಂಪೂರ್ಣ ವಿಶ್ವಾಸವೇನಂದರೆ ನಿಸ್ಸಂದೇಹವಾಗಿಯು ಬುಖಾರಿ ಹಾಗೂ ಮುಸ್ಲಿಮ್‌ನ ಹದೀಸ್‌ಗಳು ಬಹಳ ಪರಿವೀಕ್ಷಿಸಿ ಬರೆಯಲಾಗಿದೆ ಮತ್ತು ಅದರಲ್ಲಿ ಹೆಚ್ಚಿನ ಸಂಖ್ಯೆಯ ಹದೀಸ್‌ಗಳು ಸಹ ಸರಿಯಾಗಿರಬಹುದು ಆದ ಕಾರಣ ನಾವು ಇದರಲ್ಲಿ ಉಲ್ಲೇಖವಾಗಿರುವ ಎಲ್ಲಾ ಹದೀಸ್‌ಗಳು ಸರಿಯಾಗಿರುವುದು ಎಂದು ಹೇಳಲು ಸಾಧ್ಯ." (ಅದೇ ಪುಟ–15)

ಆಗ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಬರೆದರು. ನಾನು ಮುಹಿದ್ದೀನ್ ಇಬ್ನು ಅರಬಿ ಅವರ ಹೇಳಿಕೆ ಕೇವಲ ದಾಖಲೆಗಾಗಿ ಬರೆದುಕೊಂಡಿದ್ದೇನೆಯೇ ಹೊರತು ನಾನು ಅವರ ಈ ಹೇಳಿಕೆಯನ್ನು ಸಮರ್ಥಿಸುತ್ತಿಲ್ಲ. ಅವರು ಬರೆದರು.

ನಾನು ಇಶಾಅತುಸ್ಸುನ್ನದಲ್ಲಿ ಮುಹಿಯುದ್ದೀನ್ ಇಬ್ನು ಅರಬಿ ಅವರ ಕಥನ ದಾಖಲಿಸಿಕೊಂಡಿದ್ದೇನೆ ಮತ್ತು ಕೊನೆಯಲ್ಲಿ ಟಿಪ್ಪಣಿ ಬರೆದಿದ್ದೇನೆ. ನಾವು ದೇವವಾಣಿಯಲ್ಲಿ ಅಂತಿಮ ತೀರ್ಪು ಮತ್ತು ಪುರಾವೆ ಎಂದು ಪರಿಗಣಿಸುವುದಿಲ್ಲ. (ಅದೇ ಪುಟ–24)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರ ಉತ್ತರವಾಗಿ ಹೇಳುತ್ತಾರೆ. "ನಾನು ವಿನಮ್ರವಾಗಿ ಕೇಳುವುದೇನೆಂದರೆ ನೀವು ಆ ಕಥನಕ್ಕೆ ವಿರೋಧವಾಗಿದ್ದರೆ ಯಾಕೆ ವಿನಾಕಾರಣ ಅದನ್ನು ವಿವರಿಸಿದ್ದೀರಿ? ಹಾಗಾದರೆ ನಿಮ್ಮ ಅಭಿಮತದಲ್ಲಿ ಕೊರತೆಯಿದೆ ಎಂದಾಯಿತು. ಏಕೆಂದರೆ ಮೊದಲು ಸ್ಪಷ್ಟವಾಗಿ ಮನ್ನಿಸಿದ್ದೀರಿ. ದೇವವಾಣಿ ಹೊಂದಿದವನಿಗಾಗಿ ಶರೀಅತ್ತಿಗೆ ಅನುಗುಣವಾಗಿಯೇ ಇರುತ್ತದೆ.  ಅದಲ್ಲದೇ ನೀವು ಸ್ಪಷ್ಟವಾಗಿ ಒಪ್ಪಿಕೊಂಡಿದ್ದೀರಿ. ಅಷ್ಟೇ ಅಲ್ಲ ಬುಖಾರಿ ಹದೀಸನ್ನು ಉಲ್ಲೇಖಿಸುತ್ತಾ ಈ ವಿವರಣೆಯನ್ನು ನೀಡಿದ್ದೀರಿ. ದೇವವಾಣಿಯ ಶೈತಾನನ ಹಸ್ತಕ್ಷೇಪದಿಂದ ಮುಕ್ತವಾಗಿರುತ್ತದೆ. (ಅದೇ ಪುಟ 124)

ಅದಕ್ಕೆ ಉತ್ತರವಾಗಿ ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್ ಬರೆದರು. ಇಶಾಅತುಸ್ಸುನ್ನದಲ್ಲಿ ನಾನು ಮುಹಿಮುದ್ದೀನ್ ಇಬ್ನು ಅರಬಿ ಅವರ ಕಥನವನ್ನು ದಾಖಲಿಸಿಕೊಂಡಿದ್ದು ನಿಜ. ಆದರೆ ಆ ಕುರಿತು ವ್ಯಾಖ್ಯಾನದಲ್ಲಿ ಅಂತಿಮವಾಗಿ ಪುಟ 345 ರಲ್ಲಿ ಹೀಗೆ ನನ್ನ ಅಭಿಪ್ರಾಯ ತಿಳಿಸಲಿಲ್ಲವೇ. ನಾನು ಅದರಿಂದ ಸಹಮತ ಹೊಂದಿಲ್ಲ ಎಂದು." ನಾವು ಕೇವಲ ಅಲ್ಲಾಹನ ಗ್ರಂಥ ಹಾಗೂ ಸುನ್ನತ್ ಅನುಸರಿಸುವವರಾಗಿದ್ದೇವೆ. ಅದನ್ನೇ ನಾವು ಅಂತಿಮ ತೀರ್ಪು ಎಂದು ಪರಿಗಣಿಸಿದ್ದೇವೆ. ನಾನು ಸ್ವಯಂ ದೇವವಾಣಿ ಹೊಂದಿಲ್ಲ. ಯಾವುದೇ ಸ್ವಪ್ನ ದೇವವಾನಿ ಸಜ್ಜನನ ಅನುಸರಣಕಾರನೂ ಅಲ್ಲ. ಹೀಗಿರುವಾಗ ನನ್ನ ಮೇಲೆ ಇಬ್ನು ಅರಬಿಯರ ಈ ಕಥನದನ್ವಯ ಆರೋಪ ಹಚ್ಚುವುದು ಎಷ್ಟು ಸರಿ? (ಅದೇ ಪುಟ 25)

ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿಯರ ಬೇಡಿಕೆ ಮೇರೆಗೆ ನಾನು ಎಂದು ಮತ್ತು ಎಲ್ಲಿ "ಇಶಾಅತುಸ್ಸುನ್ನ" ದಲ್ಲಿ ಈ ಮಾತುಗಳನ್ನು ಬರೆದಿದ್ದೇನೆ? ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) "ಇಶಾಅತುಸ್ಸುನ್ನ" ದ ಪುರಾವೆ ಅವರಿಗೆ ತೋರಿಸಿದರು ಮತ್ತು ಇಬ್ನು ಅರಬಿ ಅವರ ಈ ಕಥನ ಯಥಾವತ್ತಾಗಿ ಮುಹಮ್ಮದ್ ಹುಸೇನ್ ತನ್ನ ಪತ್ರಿಕೆಯಲಿ ಬರೆದಿದನ್ನೇ ದಾಖಲಿಸಿ ತೋರಿಸಿದರು.  ಮುಹಿಯುದ್ದೀನ್ ಇಬ್ನು ಅರಬಿ ಅವರ ಕಥನ ಹೀಗಿದೆ.

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಹಝ್ರ್‌ತ್ ಅಬ್ದುಲ್ಲಾ ಬಿನ್ ಉಮರ್(ರ) ಹಾಗೂ ಹಝ್ರ್‌ತ್ ಸಮಾಕ್ ಬಿನ್ ಖರ್‌ಶ(ರ) ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ನಾಲ್ಕು ದಿವಂಗತರಾದ ಮಾನ್ಯ ಮಹ್ಬೂಬ್ ಖಾನ್ ಸಾಹಿಬ್ (ಹುತಾತ್ಮ) ಪೇಶಾವರ್, ಪಾಕಿಸ್ತಾನ, ಮಾನ್ಯ ಫಖರ್ ಅಹ್ಮದ್ ಫಖರ್ ಸಹಿಬ್ ಮುರಬ್ಬಿ ಸಿಸಿಲ ಪಾಕಿಸ್ತಾನ ಮತ್ತು ಅವರ ಪುತ್ರ ಇಹ್ತುಶಾಮ್ ಅಹ್ಮದ್ ಅಬ್ದುಲ್ಲ ಸಾಹಿಬ್ ಹಾಗೂ ರಬ್ವದ ಮಿಯಾ ಅಬ್ದುಲ್ಲತೀಫ್ ಸಾಹಿಬರ ಮಗನಾದ ಸನ್ಮಾನ್ಯ ಡಾಕ್ಟರ್ ಅಬ್ದುಲ್ ಕರೀಂ ಸಾಹಿಬ್ ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನದ ಇಕ್‌ನೋಮಿಕ್ ಅಡ್‌ವೈಸರ್ ಆಗಿದ್ದರು. ನಿವೃತ್ತರಾಗಿದ್ದರು ಅವರೆಲ್ಲರ ಜನಾಝ ನಮಾಝ್ ನಿರ್ವಹಣೆ ಹಾಗೂ ಅವರ ಸದ್ಗುಣಗಳ ಪ್ರಸ್ತಾವನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13–11–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ - بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದು ಬದರೀ ಸಹಾಬರ ಬಗ್ಗೆ ಪ್ರಸ್ತಾಪಿಸಲಾಗುವುದು. ಮೊದಲು ನಾನೊಂದು ವಿವರಣೆಯನ್ನು ನೀಡಬಯಸುತ್ತೇನೆ. ಎರಡು ಖುತ್‌ಬಗಳಿಗೆ ಮುಂಚೆ ಹಝ್ರ್‌ತ್ ಮುಆಧ್ ಬಿನ್ ಜಬಲ್‌ರ(ರ) ಬಗ್ಗೆ ವಿವರಿಸಲಾಗಿತ್ತು. ಅದರಲ್ಲಿ ಒಂದು ಮುಸ್ನದ್ ಬಿನ್ ಹಂಬಲ್‌ರ ವರದಿಯಿತ್ತು. ಅದರಲ್ಲಿ ಪ್ಲೇಗಿನ ಬಗ್ಗೆ ಹೇಳಲಾಗಿತ್ತು. ಹಝ್ರ್‌ತ್ ಪೈಗಂಬರ್(ಸ) ಹೇಳಿದರು: ಸಮೀಪ ಕಾಲದಲ್ಲೇ, ನೀನು ಸಿರಿಯಾದ ಕಡೆಗೆ ಹಿಜ್ರತ್ ಮಾಡುವೆ ಮತ್ತು ನಿನ್ನ ಕೈಗಳಿಂದ ಅದರ ಮೇಲೆ ವಿಜಯ ಸಾಧಿಸಲಾಗುವುದು. ಆದರೆ ಅಲ್ಲಿ ಕುರು ಮತ್ತು ಬೊಕ್ಕೆಗಳ ಒಂದು ಕಾಯಿಲೆ ನಿನಗೆ ಬರುವುದು. ಅದು ಮನುಷ್ಯನಿಗೆಕಾಲಿನ ಪಾದದ ಮುಖಾಂತರ ಬರುವುದು. ಇದು ಸರಿಯಾದ ರೀತಿಯಲ್ಲಿ ತರ್ಜುಮೆಯಾಗುತ್ತಿರಲಿಲ್ಲ. ಅದರಿಂದ ವಿಷಯ ಏನೆಂದು ಗೊತ್ತಾಗುತ್ತಿರಲಿಲ್ಲ. ಆದ್ದರಿಂದ ಈ ವರದಿಯ ಸರಿಯಾದ ಅನುವಾದ ಪುನಃ ಹೇಳುತ್ತೇನೆ:

ಇಸ್ಮಾಈಲ್ ಬಿನ್ ಉಬೈದುಲ್ಲಾಹ್‌ರಿಂದ ವರದಿಯಾಗಿದೆ. ಹಝ್ರ್‌ತ್ ಪೈಗಂಬರ್(ಸ) ಹೇಳಿದರು: ನೀವು ಸಿರಿಯಾದ ಕಡೆಗೆ ಹಿಜ್ರತ್ ಮಾಡುವಿರಿ. ನಿಮಗೆ ಅಲ್ಲಿ ವಿಜಯ ಲಭಿಸುವುದು. ಅಲ್ಲಿ ನಿಮಗೊಂದು ಕಾಯಿಲೆ ಬರುವುದು. ಅದು ಕುರು ಅಥವಾ ಕಠಿಣವಾಗಿ ಚುಚ್ಚುವಂತಹ ಒಂದು ವಸ್ತುವಂತೆ ಆಗಿರುವುದು. ಅದು ಮನುಷ್ಯನ ಹೊಕ್ಕಳಿನ ಕೆಳಗಿನ ಭಾಗದಲ್ಲಿ ಉಂಟಾಗುವುದು. ಇದನ್ನು ತಪ್ಪಾಗಿ ಪಾದದಿಂದ ಎಂದು ಮೊದಲು ಉರ್ದುವಿನಲ್ಲಿ ತರ್ಜುಮೆ ಮಾಡಲಾಗಿತ್ತು. ವ್ಯಕ್ತಿಯ ಹೊಕ್ಕಳಿನ ಕೆಳಗೆ ಕುರು ಉಂಟಾಗುವುದು ಎಂಬುವುದಾಗಿದೆ ಇದರ ಸರಿಯಾದ ತರ್ಜುಮೆ. ಬೊಕ್ಕೆಗಳು ಉಂಟಾಗುವ ರೀತಿಯಲ್ಲಿ ಹೊಕ್ಕಳಿನ ಕೆಳಗೆ, ಶರೀರದ ಮಧ್ಯ ಭಾಗದಲ್ಲಿ ಇದು ಉಂಟಾಗುತ್ತದೆ. ಇದರ ಮೂಲಕ ಅಲ್ಲಾಹನು ಜನರಿಗೆ ಶಹಾದತ್ ನೀಡುವನು. ಇದರ ಮೂಲಕ ಅವರ ಕರ್ಮಗಳನ್ನು ಶುದ್ಧೀಕರಿಸುವನು. ಅನಂತರ ಹಝ್ರ್‌ತ್ ಮುಆಧ್ ಬಿನ್ ಜಬಲ್(ರ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನಾನು ಹಝ್ರ್‌ತ್ ಪೈಗಂಬರರಿಂದ(ಸ) ಈ ಹದೀಸನ್ನು ಕೇಳಿರುವೆ ಎಂದು ನಿನಗೆ ಗೊತ್ತು. ಆದ್ದರಿಂದ ನನಗೂ ನನ್ನ ಕುಟುಂಬಕ್ಕೂ ಇದರಿಂದ, ಈ ರೋಗದ ಹಿರಿಯ ಭಾಗವನ್ನು ನೀಡು. ಹೀಗೆ ಅವರೆಲ್ಲರೂ ಈ ಪ್ಲೇಗಿಗೆ ತುತ್ತಾದರು ಮತ್ತು ಅವರಲ್ಲಿ ಒಬ್ಬ ಹುಡುಗನು ಕೂಡ ಜೀವಂತವಾಗಿ ಉಳಿಯಲಿಲ್ಲ. ಹಝ್ರ್‌ತ್ ಮುಆಧ್‌ರ(ರ) ತೋರುಬೆರಳಲ್ಲಿ ಪ್ಲೇಗಿನ ಬೊಕ್ಕೆಯಾದಾಗ, ಅವರು ಹೀಗೆ ಹೇಳುತ್ತಿದ್ದರು: ನನಗೆ ಈ ಕುರುವಿನ ಬದಲಿಗೆ ಕೆಂಪು ಒಂಟೆ ಸಿಕ್ಕುವುದು ಕೂಡ ಇಷ್ಟವಲ್ಲ. ನಾನು ಇದರಿಂದಲೇ ಸಂತೋಷವಾಗಿದ್ದೇನೆ.

(ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–371, ಹದೀಸ್–22439, ಆಲಿಮುಲ್ ಕುತುಬ್ ಬೈರೂತ್ 1998)

ಇದಾಗಿದೆ ಇದರ ಸರಿಯಾದ ಅನುವಾದ. ಈ ಖುತ್‌ಬವನ್ನು ಅಲ್‌ಫಝ್ಲ್‌ನಲ್ಲಿ ಸರಿಪಡಿಸಿ ಪ್ರಕಟಿಸಲಾಗಿದೆ. ನಿಮ್ಮ ಮುಂದೆ ಸಹ ಅದನ್ನು ಇರಿಸಲು ಬಯಸಿದ್ದೆ.

ಈಗ ನಾನು ಹಝ್ರ್‌ತ್ ಅಬ್ದುಲ್ಲಾಹ್ ಬಿನ್ ಅಮ್‌ರರ(ರ) ಬಗ್ಗೆಗಿನ ಪ್ರಸ್ತಾಪವನ್ನು ಇಂದು ಸಹ ಮುಂದುವರಿಸುವೆನು. ಅವರ ಬಗ್ಗೆಗಿನ ಪ್ರಸ್ತಾಪ ಪುನಃ ಶುರುಮಾಡುತ್ತೇನೆ. ಹಝ್ರ್‌ತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಉಹದ್ ಯುದ್ಧದ ದಿನದಂದು ನನ್ನ ತಂದೆಯ ಶರೀರವನ್ನು ವಿರೂಪಗೊಳಿಸಲಾದ ಸ್ಥಿತಿಯಲ್ಲಿ ಹಝ್ರ್‌ತ್ ಪೈಗಂಬರರ(ಸ) ಮುಂದೆ ತರಲಾಯಿತು. ಎಂದರೆ ಅವರ ಶರೀರದ ಭಾಗಗಳನ್ನು ತುಂಡರಿಸಲಾಗಿತ್ತು. ವಿಶೇಷವಾಗಿ ಕಿವಿಗಳನ್ನು ಮತ್ತು ಮೂಗನ್ನು ಕತ್ತರಿಸಲಾಗಿತ್ತು. ಅವರ ಮಯ್ಯತ್ತನ್ನು ಹಝ್ರ್‌ತ್ ಪೈಗಂಬರರ(ಸ) ಮುಂದೆ ಇರಿಸಲಾಯಿತು. ಆಗ ನಾನು ನನ್ನ ತಂದೆಯ ಮುಖದಿಂದ ಬಟ್ಟೆಯನ್ನು ಸರಿಸಲು ಹೋದಾಗ, ಜನರು ನನ್ನನ್ನು ತಡೆದರು. ಅನಂತರ ಜನರು ಒಬ್ಬಳು ಹೆಂಗಸು ಜೋರಾಗಿ ಅಳುವುದನ್ನು ಕೇಳಿದರು. ಅವರು ಹಝ್ರ್‌ತ್ ಅಬ್ದುಲ್ಲಾಹ್ ಬಿನ್ ಅಮ್ರ್‌ರ ಮಗಳಾದ ಹಝ್ರ್‌ತ್ ಫಾತಿಮ ಬಿನ್ತ್ ಅಮ್ರ್ ಆಗಿದ್ದಾಳೆ ಎಂದು ಯಾರೋ ಹೇಳಿದರು. ಅವರು ಹಝ್ರ್‌ತ್ ಅಬ್ದುಲ್ಲಾಹ್ ಬಿನ್ ಅಮ್ರ್‌ರ ಸಹೋದರಿಯಾಗಿದ್ದಳು ಎಂದೂ ಹೇಳಲಾಗುತ್ತದೆ. ಆಗ ಹಝ್ರ್‌ತ್ ಪೈಗಂಬರ್(ಸ) ಹೇಳಿದರು: ಅಳಬೇಡ, ಏಕೆಂದರೆ ಮಲಕುಗಳು ನಿರಂತರವಾಗಿ ತಮ್ಮ ರೆಕ್ಕೆಗಳಿಂದ ಅವರಿಗೆ ನೆರಳು ನೀಡುತ್ತಿದ್ದಾರೆ. ಎಂದರೆ, ಅವರನ್ನು ಸಂರಕ್ಷಿಸುತ್ತಿದ್ದಾರೆ.

(ಅಲ್‌ಇಸ್ತಿಆಬ್ ಫೀ ಮಾರಿಫತಿಲ್ ಅಸ್ಹಾಬ್, ಭಾಗ–3, ಪುಟ–954–955, ದಾರುಲ್ ಜೀಲ್ ಬೈರೂತ್ 1992)

ಮತ್ತೊಂದು ವರದಿಯಲ್ಲಿ ಹೀಗಿದೆ: ನನ್ನ ತಂದೆಯನ್ನು ಉಹದಿನ ದಿನ ತರಲಾದಾಗ, ನನ್ನ ತಂದೆಯ ಸಹೋದರಿ ಅಳುತ್ತಿದ್ದರು. ಆಗ ನಾನು ಸಹ ಅಳಲಾರಂಭಿಸಿದೆ. ಜನರು ನನ್ನನ್ನು ಅಳುವುದರಿಂದ ತಡೆಯುತ್ತಿದ್ದರು. ಆದರೆ, ಹಝ್ರ್‌ತ್ ಪೈಗಂಬರರು(ಸ) ನನ್ನನ್ನು ತಡೆಯಲಿಲ್ಲ. ಅನಂತರ ಹಝ್ರ್‌ತ್ ಪೈಗಂಬರ್(ಸ) ಹೇಳಿದರು: ನೀವು ಅತ್ತರೂ ಅಳದಿದ್ದರೂ ದೇವದೂತರು, ಅವರ ಮೇಲೆ ನಿರಂತರವಾಗಿ ತಮ್ಮ ರೆಕ್ಕೆಗಳಿಂದ ನೆರಳು ನೀಡುತ್ತಿದ್ದಾರೆ. ಅವರನ್ನು ಗೋರಿಗೆ ಇಳಿಸುವ ತನಕ ಇದು ಮುಂದುವರಿದಿತ್ತು.

(ಅಲ್‌ಇಸ್ತಿಆಬ್ ಫೀ ಮಾರಿಫತಿಲ್ ಅಸ್ಹಾಬ್, ಭಾಗ–3, ಪುಟ–956, ದಾರುಲ್ ಜೀಲ್ ಬೈರೂತ್ 1992)

ಉಹದ್ ಯುದ್ಧದಲ್ಲಿ ಶಹೀದ್ ಆದವರ ಜನಾಝ ನಮಾಝ್ ಬಗ್ಗೆ ವಿವಿಧ ಅಭಿಪ್ರಾಯಗಳಿವೆ. ಅದರಲ್ಲಿ ತುಂಬ ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಸಹೀಹ್ ಬುಖಾರಿಯ ವರದಿಯಲ್ಲಿ ಹಝ್ರ್‌ತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ವರದಿ ಮಾಡುತ್ತಾರೆ: ಹಝ್ರ್‌ತ್ ಪೈಗಂಬರ್(ಸ) ಉಹದ್ ಯುದ್ಧದ ಶಹೀದರನ್ನು ಇಬ್ಬಿಬ್ಬರಾಗಿ ಒಂದೇ ಬಟ್ಟೆಯಲ್ಲಿ ಒಟ್ಟಿಗೆ ಇರಿಸುತ್ತಿದ್ದರು. 'ಇವರಲ್ಲಿ ಪವಿತ್ರ ಖುರ್‌ಆನ್ ಹೆಚ್ಚು ತಿಳಿದವರು ಯಾರೆಂದು ಕೇಳುತ್ತಿದ್ದರು. ಆಗ ಅವರಲ್ಲಿ ಯಾರಾದೊಬ್ಬರ ಕಡೆಗೆ ಬೊಟ್ಟು ಮಾಡಿ ತೋರಿಸಲಾಗುತ್ತಿತ್ತು. ಆಗ ಹಝ್ರ್‌ತ್ ಪೈಗಂಬರ್(ಸ) ಮೊದಲು ಅವರನ್ನು ಖಬರಿಗೆ ಇಳಿಸುತ್ತಿದರು ಹಾಗೂ ಹೀಗೆ ಹೇಳುತ್ತಿದ್ದರು: ನಾನು ಖಿಯಾಮತ್ ದಿನದಂದು ಇವರೆಲ್ಲರ ಸಾಕ್ಷಿಯಾಗಿರುವೆನು. ಅವರನ್ನು ಅವರ ರಕ್ತದೊಂದಿಗೆಯೇ ದಫನ್ ಮಾಡಲು ಆದೇಶಿಸುತ್ತಿದ್ದರು. ಅವರ ಸ್ನಾನ ಮಾಡಿಸಲಾಗುತ್ತಿರಲಿಲ್ಲ ಮತ್ತು ಅವರ ಜನಾಝ ನಮಾಝ್ ಸಹ ನಿರ್ವಹಿಸಲಾಗುತ್ತಿರಲಿಲ್ಲ.

(ಸಹೀಹ್ ಬುಖಾರಿ, ಕಿತಾಬುಲ್ ಜನಾಎಝ್, ಹದೀಸ್–1343)

ಸಹೀಹ್ ಬುಖಾರಿಯದ್ದೇ ಇನ್ನೊಂದು ವರದಿಯಲ್ಲಿ ಹಝ್ರ್‌ತ್ ಉಖ್‌ಬ ಬಿನ್ ಆಮಿರ್ ವರದಿ ಮಾಡುತ್ತಾರೆ: ಹಝ್ರ್‌ತ್ ಪೈಗಂಬರ್(ಸ)

ಒಂದು ದಿನ ಬಂದು ಉಹದ್ ಯುದ್ಧದಲ್ಲಿ ಶಹೀದ್ ಆದವರ ಜನಾಝ್ ನಮಾಝ್ ನಿರ್ವಹಿಸಿದ್ದರು. ಬುಖ್ಹಾರಿಯ ಮತ್ತೊಂದು ವರದಿಯಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಉಹದ್ ಯುದ್ಧದಲ್ಲಿ ಶಹೀದ್ ಆದವರ ಜನಾಝ್ ನಮಾಝ್ ಎಂಟು ವರ್ಷಗಳ ನಂತರ ನಿರ್ವಹಿಸಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಜನಾಎಝ್, ಹದೀಸ್–1344) (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್–4042)

ಸುನನ್ ಇಬ್ನು ಮಾಜದಲ್ಲಿ ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಉಹದ್ ಯುದ್ಧದ ಶಹೀದರನ್ನು ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ತರಲಾಗುತ್ತಿತ್ತು. ಹಝ್ರತ್ ಪೈಗಂಬರ್(ಸ) ಹತ್ತತ್ತು ಶಹೀದರ ಜನಾಝ್ ನಮಾಝ್ ನಿರ್ವಹಿಸುತ್ತಿದ್ದರು. ಹಝ್ರತ್ ಹಂಝ್ರ ಮಯ್ಯತ್ ಹಝ್ರತ್ ಪೈಗಂಬರರ(ಸ) ಸಮೀಪವೇ ಇರುತ್ತಿತ್ತು. ಇತರ ಶಹೀದರ ಮಯ್ಯತನ್ನು ನಮಾಝ್ ನಂತರ ಕೊಂಡು ಹೋಗಲಾಗುತ್ತಿತ್ತು.
(ಸುನನ್ ಇಬ್ನೆ ಮಾಜ, ಕಿತಾಬುಲ್ ಜನಾಎಝ್, ಹದೀಸ್–1513)

ಸುನನ್ ಅಬೂದಾವೂದ್‌ನಲ್ಲಿ ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಉಹದ್ ಯುದ್ಧದ ಶಹೀದರ ಸ್ನಾನ ಮಾಡಿಸಲಾಗುತ್ತಿರಲಿಲ್ಲ. ಅವರನ್ನು ಅವರ ರಕ್ತ ಎಂದರೆ ಗಾಯಗಳ ಸಮೇತ ದಫನ್ ಮಾಡಲಾಗುತ್ತಿತ್ತು. ಅವರಲ್ಲಿ ಯಾರ ಜನಾಝ್ ನಮಾಝನ್ನು ಕೂಡ ನಿರ್ವಹಿಸಲಾಗುತ್ತಿರಲಿಲ್ಲ. (ಸುನನ್ ಅಬೂದಾಊದ್, ಕಿತಾಬುಲ್ ಜನಾಎಝ್, ಹದೀಸ್–3135)

ಹಝ್ರತ್ ಅನಸ್(ರ) ವರದಿ ಮಾಡಿದ್ದಾಗಿ ಸುನನ್ ಅಬೂದಾವೂದ್‌ನಲ್ಲೇ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಹಂಝ್ರ(ರ) ಹೊರತು ಬೇರೆ ಯಾರ ಜನಾಝ್ ನಮಾಝನ್ನು ನಿರ್ವಹಿಸಿಲ್ಲ. (ಸುನನ್ ಅಬೂದಾವೂದ್, ಕಿತಾಬುಲ್ ಜನಾಎಝ್, ಹದೀಸ್–3137)

ಸುನನ್ ತಿರ್ಮಿಧಿಯ ಒಂದು ವರದಿಯಲ್ಲಿ ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಹದ್ ಯುದ್ಧದ ಶಹೀದರ ಜನಾಝ್‌ವನ್ನು ನಿರ್ವಹಿಸಿರಲಿಲ್ಲ. (ಸುನನ್ ತಿರ್‌ಮಿಧಿ, ಅಬ್ವಾಬುಲ್ ಜನಾಎಝ್, ಹದೀಸ್–1016)

ಸೀರತ್ ಇಬ್ನು ಹಿಶಾಮ್ ಮತ್ತು ಸೀರತ್ ಹಲ್‌ಬಿಯಾದಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಉಹದ್ ಯುದ್ಧದ ಶಹೀದರಲ್ಲಿ ಮೊತ್ತಮೊದಲು ಹಝ್ರತ್ ಹಂಝ್ರ(ರ) ಜನಾಝ್ ನಮಾಝ್ ನಿರ್ವಹಿಸಿದ್ದರು. ಪೈಗಂಬರರು ಜನಾಝ್‌ದಲ್ಲಿ ಏಳು ತಕ್ಬೀರ್‌ಗಳನ್ನು ಹೇಳಿದರು. ಸೀರತ್ ಹಲ್ಬಿಯಾದ ಪ್ರಕಾರ ನಾಲ್ಕು ತಕ್ಬೀರ್‌ಗಳನ್ನು ಹೇಳಿದರು ಎಂದಿದೆ. ಅದರ ನಂತರ ಇತರ ಶಹೀದರನ್ನು ಒಬ್ಬಬ್ಬರಾಗಿ ತರಲಾಗುತ್ತಿತ್ತು ಮತ್ತು ಹಝ್ರತ್ ಹಂಝ್ರ ಮಯ್ಯತ್‌ನೊಂದಿಗೆ ಇರಿಸಲಾಗುತ್ತಿತ್ತು. ಹಝ್ರತ್ ಪೈಗಂಬರ್(ಸ) ಆ ಇಬ್ಬರಿಗಾಗಿ ಜನಾಝ್ ನಮಾಝ್ ನಿರ್ವಹಿಸುತ್ತಿದ್ದರು. ಹೀಗೆ ಎಲ್ಲ ಶಹೀದರ ನಮಾಝ್ ಒಂದು ಸಲ ಮತ್ತು ಹಝ್ರತ್ ಹಂಝ್ರ(ರ) ಜನಾಝ್ ನಮಾಝ್ 72 ಸಲ ನಿರ್ವಹಿಸಿದ್ದರು. ಕೆಲವರ ಪ್ರಕಾರ 92 ಸಲ ನಿರ್ವಹಿಸಲಾಗಿದೆ ಎಂದಿದೆ. (ಸೀರತ್ ಇಬ್ನು ಹಿಶಾಮ್, ಪುಟ–395–396, ದಾರ್ ಇಬ್ನೆ ಹಝ್ಮ್ ಬೈರೂತ್ 2009) (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–337, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಚರಿತ್ರೆಯ ಒಂದು ಪುಸ್ತಕದವಾದ **ದಲಾಇಲುನ್ನುಬುವ್ವತಿ**ನಲ್ಲಿ ಹೀಗೆ ಬರೆದಿದೆ: ಹಝ್ರತ್ ಹಂಝ್ರ(ರ) ಮಯ್ಯತಿನ ಬಳಿ ಒಂಬತ್ತು ಶಹೀದರನ್ನು ಒಟ್ಟಿಗೆ ತರಲಾಗುತ್ತಿತ್ತು. ಅವರ ಜನಾಝ್ ನಮಾಝ್ ನಿರ್ವಹಿಸಲಾಗುತ್ತಿತ್ತು. ಅನಂತರ ಆ ಒಂಬತ್ತು ಮಯ್ಯತ್ತುಗಳನ್ನು ಕೊಂಡುಹೋಗಲಾಗುತ್ತಿತ್ತು ಮತ್ತು ಇತರ ಒಂಬತ್ತು ಶಹೀದರನ್ನು ತರಲಾಗುತ್ತಿತ್ತು. ಈ ರೀತಿಯಲ್ಲಿ ಎಲ್ಲ ಶಹೀದರ ಜನಾಝ್ ನಮಾಝ್ ನಿರ್ವಹಿಸಲಾಗುತ್ತಿತ್ತು. ಹಝ್ರತ್ ಪೈಗಂಬರ್(ಸ) ಪ್ರತಿಬಾರಿ ಜನಾಝ್ ನಮಾಝಿನಲ್ಲಿ ಏಳು ತಕ್ಬೀರ್‌ಗಳನ್ನು ಹೇಳುತ್ತಿದ್ದರು.
(ದಾಲಾಎಲುನ್ನಬುವ್ವ, ಭಾಗ–3, ಪುಟ–287, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಸೀರತ್ ಹಲ್‌ಬಿಯ ಮತ್ತು ದಲಾಯಿಲುನ್ನುಬುವ್ವದಲ್ಲಿ ಉಹದ್ ಯುದ್ಧದ ಶಹೀದರ ಜನಾಝ್ ನಮಾಝಿನ ಹದೀಸುಗಳ ಬಗ್ಗೆ ಚರ್ಚಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಉಹದ್ ಯುದ್ಧದ ಶಹೀದರನ್ನು ಅವರ ರಕ್ತಗಳ ಸಮೇತ ದಫನ್ ಮಾಡಲು ಆದೇಶಿದ್ದರು ಮತ್ತು ಅವರ ಸ್ನಾನ ಮಾಡಿಸಿರಲಿಲ್ಲ ಮತ್ತು ಅವರ ಜನಾಝ್ ನಮಾಝನ್ನು ನಿರ್ವಹಿಸಲಾಗಿಲ್ಲ ಎಂಬ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್‌ರ(ರ) ವರದಿಯನ್ನು ಹೆಚ್ಚು ಪ್ರಬಲ ಮತ್ತು ಸರಿಯಾದ ವರದಿಯೆಂದು ಈ ಎರಡು ಪುಸ್ತಕದಲ್ಲಿ ಬರೆಯಲಾಗಿದೆ.
(ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–338, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ದಲಾಎಲುನ್ನಬುವ, ಭಾಗ–3, ಪುಟ–287–288, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಸಹೀಹ್ ಬುಖಾರಿ, ಕಿತಾಬುಲ್ ಜನಾಎಝ್, ಹದೀಸ್–1343)

ಹಝ್ರತ್ ಇಮಾಂ ಶಾಫೀ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಹದ್ ಯುದ್ಧದ ಶಹೀದರ ಜನಾಝ್‌ವನ್ನು ನಿರ್ವಹಿಸಿರಲಿಲ್ಲ ಎಂದು ಹಲವು ವರದಿಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಹಝ್ರತ್ ಪೈಗಂಬರ್(ಸ) ಜನಾಝ್ ನಿರ್ವಹಿಸಿದ್ದರು ಮತ್ತು ಹಝ್ರತ್ ಹಂಝ್ರರ ಮೇಲೆ 70 ತಕ್ಬೀರ್ ಹೇಳಲಾಯಿತು ಎಂದು ಪ್ರಸ್ತಾಪ ಬರುವ ವರದಿಗಳು ಸರಿಯಲ್ಲ. ಹಝ್ರತ್ ಪೈಗಂಬರ್(ಸ) ಜನಾಝ್ ನಿರ್ವಹಿಸಿದ್ದರು ಎಂದು ಹಝ್ರತ್ ಉಖ್‌ಬ ಬಿನ್ ಆಮಿರ್ ವರದಿ ಮಾಡಿರುವರು. ಆದರೆ ಇದು ಎಂಟು ವರ್ಷಗಳ ನಂತರದ ಸಂಗತಿಯಾಗಿದೆ. (ಫತ್‌ಹಲ್‌ಬಾರಿ, ಸಂಪುಟ–3,ಪುಟ–249, ದಾರುರ್‍ರಯ್ಯಾನ್ ಖಾಹಿರ 1986)

ಹೇಗಿದ್ದರೂ ನಾನು ಹೇಳಿದಂತೆ ಇದರ ಬಗ್ಗೆ ತುಂಬ ಚರ್ಚೆಗಳು ನಡೆದಿದ್ದುವು. ಇನ್ನು ಕೆಲವು ವರದಿಗಳನ್ನು ಹೇಳುತ್ತೇನೆ.

ಇಮಾಮ್ ಬುಖ್ಹಾರಿಯವರು ತನ್ನ ಗ್ರಂಥದಲ್ಲಿ ಬಾಬುಸ್ಸಲಾತ್ ಅಲಶ್ಶಹೀದ್ ಎಂದರೆ, ಶಹೀದರ ಆದವರ ಜನಾಝ್ ನಮಾಝ್ ಎಂಬ ಶೀರ್ಷಿಕೆಯಡಿಯಲ್ಲಿ ಕೇವಲ ಎರಡು ಹದೀಸುಗಳನ್ನು ಕೊಟ್ಟಿದ್ದಾರೆ. ಮೊದಲ ಹದೀಸ್ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್‌ರಿಂದ ವರದಿಯಾಗಿದೆ. ಉಹದ್ ಯುದ್ಧದ ಶಹೀದರ ಸ್ನಾನ ಮಾಡಿಸಲಾಗಿರಲಿಲ್ಲ ಮತ್ತು ಅವರ ಜನಾಝ್ ನಮಾಝ್ ನಿರ್ವಹಿಸಲಾಗಿರಲಿಲ್ಲ ಎಂದು ಸ್ಪಷ್ಟವಾಗಿ ಪ್ರಸ್ತಾಪಿಸಲಾಗಿದೆ. ಆದರೆ ಇನ್ನೊಂದು ಹದೀಸಿನಲ್ಲಿ ಹಝ್ರತ್ ಉಖ್ಬ ಬಿನ್ ಆಮಿರ್(ರ) ಹೀಗೆ ವರದಿ ಮಾಡುತ್ತಾರೆ: **ಅನಿನ್ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಂ ಖರಜ ಯೌಮನ್ ಫಸಲ್ಲಿ ಅಲಾ ಅಹ್ಲಿ ಉಹದ್ ಸಲಾತುಹೂ ಅಲಲ್‌ಮಯ್ಯತ್.** ಎಂದರೆ, ಒಂದು ದಿನ ಹಝ್ರತ್ ಪೈಗಂಬರ್(ಸ) ಹೊರಟರು ಮತ್ತು ಉಹದ್ ಯುದ್ಧದಲ್ಲಿ ಶಹೀದ್ ಆದವರಿಗಾಗಿ ಜನಾಝ್ ನಮಾಝಿನ ಶೈಲಿಯಲ್ಲಿ ನಮಾಝ್ ನಿರ್ವಹಿಸಿದರು. ಇದೇ ಹದೀಸ್ ಸಹೀಹ್ ಬುಖ್ಹಾರಿಯಲ್ಲಿ ಇನ್ನೊಂದು ಕಡೆ ಉಹದ್ ಯುದ್ಧದ ಶೀರ್ಷಿಕೆಯಡಿಯಲ್ಲೂ ಬಂದಿದೆ. ಅಲ್ಲೂ ಇದೇ ಸಹಾಬಿ ಹೀಗೆ ವರದಿ ಮಾಡಿರುವರು: **ಸಲ್ಲಿ ಅಲಾ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ ಅಲಾ ಖತಲಿ ಉಹದಿನ್ ಬಅದ ಸಿಮಾನ ಸಿನೀನ ಕಲ್‌ಮುಅದ್ದ ಬಿಲ್‌ಅಖಿ ಅಹ್‌ಯಾ ವಲ್‌ಅಮ್‌ವಾತ್.** ಎಂದರೆ, ಹಝ್ರತ್ ಪೈಗಂಬರ್(ಸ) ಉಹದ್ ಯುದ್ಧದ ಶಹೀದರ ಮೇಲೆ ಎಂಟು ವರ್ಷಗಳ ನಂತರ, ಜೀವಂತವಿರುವವರನ್ನು ಅಥವಾ ಮರಣಹೊಂದಿದವರನ್ನು ಬೀಳ್ಕೊಡುವ ರೀತಿಯಲ್ಲಿ ನಮಾಝ್ ನಿರ್ವಹಿಸಿದ್ದರು.
(ಸಹೀಹ್ ಅಲ್‌ಬುಖಾರಿ, ಕಿತಾಬುಲ್ ಜನಾಎಝ್, ಹದೀಸ್–1343–1344) (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್–4042)

ಇದೇ ರೀತಿಯಲ್ಲಿ ಅಲ್ಲಾಮ ಇಬ್ನು ಹಜರ್ ಅಸ್‌ಖಲಾನಿ ಹೇಳುತ್ತಾರೆ: ಯಾರಾದರೂ ನಿಧನರಾದರೆ, ಸಾಧಾರಣವಾಗಿ ದೀರ್ಘ ಕಾಲ ಕಳೆದ ನಂತರ ಅವರ ಖಬರಿನಲ್ಲಿ ಜನಾಝ್ ನಮಾಝ್ ನಿರ್ವಹಿಸಲಾಗುವುದಿಲ್ಲ. ಆದರೆ ಹಝ್ರತ್ ಪೈಗಂಬರರ(ಸ) ಮರಣದ ಸಮಯ ಸಮೀಪವಾದಾಗ, ಹಝ್ರತ್ ಪೈಗಂಬರ್(ಸ) ಆ ಶಹೀದರ ಖಬರುಗಳ ಸಮೀಪ ಹೋಗಿ, ಅವರನ್ನು ಬೀಳ್ಕೊಡುತ್ತಾ ಅವರಿಗಾಗಿ ದುಆ ಮಾಡಿದರು ಮತ್ತು ಅವರಿಗಾಗಿ ಕ್ಷಮೆಯಾಚಿಸಿದರು. (ಫತ್‌ಹಲ್‌ಬಾರಿ ಶರಹ್ ಸಹೀಹ್ ಬುಖಾರಿ, ಸಂಪುಟ–3, ಪುಟ–249, ದಾರುರಯ್ಯಾನ್ ಲಿತ್ತುರಾಸ್ ಖಾಹಿರ, 1986)

ಉಹದ್ ಯುದ್ಧದ ಶಹೀದರಿಗೆ ಕಫನ್ ಹೊದಿಸಿದ್ದನ್ನು ಮತ್ತು ಅವರನ್ನು ದಫನ್ ಮಾಡಿದ್ದರ ಬಗ್ಗೆ ಪ್ರಸ್ತಾಪಿಸುತ್ತಾ ಸೀರತ್ ಖಾತಮುನ್ನಬಿಯ್ಯೀನಿನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಬರೆಯುತ್ತಾರೆ:

"ಮೃತದೇಹಗಳನ್ನು ನೋಡಿದ ನಂತರ ಕಫನ್ ಹೊದಿಸುವ ಕೆಲಸ ಶುರುವಾಯಿತು. ಶಹೀದರ ಶರೀರಗಳಲ್ಲಿರುವ ಬಟ್ಟೆಯನ್ನು ಹಾಗೆಯೇ ಇರಿಸಲು, ಶಹೀದರ ಸ್ನಾನವನ್ನು ಮಾಡಿಸದಿರಲು ಮತ್ತು ಯಾರ ಬಳಿಯಲ್ಲಾದರೂ ಕಫನ್ ಮಾಡಿಸಲು ಹೆಚ್ಚಿನ ಬಟ್ಟೆಯಿರುವುದಾದರೆ, ಅದನ್ನು ಧರಿಸಿದ ಬಟ್ಟೆಗಳ ಮೇಲೆಯೇ ಹೊದಿಸಲು ಹಝ್ರತ್ ಪೈಗಂಬರ್(ಸ) ಹೇಳಿದರು. ಜನಾಝ್ ನಮಾಝ್ ಕೂಡ ಆಗ ನಿರ್ವಹಿಸಲಾಗಿರಲಿಲ್ಲ. ಹೀಗೆ ಸ್ನಾನ ಮಾಡಿಸದೇ, ಜನಾಝ್ ನಮಾಝ್ ನಿರ್ವಹಿಸದೇ ಶಹೀದರನ್ನು ದಫನ್ ಮಾಡಿಸಲಾಯಿತು. ಸಾಮಾನ್ಯವಾಗಿ ಒಂದೊಂದು ಬಟ್ಟೆಯಲ್ಲಿ ಇಬ್ಬರು ಸಹಾಬಿಯರನ್ನು ಕಫನ್ ಮಾಡಿಸಿ ಒಟ್ಟಿಗೆ ದಫನ್ ಮಾಡಲಾಗುತ್ತಿತ್ತು. ಹೆಚ್ಚು ಪವಿತ್ರ ಖುರ್‌ಆನ್ ತಿಳಿದವರನ್ನು ಹಝ್ರತ್ ಪೈಗಂಬರರ(ಸ) ನಿರ್ದೇಶನದ ಪ್ರಕಾರ ಗೋರಿಗೆ ಮೊದಲು ಇಳಿಸಲಾಗುತ್ತಿತ್ತು. ಅವರ ಜನಾಝ್ ನಮಾಝನ್ನು ಆ ವೇಳೆ ನಿರ್ವಹಿಸಿರಲಿಲ್ಲವಾದರೂ, ಅನಂತರ ಹಝ್ರತ್ ಪೈಗಂಬರ್(ಸ) ತನ್ನ ಮರಣಕ್ಕೆ ಸ್ವಲ್ಪ ಮುಂಚೆ ವಿಶೇಷವಾಗಿ ಉಹದ್ ಯುದ್ಧದ ಶಹೀದರ ಜನಾಝ್

ನಮಾಝ್‌ನ್ನು ನಿರ್ವಹಿಸಿದ್ದರು." (ಸೀರತ್ ಖಾತಮುನ್ನಬೀಈನ್(ಸ) ಪುಟ–501–502)

ಇವೆಲ್ಲವನ್ನು ಹಝ್ರತ್ ಬಶೀರ್ ಅಹ್ಮದ್ ಸಾಹಿಬರು ವಿವಿಧ ಚರಿತ್ರೆಗಳ ಅಧ್ಯಾಯನ ಮಾಡಿ ಬರೆದಿದ್ದರು. ಉಹದ್ ಯುದ್ಧದ ಶಹೀದರಿಗಾಗಿ ಹಝ್ರತ್ ಪೈಗಂಬರ್(ಸ) ಜನಾಝ ನಮಾಝ್ ಅಥವಾ ದುಆ ಮಾಡಿರಬಹುದು. ಹೇಗಿದ್ದರೂ ಬಹಳ ನೋವಿನಿಂದ ಅವರಿಗಾಗಿ ಜನಾಝ ನಮಾಝ್ ನಿರ್ವಹಿಸಲಾಗಿತ್ತು ಮತ್ತು ಬಹಳ ನೋವಿನಿಂದ ಅವರಿಗಾಗಿ ದುಆ ಮಾಡಲಾಗಿತ್ತು. ಮೊದಲು ಪ್ರಸ್ತಾಪಿಸದಂತೆ ಅವರಿಗಾಗಿ ದುಆ ಮಾಡಿರಬಹುದು. ಪ್ರತಿಯೊಂದು ಖಬರಿನ ಸಮೀಪಕ್ಕೆ ಹೋಗಿ ಅವರಿಗಾಗಿ ಬಹಳ ನೋವಿನಿಂದ ದುಆ ಮಾಡಿರಬಹುದು.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ನಾನು ನನ್ನ ತಂದೆಗಾಗಿ ಉಹದ್ ಯುದ್ಧದ ಆರು ತಿಂಗಳ ನಂತರ ಖಬರ್ ತಯಾರುಮಾಡಿದೆ. ಅವರನ್ನು ಅದರಲ್ಲಿ ದಫನ್ ಮಾಡಿದೆ. ನೆಲದೊಂದಿಗೆ ಸೇರಿದ್ದ ಕೆಲವು ಕೂದಲುಗಳ ಹೊರತುಪಡಿಸಿ, ಅವರ ಶರೀರದಲ್ಲಿ ಯಾವ ಬದಲಾವಣೆಯನ್ನು ನಾನು ಕಂಡಿರಲಿಲ್ಲ. (ಅಸದುಲ್ ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–3,ಪುಟ–344, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ಹೇಳಿದ್ದಾಗಿ ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ: ಉಹದ್ ಯುದ್ಧದ ವೇಳೆಯಲ್ಲಿ ಒಂದು ಖಬರಿನಲ್ಲಿ ಇಬ್ಬರನ್ನು ದಫನ್ ಮಾಡಲಾಗಿತ್ತು. ನನ್ನ ತಂದೆಯೊಡನೆ ಸಹ ಒಬ್ಬ ಸಹಾಬಿಯನ್ನು ದಫನ್ ಮಾಡಲಾಗಿತ್ತು. ಆರು ತಿಂಗಳ ನಂತರ, ನಾನು ನನ್ನ ತಂದೆಯ ಮಯ್ಯತ್ತನ್ನು ಬೇರೆ ಖಬರಿನಲ್ಲಿ ಒಬ್ಬಂಟಿಯಾಗಿ ದಫನ್ ಮಾಡಲು ಬಯಸಿದೆ. ಹೀಗೆ ಅವರನ್ನು ಖಬರಿನಿಂದ ಹೊರಗೆ ತೆಗೆದಾಗ, ಅವರ ಶರೀರದ ಅಲ್ಪ ಮಾಂಸ ಭಾಗ ಹೊರತು ಬೇರೆಲ್ಲೂ ಅವರಲ್ಲಿ ಬದಲಾವಣೆಯನ್ನು ಕಾಣಲಿಲ್ಲ. (ಅತ್ತಬಖಾತುಲ್ ಕುಬ್ರ, ಭಾಗ–3, ಪುಟ–425, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಉಹದ್ ಯುದ್ಧದ 46 ವರ್ಷಗಳ ನಂತರ ಹಝ್ರತ್ ಅಮೀರ್ ಮುಆವಿಯಾ ತನ್ನ ಖಿಲಾಫತ್ ಕಾಲದಲ್ಲಿ ಒಂದು ಕಾಲುವೆಯನ್ನು ನಿರ್ಮಿಸಿದ್ದರು. ಅದರ ನೀರು ಉಹದ್ ಯುದ್ಧದ ಶಹೀದರ ಖಬರುಗಳಲ್ಲಿ ಪ್ರವೇಶಿಸಿತ್ತು. ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಮತ್ತು ಹಝ್ರತ್ ಅಮ್ರ್ ಬಿನ್ ಜಮೂಹ್‌ರ ಖಬರಿನಲ್ಲೂ ನೀರು ಪ್ರವೇಶಿಸಿತ್ತು. ಅವರ ಖಬರನ್ನು ತೋಡಲಾದಾಗ, ಅವರ ಮೇಲೆ ಎರಡು ಚಾದರಗಳು ಇದ್ದುವು. ವರದಿಗಾರ ಹೇಳುತ್ತಾರೆ: ಅವರ ಮುಖಗಳಲ್ಲಿ ಗಾಯಗಳಿದ್ದುವು. ಅವರ ಕೈಗಳು ಅವರ ಗಾಯಗಳ ಮೇಲಿದ್ದುವು. ಗಾಯಗಳಿಂದ ಕೈಗಳನ್ನು ಸರಿಸಲಾದಾಗ, ಗಾಯಗಳಿಂದ ರಕ್ತ ಹರಿಯತೊಡಗಿತ್ತು. ಅವರ ಕೈಗಳನ್ನು ಅವುಗಳ ಮೇಲೆ ಪುನಃ ಇರಿಸಲಾದಾಗ, ರಕ್ತ ಹರಿಯುವುದು ನಿಂತುಹೋಯಿತು. ಈ ವರದಿ ಸರಿಯೆಂದು ತೋರುತ್ತಿಲ್ಲ. ಕೆಲವು ಚರಿತ್ರೆ ಪುಸ್ತಕಗಳಲ್ಲಿ ಬರೆಯಲಾಗಿದೆ. ಚರಿತ್ರೆಗಳನ್ನು ಓದುವವರೂ ಇದ್ದಾರೆ. ಅವರಿಗಾಗಿ ವಿವರಿಸದಷ್ಟೆ. ಇದು ಅತಿಶಯೋಕ್ತಿಯ ವರ್ಣನೆಯಾಗಿರಬಹುದು. ಹೇಗಿದ್ದರೂ ಹೀಗೆ ಆಗುವುದು ಸಾಧ್ಯವಲ್ಲ. ಈ ರೀತಿಯ ವರದಿಗಳು ಸಹ ನಡುವೆಯಲ್ಲಿ ಬರುತ್ತವೆ. ಅವುಗಳು ಕೂಡ ವಿಮರ್ಶನಾತ್ಮಕವಾದುದಾಗಿದೆ.

ಜಾಬಿರ್ ಬಿನ್ ಅಬ್ದುಲ್ಲಾಹ್ ಹೇಳುತ್ತಾರೆ: ನಾನು ನನ್ನ ತಂದೆಯನ್ನು ಖಬರಿನಲ್ಲಿ ನೋಡಿದೆ. ಅವರು ನಿದ್ದೆ ಹೋಗಿರುವಂತೆ ತೋರುತ್ತಿತ್ತು. ಆರು ತಿಂಗಳ ನಂತರ ಅವರ ಮಯ್ಯತ್ತನ್ನು ಹೊರಗೆ ತೆಗೆಯಲಾಗಿತ್ತು. ಆಗ ಅವರ ತಂದೆಯ ಶರೀರದಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳಾಗಿದ್ದುವು ಎಂದು ಅವರು ಹೇಳುತ್ತಾರೆ. (ಅತ್ತಬಖಾತುಲ್ ಕುಬ್ರ, ಭಾಗ–3, ಪುಟ–424, ದಾರುಲ್‌ಕುತುಬ್ ಇಲ್‌ಮಿಯ ಬೈರೂಥ್ 1990) (ಕಿತಾಬುಲ್ ಮಗಾಝಿ, ಸಂಪುಟ–1, ಪುಟ–267, ಆಲಿಮುಲ್ ಕುತುಬ್ ಬೈರೂತ್ 1984)

ಹೀಗಿರುವಾಗ 46 ವರ್ಷಗಳ ನಂತರ ತೆಗೆಯಲಾದ ಶರೀರದಲ್ಲಿ ಏನೂ ಬದಲಾವಣೆ ಇಲ್ಲದಿರುವುದು ಮತ್ತದು ಎಲುಬು ಮಾತ್ರವಾಗಿ ಉಳಿಯದಿರುವುದು ಪ್ರಕೃತಿ ನಿಯಮಕ್ಕೆ ವಿರುದ್ಧವಾದ ಸಂಗತಿಯಾಗಿದೆ. ಹೀಗೆ ಆಗಲು ಸಾಧ್ಯವಿಲ್ಲ.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರನ್ನು(ಸ) ನಾನು ಭೇಟಿಯಾದೆ. ಅವರು ಕೇಳಿದರು: ನೀನು ಏಕೆ ದುಃಖಿತನಾಗಿದ್ದೀಯಾ? ನಾನು ಹೇಳಿದೆ: ಯಾ ರಸೂಲಲ್ಲಾಹ್, ನನ್ನ ತಂದೆ ಉಹದ್ ಯುದ್ಧದಲ್ಲಿ ಶಹೀದ್ ಆದರು. ಅವರು ಸಾಲಗಳನ್ನು ಮತ್ತು ಮಕ್ಕಳನ್ನು ಬಿಟ್ಟುಹೋಗಿದ್ದಾರೆ. ಹಝ್ರತ್ ಪೈಗಂಬರ್(ಸ) ಕೇಳಿದರು: ಅಲ್ಲಾಹನು ನಿನ್ನ ತಂದೆಯನ್ನು ಭೇಟಿಯಾದ ಬಗ್ಗೆ ನಿನಗೆ ಸುವಾರ್ತೆ ತಿಳಿಸಲೇ? ಹೇಳಿರಿ, ಯಾ ರಸೂಲಲ್ಲಾಹ್ ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಮರೆಯಲ್ಲಿದ್ದುಕೊಂಡಲ್ಲದೆ ಯಾರೊಡನೆಯೂ ಸಂಭಾಷಣೆ ನಡೆಸುವುದಿಲ್ಲ. ಆದರೆ ನಿನ್ನ ತಂದೆಯನ್ನು ಅಲ್ಲಾಹನು ಜೀವಂತಗೊಳಿಸದನು ಮತ್ತು ಅವರೊಡನೆ ಮುಖಾಮುಖಿಯಾಗಿ ಸಂಭಾಷಣೆ ನಡೆಸಿದನು. ಹೇ ನನ್ನ ದಾಸ, ನೀನು ನನ್ನೊಡನೆ ಬೇಡು, ನಾನು ನಿನಗೆ ನೀಡುವೆನು ಎಂದು ಅಲ್ಲಾಹನು ಅವರೊಡನೆ ಹೇಳಿದನು. ಅವರು ಹೇಳಿದರು: ಹೇ ನನ್ನ ಪರಿಪಾಲಕ, ನಿನ್ನ ಮಾರ್ಗದಲ್ಲಿ ಕೊಲ್ಲಲ್ಪಡಲು ನನ್ನನ್ನು ಪುನಃ (ಭೂಮಿಗೆ ಕಳಿಸಿ) ಜೀವಂತಗೊಳಿಸು. ಇನ್ನೊಂದು ವರದಿಯಲ್ಲಿ ಹೀಗಿದೆ ಹಝ್ರತ್ ಅಬ್ದುಲ್ಲಾಹ್ ಹೇಳಿದರು: ಹೇ ನನ್ನ ದೇವಾ, ನಾನು ನಿನಗೆ ಸಲ್ಲಬೇಕಾದ ಆರಾಧನೆಯ ಹಕ್ಕನ್ನು ಸರಿಯಾಗಿ ಈಡೇರಿಸಿಲ್ಲ. ನೀನು ನನ್ನನ್ನು ಪುನಃ ಭೂಮಿಗೆ ಕಳುಹಿಸಬೇಕೆಂಬುವುದಾಗಿದೆ ನನ್ನ ಬಯಕೆ. ಹಾಗಾದರೆ, ನಾನು ನಿನ್ನ ನಬಿಯ(ಸ) ಒಟ್ಟಿಗೆ ಇದ್ದುಕೊಂಡು ನಿನ್ನ ಮಾರ್ಗದಲ್ಲಿ ಹೋರಾಡುವೆನು ಮತ್ತು ನಿನ್ನ ಮಾರ್ಗದಲ್ಲಿ ಪುನಃ ಶಹೀದ್ ಆಗುವೆನು. ಅಲ್ಲಾಹನು ಹೇಳುವನು: ಒಂದು ಸಲ ಮೃತಪಟ್ಟವನನ್ನು ಮರಳಿ ಭೂಮಿಗೆ ಕಳುಹಿಸುವುದಿಲ್ಲ ಎಂದು ನಾನು ತೀರ್ಮಾನ ಮಾಡಿದ್ದೇನೆ. ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಅಲ್ಲಾಹನೊಡನೆ ಹೀಗೆ ವಿನಂತಿಸಿದರು: ಹೇ ಅಲ್ಲಾಹ್, ಹೇ ನನ್ನ ಪರಿಪಾಲಕ, ನನ್ನ ಹಿಂದೆ ಇರುವವರಿಗೂ ಈ ಸಂಗತಿಯನ್ನು ತಲುಪಿಸು. ಆ ಸಂದರ್ಭದಲ್ಲಿ ಅಲ್ಲಾಹನು ಈ ಆಯತ್ತನ್ನು ಅವತೀರ್ಣಗೊಳಿಸಿದನು: **ವಲಾ ತಹ್‌ಸಬನ್ನಲ್ಲಧೀನ ಖತಲೂ ಫೀ ಸಬೀಲಿಲ್ಲಾಹಿ ಅಮ್‌ವಾತನ್ ಬಲ್ ಅಹ್‌ಯಾಉ ಇಂದ ರಬ್ಬಿಹಿಂ ಯುರ್‌ಝುಖೂನ್**. ಎಂದರೆ ಅಲ್ಲಾಹನ ಮಾರ್ಗದಲ್ಲಿ ಕೊಲ್ಲಲ್ಪಟ್ಟವರಿ ಮೃತರೆಂದು ನೀವು ಭಾವಿಸಬೇಡಿರಿ. ಅವರು ತಮ್ಮ ಒಡೆಯನ ಬಳಿ ಜೀವಂತರು; ಅವರಿಗೆ ಆಹಾರ ನೀಡಲಾಗುತ್ತದೆ. (ಸುನನ್ ತಿರ್‌ಮಿದಿ, ಅಬ್ವಾಬ್ ತಫ್‌ಸೀರುಲ್ ಖುರ್‌ಆನ್, ಹದೀಸ್–3010) (ದಲಾಎಲುನ್ನಬುವ್ವ, ಭಾಗ–3, ಪುಟ–298, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಅಲ್‌ಇಸ್ತಿಆಬ್ ಫೀ ಮಾರಿಫತಿಲ್ ಅಸ್‌ಹಾಬ್, ಭಾಗ–3, ಪುಟ–955–956, ದಾರುಲ್ ಜೀಲ್ ಬೈರೂತ್ 1992)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್‌ರ(ರ) ಪ್ರಸ್ತಾಪದಲ್ಲಿ ಹಿಂದೆಯೂ ಈ ವಚನವನ್ನು ಓದಿದ್ದೆ. ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್‌ರೊಂದಿಗೆ(ರ) ಅಲ್ಲಾಹನ ಸಂಭಾಷಣೆಯ ಘಟನೆಯ ವಿವರಣೆಯನ್ನು ಹಝ್ರತ್ ಖಲೀಫತುಲ್ ಮಸೀಹ್ ರ್‍ರಾಬಿಅ್ ರಹ್ಮಹುಲ್ಲಾಹ್ ತನ್ನ ಖಿಲಾಫತಿಗೆ ಮುಂಚಿನ ತನ್ನೊಂದು ಭಾಷಣದಲ್ಲಿ ಹೀಗೆ ಹೇಳಿದ್ದರು:

ಈ ಘಟನೆಯಲ್ಲಿ ಹಲವು ರೀತಿಯ ಸೌಂದರ್ಯಗಳು ತುಂಬಿತುಳುಕ್ಕುತ್ತಿದೆ. ಯಾವ ಭಾಗದಿಂದ ಅದನ್ನು ನೋಡುವುದಾದರೂ ಒಂದು ಹೊಸ ಬಣ್ಣ ಅದರಲ್ಲಿ ಕಾಣಬಹುದಾಗಿದೆ. ಇದರಿಂದ ಹಲವು ಸಂಗತಿಗಳ ಬಗ್ಗೆ ನಮಗೆ ಗೊತ್ತಾಗುತ್ತದೆ. ಹಝ್ರತ್ ಪೈಗಂಬರರ(ಸ) ಸಂಬಂಧ ಪರಿಪಾಲಕನಾದ ಅಲ್ಲಾಹನೊಂದಿಗೆ ಹೇಗೆ ಸ್ಥಾಪಿತವಾಗಿತ್ತು ಎಂದು ತಿಳಿದುಬರುತ್ತದೆ. ಅಲ್ಲಾಹನ ದಾಸರನ್ನು ಹಝ್ರತ್ ಪೈಗಂಬರ್(ಸ) ಕರುಣೆಯ ದೃಷ್ಟಿಯಿಂದ ನೋಡುತ್ತಿದ್ದರು. ಅಲ್ಲಾಹನೊಂದಿಗೂ ಹೃದಯವನ್ನು ಜೋಡಿಸಿಟ್ಟಿದ್ದರು. ತನ್ನೊಂದು ಮಗ್ಗುಲನ್ನು ಸಹಾಬರಿಗಾಗಿ ಬಾಗಿಸಿ ಇಟ್ಟಿದ್ದರು. ಇನ್ನೊಂದು ಭಾಗವನ್ನು ಅತ್ಯುನ್ನತ ಸ್ನೇಹಿತನಾದ ಅಲ್ಲಾಹನೊಂದಿಗೆ ಸೇರಿಸಿ ಇಟ್ಟಿದ್ದರು. ಹಝ್ರತ್ ಪೈಗಂಬರ್(ಸ) ಸಮಾಧಾನದ ಸ್ಥಿತಿಯಲ್ಲಿ ಅಲ್ಲಾಹನೊಂದಿಗೂ ಅಲ್ಲಾಹನ ಸೃಷ್ಟಿಗಳೊಂದಿಗೂ ನಿಕಟ ಸಂಬಂಧವನ್ನು ಇರಿಸುತ್ತಾ ಅತ್ಯುನ್ನತವಾದ ಸ್ಥಾನದಲ್ಲಿ ನೆಲೆನಿಂತಿದ್ದರು. ಯುದ್ಧದ ಸ್ಥಿತಿಯಲ್ಲೂ ಒಂದು ಕ್ಷಣಕ್ಕೂ ಅಲ್ಲಾಹನಿಂದ ಬೇರ್ಪಟ್ಟಿರಲಿಲ್ಲ. ಹಝ್ರತ್ ಪೈಗಂಬರ್(ಸ) ಒಂದು ಕಡೆ ತನ್ನ ದೃಷ್ಟಿಯನ್ನು ಯುದ್ಧ ಮೈದಾನದ ಮೇಲ್ನೋಟಗಾರನೆಂದು ನೆಲೆಯಲ್ಲಿ ಇರಿಸಿದ್ದರು. ಮತ್ತೊಂದು ದೃಷ್ಟಿ ಪ್ರಿಯಕರನಾದ ಅಲ್ಲಾಹನ ಸೌಂದರ್ಯದ ದೃಶ್ಯವನ್ನು ನೋಡುವುದರಲ್ಲಿ ಮಗ್ನವಾಗಿತ್ತು. ಒಂದು ಕಿವಿ ಕರುಣೆಯಿಂದ ಸಹಾಬರ ಕಡೆಗೆ ಬಾಗಿತ್ತು. ಇನ್ನೊಂದು ಕಿವಿ ಉನ್ನತ ಆಕಾಶದಿಂದ ತನ್ನ ಪ್ರಭುವಿನ ಮಧುರವಾದ ಸಂಭಾಷಣೆ ಕೇಳುವುದರಲ್ಲಿ ಮಗ್ನವಾಗಿತ್ತು. ಕೈಗಳು ಕೆಲಸಗಳಲ್ಲಿ ನಿರತವಾಗಿದ್ದರೂ, ಹೃದಯ ಅಲ್ಲಾಹನ ಸ್ಮರಣೆಯಲ್ಲಿ ನಿರತವಾಗಿದ್ದುವು. ಹಝ್ರತ್ ಪೈಗಂಬರ್(ಸ) ಸಹಾಬರನ್ನು ಸಾಂತ್ವನಪಡಿಸುತ್ತಿರುವಾಗ, ಅಲ್ಲಾಹನು ಹಝ್ರತ್ ಪೈಗಂಬರರನ್ನು ಸಾಂತ್ವನಗೊಳಿಸುತ್ತಿದ್ದನು. ಅಬ್ದುಲ್ಲಾಹ್ ಬಿನ್ ಅಮ್ರ್‌ರ ಹೃದಯದ ಅವಸ್ಥೆಯ ಬಗ್ಗೆ ಅಲ್ಲಾಹನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸುತ್ತಾ ನೀಡಿದ್ದ ಸಂದೇಶವೇನೆಂದರೆ, ಹೇ ಎಲ್ಲರಿಗಿಂತ ನನ್ನನ್ನು ಪ್ರೀತಿಸುವ ಮಹಾನುಭಾವ, ನಿನ್ನೊಡನೆ ಸಹ ಪ್ರೇಮದ ಭಾವನೆಯನ್ನು ನನ್ನ ಜ್ಞಾನವಂತರಾದ ದಾಸರ ಹೃದಯದಲ್ಲಿ ತುಂಬಿರುವುದನ್ನು ನೀನು ನೋಡು. ಇಹಲೋಕವನ್ನು ತ್ಯಜಿಸಿದ ನಂತರವೂ ನಿನ್ನ ಬಗ್ಗೆಗಿನ ಆಲೋಚನೆ ಅವರನ್ನು ಚಿಂತಿತಗೊಳಿಸುತ್ತಿದೆ. ನಿನ್ನನ್ನು ಯುದ್ಧ ಮೈದಾನದಲ್ಲಿ ಒಬ್ಬಂಟಿಯಾಗಿ ಬಿಟ್ಟುಹೋದ ಕಾರಣದಿಂದ ಎಷ್ಟು ದುಃಖಿತರಾಗಿದ್ದಾರೆ ಎಂದು ನೋಡು. ನಿನ್ನ ಪ್ರೀತಿಯ ಮುಂದೆ

ಅವರಿಗೆ ಸ್ವರ್ಗದ ಸಹ ಲಾಲಸೆಯಿಲ್ಲ. ಅವರ ಸ್ವರ್ಗ ಕೇವಲ ಏನೆಂದರೆ, ಚೂಪಾದ ಖಡ್ಗಗಳಿಂದ ಪದೇ ಪದೇ ತುಂಡರಿಸಬೇಕೆಂದಾಗಿದೆ. ಆದರೂ ನಿನ್ನೊಂದಿಗೆ ಇರಬೇಕು, ಪುನಃ ನಿನ್ನೊಂದಿಗೆ ಇರಬೇಕು ಮತ್ತು ಪುನಃ ನಿನ್ನೊಂದಿಗೆ ಇರಬೇಕು ಎಂದು ಮಾತ್ರವಾಗಿದೆ. (ಖುತ್‌ಬಾತೆ ತಾಹಿರ್, ಜಲ್ಸ ಸಲಾನ ಭಾಷಣ 1979, ಪುಟ–349–350)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್(ರ) ನಿಧನರಾದಾಗ, ಅವರು ಸಾಲಗಾರರಾಗಿದ್ದರು. ಸಾಲಕೊಟ್ಟವರು ತಮ್ಮ ಸಾಲಗಳಲ್ಲಿ ಸ್ವಲ್ಪ ರಿಯಾಯತಿಯನ್ನು ಮಾಡಿಕೊಡಲು ಹೇಳುವಂತೆ ನಾನು ಹಝ್ರತ್ ಪೈಗಂಬರರನ್ನು(ಸ) ವಿನಂತಿಸಿದೆ. ಆಗ ಹಝ್ರತ್ ಪೈಗಂಬರ್(ಸ) ಸಾಲಕೊಟ್ಟವರ ಮುಂದೆ ನನ್ನ ವಿನಂತಿಯನ್ನು ಇರಿಸಿದರು. ಆದರೆ ಸಾಲಕೊಟ್ಟವರು ಕಡಿಮೆ ಮಾಡಲು ತಯಾರಾಗಲಿಲ್ಲ. ಆಗ ಹಝ್ರತ್ ಪೈಗಂಬರ್(ಸ) ನನ್ನೊಡನೆ ಹೇಳಿದರು: ಹೋಗು, ನಿನ್ನ ಖರ್ಜೂರಗಳ ಪ್ರತಿಯೊಂದು ವೈವಿಧ್ಯಗಳನ್ನು ಬೇರೆ ಬೇರೆ ಮಾಡು. ಅಜ್ವ ಖರ್ಜೂರಗಳನ್ನು ಬೇರೆಯಾಗಿರಿಸು. ಅಝ್ಖ್ ಬಿನ್ ಝೈದ್ ಎಂಬ ಖರ್ಜೂರದ ವಿಧವನ್ನು ಬೇರೆಯಾಗಿರಿಸು. ಹೀಗೆ ಎಲ್ಲವನ್ನು ಬೇರೆ ಬೇರೆಯಾಗಿ ಇರಿಸಿದ ನಂತರ ನನಗೆ ತಿಳಿಸು. ನಾನು ಹಾಗೆಯೇ ಮಾಡಿದೆ ಮತ್ತು ಹಝ್ರತ್ ಪೈಗಂಬರರಿಗೆ(ಸ) ಸಂದೇಶವನ್ನು ತಲುಪಿಸಿದೆ. ಅವರು ಬಂದರು. ಅವರು ಖರ್ಜೂರಗಳ ರಾಶಿಯ ಮಧ್ಯೆ ಕುಳಿತುಕೊಂಡರು. ಸಾಲಕೊಟ್ಟವರಿಗೆ ಅಳತೆ ಮಾಡಿಕೊಡಲು ಹಝ್ರತ್ ಪೈಗಂಬರ್(ಸ) ಹೇಳಿದರು. ಹೀಗೆ ನಾನು ಅಳತೆಮಾಡಿ ಕೊಟ್ಟೆನು. ಹೀಗೆ ಅವರಿಗೆ ಸಿಗಬೇಕಾದ ಹಕ್ಕನ್ನು ಪೂರ್ತಿಯಾಗಿ ಕೊಟ್ಟೆನು. ಅದರ ನಂತರವೂ ನನ್ನ ಖರ್ಜೂರಗಳು ಬಾಕಿಯಾದುವು. ಅದರಲ್ಲಿ ಯಾವುದೇ ಕೊರತೆಯುಂಟಾಗಿಲ್ಲ ಎಂದು ತೋರುತ್ತಿತ್ತು. (ಸಹೀಹ್ ಬುಖಾರಿ, ಕಿತಾಬುಲ್ ಬುಯೂ, ಹದೀಸ್–2127)

ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್(ರ) ತನ್ನ ಮಗನಾದ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್‌ರನ್ನು ಅಲ್ಲದೆ, ಆರು ಪುತ್ರಿಯರನ್ನು ಅಗಲಿದ್ದರು. ಸಹೀಹ್ ಬುಖಾರಿಯ ಒಂದು ವರದಿಯ ಪ್ರಕಾರ ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್(ರ) ಏಳು ಅಥವಾ ಒಂಬತ್ತು ಹೆಣ್ಮಕ್ಕಳನ್ನು ಅಗಲಿದ್ದರು ಎಂದಿದೆ. (ಸುನನ್ ನಿಸಾಯಿ, ಕಿತಾಬುಲ್ ವಸಾಯ, ಹದೀಸ್–3666) (ಬುಖಾರಿ ಕಿತಾಬುನ್ನಫಿಖಾತ್, ಹದೀಸ್–5367)

ಇವರ ನಂತರ ಪ್ರಸ್ತಾಪಿಸಲಾಗುವ ಸಹಾಬಿಯ ಹೆಸರು ಹಝ್ರತ್ ಅಬೂ ದುಜಾನ(ರ) ಎಂದಾಗಿದೆ. ಅಬೂ ದುಜಾನ ಎಂಬುದು ಅವರ ಉಪನಾಮವಾಗಿತ್ತು. ಸರಿಯಾದ ಹೆಸರು ಹಝ್ರತ್ ಸಮ್ಮಾಕ್ ಬಿನ್ ಖರ್‌ಶ. ಹಝ್ರತ್ ಅಬೂದುಜಾನರ ಸಂಬಂಧ ಅನ್ಸಾರರ ಗೋತ್ರವಾದ ಖಝ್ರಜ್‌ನ ಶಾಖೆಯ ಬನೂ ಸಾಅದರೊಂದಿಗೆ ಆಗಿತ್ತು. ಹಝ್ರತ್ ಅಬೂದುಜಾನರ ತಂದೆಯ ಹೆಸರು ಖರ್‌ಶ ಎಂದಾಗಿತ್ತು. ತಂದೆಯ ಹೆಸರು ಔಸ್ ಮತ್ತು ತಾತರ ಹೆಸರು ಖರ್‌ಶ ಎಂದಾಗಿತ್ತು ಎಂದೂ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಅಬೂದುಜಾನರ ತಾಯಿಯ ಹೆಸರು ಹಝ್ಮ ಬಿನ್ತ್ ಹರ್ಮಲ ಎಂದಾಗಿತ್ತು. ತನ್ನ ಯಥಾರ್ಥ ಹೆಸರಿಗಿಂತ ತನ್ನ ಉಪನಾಮವಾದ ಅಬೂದಜಾನ ಎಂಬ ಹೆಸರಿನಿಂದ ಇವರು ಪ್ರಸಿದ್ಧರಾಗಿದ್ದರು. ಅಬೂ ದಜಾಜನರಿಗೆ ಒಬ್ಬ ಮಗನಿದ್ದನು. ಅವರ ಹೆಸರು ಖಾಲಿದ್ ಎಂದಾಗಿತ್ತು. ಅವರ ತಾಯಿಯ ಹೆಸರು ಆಮಿನ ಬಿನ್ತ್ ಅಮ್ರ್ ಎಂದಾಗಿತ್ತು. (ಅಸದುಲ್‌ಗಾಬ ಸಂಪುಟ–2, ಪುಟ–317, ದಾರುಲ್ ಫಿಕರ್ ಬೈರೂತ್ ಲೆಬನಾನ್ 2003) (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–419, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಉತ್‌ಬ ಬಿನ್ ಗಝ್ವಾನ್ ಮಕ್ಕದಿಂದ ಹಿಜ್ರತ್ ಮಾಡಿ ಮದೀನಕ್ಕೆ ತಲುಪಿದಾಗ, ಅವರ ಮತ್ತು ಹಝ್ರತ್ ಅಬೂದಜಾನರ ನಡುವೆ ಹಝ್ರತ್ ಪೈಗಂಬರ್(ಸ) ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದರು. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–420, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಅಬೂ ದಜಾನ(ರ) ಬದ್ರ್, ಉಹದ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದರು.
(ಅಸದುಲ್‌ಗಾಬ, ಸಂಪುಟ–2, ಪುಟ–317, ದಾರುಲ್ ಫಿಕರ್ ಬೈರೂತ್ ಲೆಬನಾನ್ 2003)

ಅನ್ಸಾರರ ಶ್ರೇಷ್ಠ ಸಹಾಬಿಯರಲ್ಲಿ ಹಝ್ರತ್ ಅಬೂದಜಾನ(ರ) ಗಣಿಸಲ್ಪಡುತ್ತಿದ್ದರು. ಅವರಿಗೆ ಹಝ್ರತ್ ಪೈಗಂಬರರು(ಸ) ಶಾಮಿಲಾಗಿದ್ದ ಯುದ್ಧಗಳಲ್ಲಿ ವಿಶೇಷವಾದ ಸ್ಥಾನವಿತ್ತು. (ಅಲ್‌ಇಸ್ತಿಆಬ್ ಫೀ ಮಾರಿಫತಿಲ್ ಅಸ್‌ಹಾಬ್, ಸಂಪುಟ–2, ಪುಟ–212, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2010)

ಯುದ್ಧ ನಡೆಯುವಾಗ, ಹಝ್ರತ್ ಅಬೂದಜಾನ(ರ) ಬಹಳ ಶೌರ್ಯದಿಂದ ಹೋರಾಡುತ್ತಿದ್ದರು. ಅವರು ನುರಿತರಾದ ಕುದುರೆಸವಾರರಾಗಿದ್ದರು. ಅವರ ಬಳಿಯಲ್ಲಿ ಕೆಂಪು ಬಣ್ಣದ ಒಂದು ರೂಮಾಲುಯಿತ್ತು. ಅದನ್ನು ಅವರು ಯುದ್ಧಗಳಲ್ಲಿ ಮಾತ್ರ ಧರಿಸುತ್ತಿದ್ದರು. ಅವರು ಹೋರಾಟಕ್ಕಾಗಿ ತಯಾರಾಗಿರುವರು ಎಂದು ಅವರು ಕೆಂಪು ಬಣ್ಣದ ರೂಮಾಲು ಧರಿಸುವಾಗ ಜನರಿಗೆ ಗೊತ್ತಾಗುತ್ತಿತ್ತು. ಧೈರ್ಯವಂತ ಮತ್ತು ವೀರಶೂರರಾದ ಜನರಲ್ಲಿ ಹಝ್ರತ್ ಅಬೂದಜಾನ(ರ) ಗಣಿಸಲ್ಪಡುತ್ತಿದ್ದರು. (ಅಸದುಲ್‌ಗಾಬ ಫೀ ಮಾರಿಫತಿಲ್ ಅಸ್‌ಹಾಬ್, ಸಂಪುಟ–5, ಪುಟ–96, ದಾರುಲ್ ಫಿಕರ್ ಬೈರೂತ್ ಲೆಬನಾನ್ 2003)

ಮುಹಮ್ಮದ್ ಬಿನ್ ಇಬ್ರಾಹೀಂ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಅಬೂದಜಾನ(ರ) ಯುದ್ಧಗಳಲ್ಲಿ ತನ್ನ ಕೆಂಪು ಮುಂಡಾಸಿನ ಕಾರಣದಿಂದ ಗುರುತಿಸಲ್ಪಡುತ್ತಿದ್ದರು. ಬದ್ರ್ ಯುದ್ಧದಲ್ಲೂ ಅವರ ತಲೆಯಲ್ಲಿ ಕೆಂಪು ಮುಂಡಾಸನ್ನು ಸುತ್ತಿದ್ದರು. ಹಝ್ರತ್ ಅಬೂದಜಾನ(ರ) ಉಹದ್ ಯುದ್ಧದಲ್ಲೂ ಹೀಗೆಯೇ ಭಾಗವಹಿಸಿದ್ದರು ಮತ್ತು ಹಝ್ರತ್ ಪೈಗಂಬರರೊಂದಿಗೆ(ಸ) ಸ್ಥಿರಚಿತ್ತರಾಗಿ ಇದ್ದರು. ಮರಣಕ್ಕೂ ಸಿದ್ಧರಾಗಿದ್ದೇವೆ ಎಂದು ಹೇಳಿ ಅವರು ಹಝ್ರತ್ ಪೈಗಂಬರರೊಂದಿಗೆ(ಸ) ಬೈಅತ್ ಮಾಡಿದ್ದರು. ಉಹದ್ ಯುದ್ಧದಂದು ಹಝ್ರತ್ ಅಬೂದಜಾನ(ರ) ಮತ್ತು ಹಝ್ರತ್ ಮುಸ್‌ಅಬ್ ಬಿನ್ ಉಮೈರ್ ಹಝ್ರತ್ ಪೈಗಂಬರರನ್ನು(ಸ) ಉತ್ತಮ ರೀತಿಯಲ್ಲಿ ಸಂರಕ್ಷಿಸಿದ್ದರು. ಹಝ್ರತ್ ಅಬೂದುಜಾನ(ರ) ತೀವ್ರವಾಗಿ ಗಾಯಗೊಂಡಿದ್ದರು ಮತ್ತು ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಅಂದು ಶಹೀದ್ ಆದರು.
(ಅಲ್‌ಇಸ್ತಿಆಬ್ ಫೀ ಮಾರಿಫತಿಲ್ ಅಸ್ಹಾಬ್, ಸಂಪುಟ–4, ಪುಟ–209, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2010)

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಹದಿನ ದಿನದಂದು ಒಂದು ಖಡ್ಗವನ್ನು ಹಿಡಿದು ಹೀಗೆ ಹೇಳಿದರು: **ಮನ್ ಯಅ್‌ಖುಧು ಮಿನ್ನೀ ಹಾಜ.** ಇದನ್ನು ನನ್ನಿಂದ ಯಾರು ಪಡೆಯುವರು? ಎಲ್ಲರೂ ತಮ್ಮ ಕೈಗಳನ್ನು ಎತ್ತಿದ್ದರು. ನಾನು ಪಡೆಯುವೆನು, ನಾನು ಪಡೆಯುವೆನು ಎಂದು ಅವರಲ್ಲಿ ಪ್ರತಿಯೊಬ್ಬರೂ ಹೇಳುತ್ತಿದ್ದರು. ಆಗ ಹಝ್ರತ್ ಪೈಗಂಬರ್(ಸ) ಕೇಳಿದರು: **ಫಮನ್ ಯಅ್‌ಖುಧು ಬಿಹಖ್ಖಿಹಿ.** ಯಾರು ಇದಕ್ಕೆ ಸಲ್ಲಬೇಕಾದ ಹಕ್ಕನ್ನು ಸರಿಯಾಗಿ ಈಡೇರಿಸುವರು? ಹಝ್ರತ್ ಅನಸ್(ರ) ಹೇಳುತ್ತಾರೆ: ಆಗ ಜನರು ಸುಮ್ಮನಾದರು. ಹಝ್ರತ್ ಸಮ್ಮಾಕ್ ಬಿನ್ ಖರ್‌ಶ ಅಬೂದಜಾನ(ರ) ಹೇಳಿದರು. ನಾನು ಅದರ ಹಕ್ಕನ್ನು ಈಡೇರಿಸುವೆನು ಎಂಬ ಭರವಸೆಯೊಂದಿಗೆ ಈ ಖಡ್ಗವನ್ನು ಪಡೆಯುವೆನು. ಹಝ್ರತ್ ಅನಸ್(ರ) ಹೇಳುತ್ತಾರೆ: ಹೀಗೆ ಅಬೂದುಜಾನ(ರ) ಆ ಖಡ್ಗವನ್ನು ಪಡೆದರು ಮತ್ತು ಮುಶ್ರಿಕರ ತಲೆಗಳನ್ನು ಹೊಡೆದರು. ಇದು ಸಹೀಹ್ ಮುಸ್ಲಿಮಿನ ಹದೀಸಾಗಿದೆ. (ಸಹೀಹ್ ಮುಸ್ಲಿಮ್, ಕಿತಾಬ್ ಫಝಾಇಲುಸ್ಸಹಾಬ, ಹದೀಸ್–6353)

ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ: ಇದರ ಹಕ್ಕೇನೆಂದು ಅಬೂದುಜಾನ(ರ) ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಇದರಿಂದ ಮುಸ್ಲಿಮರಲ್ಲಿ ಯಾರನ್ನೂ ಕೊಲ್ಲಬಾರದು. ಈ ಖಡ್ಗವನ್ನು ಹಿಡಿದುಕೊಂಡ ನಂತರ ಯಾವನೇ ಕಾಫಿರಿಗೆ ಹೆದರಿ ಓಡಿಹೋಗಬಾರದು. ಎಂದರೆ, ಕೆಚ್ಚೆದೆಯಿಂದ ಮತ್ತು ಸ್ಥೈರ್ಯದಿಂದ ಹೋರಾಡಬೇಕು. ಆಗ ಹಝ್ರತ್ ಅಬೂದುಜಾನ ಹೇಳಿದರು: ನಾನು ಈ ಖಡ್ಗವನ್ನು ಅದರ ಹಕ್ಕಿನೊಂದಿಗೆ ಪಡೆಯುತ್ತೇನೆ. ಹಝ್ರತ್ ಪೈಗಂಬರ್(ಸ) ಆ ಖಡ್ಗವನ್ನು ಹಝ್ರತ್ ಅಬೂದುಜಾನರಿಗೆ ಕೊಟ್ಟರು. ಅವರು ಇದರಿಂದ ಬಹುದೇವಾರಾಧಕರ ತಲೆಗಳನ್ನು ಹೊಡೆದರು. ಆ ಸಂದರ್ಭದಲ್ಲಿ ಅವರು ಈ ಪದ್ಯವನ್ನು ಓದಿದರು:

**ಅನಲ್ಲಧೀ ಅಹದನೀ ಖಲೀಲಿ,**
**ವನಹ್‌ನು ಬಿಸ್ಸೈಫಿ ಲದುನ್ನ ನಖೀಲಿ,**
**ಅನ್‌ಲಾ ಅಖ್‌ವಮುದ್ದಹ್‌ರಿ ಫಿಲ್‌ಖಯೂಲಿ,**
**ಅಝ್‌ರಿಬ್ ಬಿಸೈಫಿಲ್ಲಾಹಿ ವರ್ರಸೂಲ್.**

ನಾವು ಸಫಾ ಎಂಬ ಪ್ರದೇಶದಲ್ಲಿ ಖರ್ಜೂರದ ಮರಗಳ ಬಳಿಯಲ್ಲಿದ್ದಾಗ, ನನ್ನಿಂದ ನನ್ನ ಸ್ನೇಹಿತನು ವಾಗ್ದಾನ ಪಡೆದಿದ್ದನು. ಯಾರಿಂದ ವಾಗ್ದಾನ ಪಡೆಯಲಾಗಿತ್ತೋ, ಆ ವ್ಯಕ್ತಿಯಾಗಿದ್ದೇನೆ ನಾನು. ಆ ವಾಗ್ದಾನವೇನೆಂದರೆ, ನಾನು ಸೈನ್ಯದ ಹಿಂದಿನ ಪಂಕ್ತಿಗಳಲ್ಲಿ ನಿಲ್ಲಬಾರದು ಮತ್ತು ಅಲ್ಲಾಹ್ ಮತ್ತು ರಸೂಲಿನ ಖಡ್ಗದಿಂದ ಶತ್ರುಗಳ ವಿರುದ್ಧ ಯುದ್ಧ ಮಾಡಬೇಕು ಎಂದಾಗಿದೆ. ಹಝ್ರತ್ ಅಬೂದುಜಾನ ಹೆಮ್ಮೆಯಿಂದ ಎದೆಯುಬ್ಬಿಸಿ ಸೈನ್ಯದ ಪಂಕ್ತಿಗಳ ನಡುವೆ ನಡೆಯುತ್ತಿದ್ದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: **ಇನ್ನ ಹಾಧಿಹೀ ಮಿಶ್‌ಯತಿಹಿ**

**ಯಬ್‌ಘಝುಹಲ್ಲಾಹು ಅಝ್ಝುವಜಲ್ ಇಲ್ಲಾ ಫೀ ಹಾಧಲ್‌ಮಖಾಮ್**. ಎಂದರೆ, ಮಹೋನ್ನತನಾದ ಅಲ್ಲಾಹನಿಗೆ ಈ ಸಂದರ್ಭದಲ್ಲಿ ಹೊರತು ಈ ರೀತಿಯ ನಡತೆ ಇಷ್ಟವಲ್ಲ. ಯುದ್ಧದ ಸಂದರ್ಭದಲ್ಲಿ ಇದರ ಅನುಮತಿಯಿದೆ.
(ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–7, ಪುಟ–100, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಹಝ್ರ್‌ರತ್ ಝ್ಝುಬೇರ್ ಬಿನ್ ಅವಾಮ್ ವರದಿ ಮಾಡುತ್ತಾರೆ: ಹಝ್ರ್‌ರತ್ ಪೈಗಂಬರ್(ಸ) ಉಹದಿನ ದಿನ ಒಂದು ಖಡ್ಗವನ್ನು ಹಿಡಿದು ಕೇಳಿದರು: **ಮನ್ ಯಅ್‌ಖುಧು ಹಾಧಸ್ಸೈಫು ಬಿಹಖ್ಖಿಹಿ**. ಎಂದರೆ, ನಿಮ್ಮಲ್ಲಿ ಯಾರು ಈ ಖಡ್ಗವನ್ನು ಅದರಿಂದ ಮಾಡಬೇಕಾದ ಕೆಲಸವನ್ನು ಉತ್ತಮ ರೀತಿಯಲ್ಲಿ ಈಡೇರಿಸುವ ವಾಗ್ದಾನವನ್ನು ನನಗೆ ನೀಡಿ ಪಡೆಯುತ್ತೀರಿ? ಹಝ್ರ್‌ರತ್ ಝ್ಝುಬೇರ್(ರ) ಹೇಳುತ್ತಾರೆ: ಯಾ ರಸೂಲುಲ್ಲಾಹ್ ನಾನು ಪಡೆಯುತ್ತೇನೆ ಎಂದು ಹೇಳಿ ನಾನು ನಿಂತೆ. ಹಝ್ರ್‌ರತ್ ಪೈಗಂಬರ್(ಸ) ನನ್ನಿಂದ ಮುಖವನ್ನು ತಿರುಗಿಸಿದರು. ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ಯಾರು ಈ ಖಡ್ಗವನ್ನು ಅದರ ಹಕ್ಕಿನೊಂದಿಗೆ ಪಡೆಯುವರು? ನಾನೆಂದು ಪುನಃ ನಾನು ಹೇಳಿದೆ. ಹಝ್ರ್‌ರತ್ ಪೈಗಂಬರ್(ಸ) ಪುನಃ ನನ್ನಿಂದ ಮುಖ ತಿರುಗಿಸಿದರು. ಹಝ್ರ್‌ರತ್ ಪೈಗಂಬರ್(ಸ) ಕೇಳಿದರು: ಯಾರು ಈ ಖಡ್ಗವನ್ನು ಅದರ ಹಕ್ಕಿನೊಂದಿಗೆ ಪಡೆಯುವರು? ಹಝ್ರ್‌ರತ್ ಅಬೂದಜಾನ ಸಮ್ಮಾಕ್ ಬಿನ್ ಖರ್‌ಶ(ರ) ನಿಂತು ಹೇಳಿದರು: ಯಾ ರಸೂಲಲ್ಲಾಹ್, ನಾನು ಈ ಖಡ್ಗವನ್ನು ಅದರ ಹಕ್ಕಿನೊಂದಿಗೆ ಪಡೆಯುವೆನು ಮತ್ತು ಇದರ ಹಕ್ಕೇನು? ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ಇದರಿಂದ ಮುಸ್ಲಿಮರಲ್ಲಿ ಯಾರನ್ನೂ ಕೊಲ್ಲಬಾರದು. ಈ ಖಡ್ಗವನ್ನು ಹಿಡಿದುಕೊಂಡ ನಂತರ ಯಾವನೇ ಕಾಫಿರಿಗೆ ಹೆದರಿ ಓಡಿಹೋಗಬಾರದು. ಎಂದರೆ, ಕೆಚ್ಚೆದೆಯಿಂದ ಮತ್ತು ಸ್ಥೈರ್ಯದಿಂದ ಹೋರಾಡಬೇಕು. ಹಝ್ರ್‌ರತ್ ಝ್ಝುಬೇರ್ ಹೇಳುತ್ತಾರೆ: ಅನಂತರ ಹಝ್ರ್‌ರತ್ ಪೈಗಂಬರ್(ಸ) ಖಡ್ಗವನು ಅಬೂದುಜಾನರಿಗೆ ಕೊಟ್ಟರು. ಅಬೂದುಜಾನ ಯುದ್ಧ ಮಾಡಲು ಉದ್ದೇಶಿಸುವಾಗ, ಕೆಂಪು ಬಣ್ಣದ ರೂಮಾಲನ್ನು ತಲೆಯಲ್ಲಿ ಸುತ್ತುತ್ತಿದ್ದರು. ಅಬೂದುಜಾನ ಇಂದು ಹೇಗೆ ಈ ಖಡ್ಗದ ಹಕ್ಕನ್ನು ಈಡೇರಿಸುವರು ಎಂದು ನಾನು ನೋಡಲು ಉದ್ದೇಶಿಸಿದೆ. ಅಬೂದುಜಾನರ ಮುಖಾಮುಖಿಯಾದ ಬಂದವರನ್ನೆಲ್ಲ ನಾಶಮಾಡುತ್ತಾ ತುಂಡುಮಾಡುತ್ತಾ ಅವರು ಮುಂದಕ್ಕೆ ಧಾವಿಸುತ್ತಿದ್ದರು. ಎಲ್ಲಿಯ ವರೆಗೆ ಎಂದರೆ ಅವರು ಶತ್ರುಗಳ ಸೈನ್ಯವನ್ನು ದಾಟುತ್ತಾ ಸ್ತ್ರೀಯರು ಇದ್ದ ಸ್ಥಳದ ವರೆಗೆ ತಲುಪಿದರು. ಸ್ತ್ರೀಯರು ಪರ್ವತದ ಕೆಳಗೆ ನಿಂತು ಡೋಲು ಬಾರಿಸುತ್ತಿದ್ದರು. ಅವರಲ್ಲಿ ಒಬ್ಬಳು ಸ್ತ್ರೀ ಹೀಗೆ ಪದ್ಯ ಹೇಳುತ್ತಿದ್ದಳು. ಅದರ ತರ್ಜುಮೆ ಹೀಗಿದೆ: ನಾವು ಬೆಳಿಗ್ಗಿನ ತಾರಿಖ್ ನಕ್ಷತ್ರದ ಪುತ್ರಿಯರಾಗಿದ್ದೇವೆ. ನೀವು ಹೋರಾಡುತ್ತಾ ಮುಂದಕ್ಕೆ ಧಾವಿಸುವುದಾದರೆ, ನಾವು ನಿಮ್ಮನ್ನು ಆಲಿಂಗಿಸುವೆವು. ಕುಳಿತುಕೊಳ್ಳಲು ತಲೆದಿಂಬುಗಳನ್ನು ಇರಿಸುವೆವು. ಆದರೆ ನೀವು ಬೆನ್ನು ತಿರುಗಿಸುವರಾದರೆ, ನಾವು ನಿಮ್ಮಿಂದ ಬೇರ್ಪಟ್ಟು ಹೋಗುವೆವು. ಅದು ನಮ್ಮ ಮತ್ತು ನಿಮ್ಮ ನಡುವೆ ಸಂಬಂಧ ಬಾಕಿಯುಳಿಯದ ರೀತಿಯಲ್ಲಿರುವ ಬೇರ್ಪಡುವಿಕೆ ಆಗಿರುವುದು.

ಹಝ್ರ್‌ರತ್ ಝ್ಝುಬೇರ್(ರ) ಹೇಳುತ್ತಾರೆ: ಸ್ತ್ರೀಯೊಬ್ಬಳ ಮೇಲೆ ಅಬೂದುಜಾನ(ರ) ಖಡ್ಗದಿಂದ ಹಲ್ಲೆ ನಡೆಸಲು ಕೈಯೆತ್ತಿದ್ದರು. ಅನಂತರ ಹಾಗೆ ಮಾಡುವುದರಿಂದ ಹಿಂದೆ ಸರಿದರು. ಯುದ್ಧ ಕೊನೆಗೊಂಡಾಗ, ನಾನು ಅವರೊಡನೆ ಹೇಳಿದೆ: ನಾನು ನಿಮ್ಮ ಹೋರಾಟವನ್ನು ಸಂಪೂರ್ಣವಾಗಿ ನೋಡಿದ್ದೇನೆ. ನೀವು ಒಬ್ಬ ಸ್ತ್ರೀಯ ಮೇಲೆ ಖಡ್ಗ ಚಲಾಯಿಸಲು ಹೋಗಿದ ನಂತರ ಅದರಿಂದ ಹಿಂದೆಸರಿಯಲು ಕಾರಣವೇನು? ಅವರು ಹೇಳಿದರು: ಅಲ್ಲಾಹನಾಣೆ, ನಾನು ಹಝ್ರ್‌ರತ್ ಪೈಗಂಬರರ(ಸ) ಖಡ್ಗಕ್ಕೆ ಗೌರವ ಕೊಟ್ಟೆ. ಈ ಖಡ್ಗದ ಮೂಲಕ ಯಾವಳೇ ಸ್ತ್ರೀ ಕೊಲ್ಲಲ್ಪಡಬಾರದು ಎಂದು ನಾನು ನಿರ್ಧರಿಸಿದೆ. ನಾನು ಹಝ್ರ್‌ರತ್ ಪೈಗಂಬರರ(ಸ) ಖಡ್ಗವನ್ನು ಉಪಯೋಗಿಸಿ ಯಾವಳೇ ಸ್ತ್ರೀಯನ್ನು ಕೊಲ್ಲುವುದು ಸರಿಯಲ್ಲ. ಆದ್ದರಿಂದ ನಾನು ಅದರಿಂದ ಹಿಂದೆಸರಿದೆ. ಆ ಸ್ತ್ರೀ ಅಬೂ ಸುಫ್‌ಯಾನರ ಪತ್ನಿಯಾದ ಹಿಂದ ಆಗಿದ್ದಳು ಎಂದು ಮತ್ತೊಂದು ವರದಿಯಲ್ಲಿದೆ. ಅವರು ಇತರ ಸ್ತ್ರೀಯರೊಂದಿಗೆ ಸೇರಿಕೊಂಡು ಹಾಡುತ್ತಿದ್ದರು. ಹಝ್ರ್‌ರತ್ ಅಬೂದುಜಾನ(ರ) ತನ್ನ ಖಡ್ಗವನ್ನು ಅವರ ಮೇಲೆತ್ತಿದ್ದಾಗ, ಅವರು ಸಹಾಯಕ್ಕಾಗಿ ಉಚ್ಚ ಸ್ವರದಲ್ಲಿ ಕರೆದರು. ಆದರೆ ಯಾರೂ ಸಹಾಯಕ್ಕಾಗಿ ಬರಲಿಲ್ಲ. ಹಝ್ರ್‌ರತ್ ಅಬೂದುಜಾನ(ರ) ತನ್ನ ಖಡ್ಗವನ್ನು ಕೆಳಗೆ ಮಾಡಿ ಮರಳಿಹೋದರು. ಹಝ್ರ್‌ರತ್ ಝ್ಝುಬೇರ್(ರ) ಇದರ ಬಗ್ಗೆ ಕೇಳಿದಾಗ, ಅವರು ಹೇಳಿದರು: ಹಝ್ರ್‌ರತ್ ಪೈಗಂಬರರ(ಸ) ಖಡ್ಗದಿಂದ ಸಹಾಯಕರಾಗಿ ಯಾರೂ ಇಲ್ಲದ ಒಬ್ಬಳು ಸ್ತ್ರೀಯನ್ನು ಕೊಲ್ಲುವುದನ್ನು ನಾನು ಇಷ್ಟಪಡಲಿಲ್ಲ. (ಅಲ್‌ಮುಸ್ತದ್‌ರಿಕ್ ಅಲಸ್ಸಹೀಹೈನ್, ಸಂಪುಟ–3, ಪುಟ–440–441, ವರದಿ ಸಂಖ್ಯೆ–5088, ದಾರುಲ್ ಫಿಕರ್ ಬೈರೂತ್ 2002)

(ಅಲ್ಲಾಮ ಝುರ್‌ಖಾನಿ, ಸಂಪುಟ–2, ಪುಟ–406,407, ಕಿತಾಬುಲ್ ಮಗಾಝಿ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಅಬೂದುಜಾನರ ಈ ಘಟನೆಯನ್ನು ಪ್ರಸ್ತಾಪಿಸುತ್ತಾ ಹಝ್ರ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) **ಸೀರತ್ ಖಾತಮುನ್ನಬಿಯ್ಯೀನ್**ನಲ್ಲಿ ಹೀಗೆ ಬರೆದಿದ್ದಾರೆ: ಯುದ್ಧದಲ್ಲಿ ಪರಾಜಯ ಉಂಟಾಗುತ್ತಿರುವುದಾಗಿ ಸತ್ಯನಿಷೇಧಿಗಳು ಕಂಡಾಗ, ಕೋಪದಿಂದ ಮನಸ್ಸಿಗೆ ಬಂದಂತೆ ಆಕ್ರಮಣ ನಡೆಸಲು ಶುರುಮಾಡಿದರು. ಮುಸ್ಲಿಮರು ಸಹ ತಕ್ಬೀರ್ ಹೇಳುತ್ತಾ ಮುಂದಕ್ಕೆ ಧಾವಿಸಿದರು. ಉಭಯ ಪಕ್ಷಗಳ ಸೈನ್ಯಗಳ ನಡುವೆ ತೀವ್ರವಾದ ಹೋರಾಟ ನಡೆಯಿತು. ಬಹುಶಃ ಈ ಸಂದರ್ಭದಲ್ಲೇ ಹಝ್ರ್‌ರತ್ ಪೈಗಂಬರ್(ಸ) ಖಡ್ಗವನ್ನು ಕೈಯಲ್ಲಿ ಎತ್ತಿಕೊಂಡು ಹೀಗೆ ಹೇಳಿದರು: ಯಾರು ಇದನ್ನು ಪಡೆದುಕೊಂಡು ಇದರ ಹಕ್ಕನ್ನು ಈಡೇರಿಸುವರು? ಹಲವು ಸಹಾಬಿಯರು ಈ ಗೌರವದ ಸೌಭಾಗ್ಯವನ್ನು ಪಡೆಯಲು ತಮ್ಮ ಕೈಯನ್ನು ಎತ್ತಿದ್ದರು. ಕೈಯೆತ್ತಿದ್ದವರಲ್ಲಿ ಹಝ್ರ್‌ರತ್ ಉಮರ್(ರ), ಝುಬೇರ್(ರ), ಕೆಲವು ವರದಿಗಳ ಪ್ರಕಾರ ಹಝ್ರ್‌ರತ್ ಅಬೂಬಕ್ಕರ್(ರ) ಮತ್ತು ಹಝ್ರ್‌ರತ್ ಅಲಿ(ರ) ಸಹ ಇದ್ದರು. ಆದರೆ ಹಝ್ರ್‌ರತ್ ಪೈಗಂಬರ್(ಸ) ಯಾರಿಗೂ ಕೊಡದೇ ಇದರ ಹಕ್ಕನ್ನು ಈಡೇರಿಸುವವರಾಗಿ ಯಾರಾದರೂ ಇದ್ದಾರಯೇ? ಎಂದು ಪುನಃ ಕೇಳಿದರು. ಕೊನೆಗೆ ಹಝ್ರ್‌ರತ್ ಅಬೂದುಜಾನ ಅನ್ಸಾರಿ(ರ) ತಮ್ಮ ಕೈಯನ್ನು ಎತ್ತಿ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಅದನ್ನು ನನಗೆ ಕೊಡಿರಿ. ಹಝ್ರ್‌ರತ್ ಪೈಗಂಬರ್(ಸ) ಆ ಖಡ್ಗವನ್ನು ಅವರಿಗೆ ಕೊಟ್ಟರು. ಅಬೂದುಜಾನ(ರ) ಅದನ್ನು ಕೈಯಲ್ಲಿ ಹಿಡಿದುಕೊಂಡು ಹೆಮ್ಮೆ ಮತ್ತು ಅಭಿಮಾನದಿಂದ ನಡೆಯುತ್ತಾ ಶತ್ರುಗಳ ಕಡೆಗೆ ಧಾವಿಸಿದರು. ಹಝ್ರ್‌ರತ್ ಪೈಗಂಬರ್(ಸ) ಸಹಾಬರೊಡನೆ ಹೇಳಿದರು: ಅಲ್ಲಾಹನಿಗೆ ಈ ರೀತಿಯ ನಡತೆ ಇಷ್ಟವಲ್ಲ, ಆದರೆ ಈ ಸಂದರ್ಭದಲ್ಲಿ, ಎಂದರೆ ಶತ್ರುಗಳನ್ನು ಎದುರಿಸುವ ಸಂದರ್ಭದಲ್ಲಿ ಇದು ಅಪ್ರಿಯವಾದ ಸಂಗತಿಯಲ್ಲ. ಹಝ್ರ್‌ರತ್ ಪೈಗಂಬರರ(ಸ) ಕೈಯಲ್ಲಿದ್ದ ಖಡ್ಗವನ್ನು ಪಡೆಯಲು ಹಝ್ರ್‌ರತ್ ಝ್ಝುಬೇರ್(ರ) ಅತಿಯಾದ ಅಭಿಲಾಷೆಯನ್ನು ಹೊಂದಿದ್ದರು. ನಿಕಟ ಸಂಬಂಧದ ಕಾರಣದಿಂದಲೂ ಅದನ್ನು ಪಡೆಯಲು ಹೆಚ್ಚು ಅರ್ಹರೆಂದು ಭಾವಿಸುತ್ತಿದ್ದರು. ಹಝ್ರ್‌ರತ್ ಪೈಗಂಬರ್(ಸ) ನನಗೆ ಏಕೆ ಖಡ್ಗವನ್ನು ಕೊಡದೆ, ಅಬೂದುಜಾನರಿಗೆ ಏಕೆ ಕೊಟ್ಟರು ಎಂದು ಮನಸ್ಸಲ್ಲೇ ಯೋಚಿಸುತ್ತಿದ್ದರು. ಮನಸ್ಸಿನ ಈ ಚಿಂತೆಯನ್ನು ದೂರಮಾಡಲಿಕ್ಕಾಗಿ, ಯುದ್ಧ ಮೈದಾನದಲ್ಲಿ ಅಬೂದುಜಾನರ ಜೊತೆಗೆ ಇದ್ದುಕೊಂಡು, ಅವರು ಈ ಖಡ್ಗದಿಂದ ಏನು ಮಾಡುವರು ಎಂದು ನೋಡಲು ಹಝ್ರ್‌ರತ್ ಝ್ಝುಬೇರ್(ರ) ಪ್ರತಿಜ್ಞೆ ಮಾಡಿದರು. ಹಝ್ರ್‌ರತ್ ಝ್ಝುಬೇರ್(ರ) ಹೇಳುತ್ತಾರೆ: ಅಬೂದುಜಾನ(ರ) ತಲೆಯಲ್ಲಿ ಒಂದು ಕೆಂಪು ಬಟ್ಟೆಯನ್ನು ಕಟ್ಟಿಕೊಂಡು, ಆ ಖಡ್ಗವನ್ನು ಹಿಡಿದು ಅಲ್ಲಾಹನನ್ನು ಸ್ತುತಿಸುತ್ತಾ ಮುಶ್ರಿಕರ ಪಂಕ್ತಿಯೊಳಗೆ ನುಗ್ಗಿದ್ದರು. ಅವರು ಹೋಗುವಲ್ಲೆಲ್ಲ ಶತ್ರುಗಳನ್ನು ಕೊಲ್ಲುತ್ತಾ ಹೋಗುತ್ತಿದ್ದರು. ಅವರ ಮುಂದೆ ಬಂದು ಬಚಾವು ಆದ ಯಾರನ್ನು ನಾನು ಕಾಣಲಿಲ್ಲ. ಎಲ್ಲಿಯ ವರೆಗೆ ಎಂದರೆ, ಅವರು ಖುರೈಶಿಯರ ಸೈನ್ಯವನ್ನು ದಾಟುತ್ತಾ ಸೈನ್ಯದ ಮತ್ತೊಂದು ಬದಿಗೆ ತಲುಪಿದರು. ಅಲ್ಲಿ ಖುರೈಶಿಗಳ ಸ್ತ್ರೀಯರು ನಿಂತಿದ್ದರು. ಅಬೂಸುಫ್‌ಯಾನರ ಪತ್ನಿಯಾದ ಹಿಂದ ಬಹಳ ಜೋರಾಗಿ, ಮುಸ್ಲಿಮರ ವಿರುದ್ಧ ಹೋರಾಡುತ್ತಿದ್ದ ಪುರುಷರನ್ನು ಹುರಿದುಂಬಿಸುತ್ತಿದ್ದರು. ಅಬೂದುಜಾನ(ರ) ಅವರ ಮುಂದಕ್ಕೆ ಬಂದು, ತನ್ನ ತಲವಾರನ್ನು ಅವರ ಮೇಲೆ ಎತ್ತಿದ್ದರು. ಆಗ ಹಿಂದ ಬಹಳ ಜೋರಾಗಿ ಕಿರುಚಿದರು. ತಮ್ಮ ಪುರುಷರನ್ನು ಸಹಾಯಕ್ಕಾಗಿ ಕರೆದರು. ಆದರೆ ಯಾರೂ ಸಹಾಯಕ್ಕಾಗಿ ಬರಲಿಲ್ಲ. ಆದರೆ ಅಬೂದುಜಾನ(ರ) ಸ್ವತಃ ತನ್ನ ಖಡ್ಗವನ್ನು ಕೆಳಗೆ ಮಾಡಿದರು. ಅಲ್ಲಿಂದ ಹಿಂದೆ ಸರಿದರು. ನೀನು ಮೊದಲು ಖಡ್ಗವನ್ನು ಎತ್ತಿದ ನಂತರ ಕೆಳಗೆ ಇಡಲು ಕಾರಣವೇನೆಂದು ಆ ಸಂದರ್ಭದಲ್ಲಿ ನಾನು ಅಬೂದುಜಾನರೊಡನೆ ಕೇಳಿದೆ. ಅಬೂದುಜಾನ ಹೇಳಿದರು: ಹಝ್ರ್‌ರತ್ ಪೈಗಂಬರರ(ಸ) ಖಡ್ಗದಿಂದ ಒಬ್ಬಳು ಸ್ತ್ರೀಯ ಮೇಲೆ ಹಲ್ಲೆ ನಡೆಸಲು ನನಗೆ ಮನಸ್ಸು ಬರಲಿಲ್ಲ. ಮಾತ್ರವಲ್ಲ ಆ ಸ್ತ್ರೀಯನ್ನು ಸಹಾಯ ಮಾಡಲು ಪುರುಷರಲ್ಲಿ ಯಾರೂ ಇದ್ದಿರಲಿಲ್ಲ. ಹಝ್ರ್‌ರತ್ ಝ್ಝುಬೇರ್(ರ) ಹೇಳುತ್ತಾರೆ: ಖಂಡಿತವಾಗಿಯೂ ಹಝ್ರ್‌ರತ್ ಪೈಗಂಬರರ(ಸ) ಖಡ್ಗದ ಹಕ್ಕನ್ನು ಅಬೂದುಜಾನ(ರ) ನೆರವೇರಿಸಿದ ಹಾಗೆ ಬಹುಶಃ ನನ್ನಿಂದ ನೆರವೇರಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಆಗ ನಾನು ಭಾವಿಸಿದೆ. ಹೀಗೆ ನನ್ನ ಮನಸ್ಸಿನ ಚಿಂತೆ ದೂರವಾಯಿತು. (ಸೀರತ್ ಖಾತುಮುನ್ನಬೀಈನ್, ಪುಟ–489–490)

ಹಝ್ರ್‌ರತ್ ಖಲೀಫತುಲ್ ಮಸೀಹ್ ಸಾನಿ(ರ) ಈ ಘಟನೆಯನ್ನು ಹೀಗೆ ವಿವರಿಸಿದ್ದಾರೆ: ಉಹದ್ ಯುದ್ಧದಲ್ಲಿ ಹಝ್ರ್‌ರತ್ ಪೈಗಂಬರ್(ಸ) ಒಂದು ಖಡ್ಗವನ್ನು ಹಿಡಿದು ಹೀಗೆ ಹೇಳಿದರು: ಯಾರು ಇದರ ಹಕ್ಕನ್ನು ಈಡೇರಿಸುವನೆಂದು ವಾಗ್ದಾನ ಮಾಡುವನೋ ಅವನಿಗೆ ನಾನು ಈ ಖಡ್ಗವನ್ನು

ಕೊಡುತ್ತೇನೆ. ಹಲವು ಜನರು ಈ ತಲವಾರನ್ನು ಪಡೆಯಲು ನಿಂತರು. ಹಝ್ರತ್ ಪೈಗಂಬರ್(ಸ) ಆ ಖಡ್ಗವನ್ನು ಹಝ್ರತ್ ಅಬೂದುಜಾನ(ರ) ಅನ್ಸಾರಿಗೆ ಕೊಟ್ಟರು. ಒಂದು ಪ್ರದೇಶದಲ್ಲಿ ಮಕ್ಕಾದ ಕೆಲವು ಸಿಪಾಯಿಗಳು ಅಬೂದುಜಾನರ ಮೇಲೆ ಹಲ್ಲೆ ನಡೆಸಿದರು. ಅವರು ಹೋರಾಡುತ್ತಿದ್ದಾಗ, ಒಬ್ಬ ಸೈನಿಕ ಅತ್ಯಂತ ಆವೇಶದಿಂದ ಯುದ್ಧದಲ್ಲಿ ಭಾಗವಹಿಸಿದ್ದಾಗಿ ಅವರು ಕಂಡರು. ಅವರು ಖಡ್ಗವನ್ನು ಹಿಡಿದು ಅವರ ಕಡೆಗೆ ಧಾವಿಸಿದರು. ಆದರೆ ಅನಂತರ ಅವರನ್ನು ಬಿಟ್ಟು ವಾಪಾಸ್ಸು ಬಂದರು. ಅವರನ್ನು ಏಕೆ ಬಿಟ್ಟುಬಂದಿದ್ದೀರಿ ಎಂದು ಅವರ ಒಬ್ಬ ಸ್ನೇಹಿತನು ಅವರೊಡನೆ ಕೇಳಿದನು. ಅವರು ಹೇಳಿದರು: ನಾನು ಅವರ ಬಳಿಗೆ ಹೋದಾಗ, ಅವರು ಏನೋ ಹೇಳುತ್ತಿದ್ದರು, ಇದರಿಂದ ಅವರು ಪುರುಷನಲ್ಲ, ಸ್ತ್ರೀಯೆಂದು ನನಗೆ ಗೊತ್ತಾಯಿತು. ಅವರ ಸ್ನೇಹಿತ ಹೇಳಿದರು: ಹೇಗಿದ್ದರೂ ಆ ಸ್ತ್ರೀ ಸಿಪಾಯಿಯಂತೆ ಸೈನ್ಯದಲ್ಲಿ ಹೋರಾಡುತ್ತಿದಾಗ, ಅವರನ್ನು ಏಕೆ ಬಿಟ್ಟುಬಂದಿದ್ದೀರಿ. (ತಫ್‌ಸೀರೆ ಕಬೀರ್, ಸಂಪುಟ–2, ಪುಟ–421,422)

ಹಝ್ರತ್ ಅಬೂದುಜಾನ(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ನನಗೆ ಕೊಟ್ಟ ಖಡ್ಗದಿಂದ ದುರ್ಬಲ ಸ್ತ್ರೀಯೊಬ್ಬಳ ಮೇಲೆ ಹಲ್ಲೆ ನಡೆಸಲು ನನಗೆ ಮನಸ್ಸು ಬರಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಟ್ಟಿನಲ್ಲಿ, ಸ್ತ್ರೀಯರನ್ನು ಗೌರವಿಸಲು ಮತ್ತು ಆದರಭಾವದಿಂದ ಕಾಣಲು ಹಝ್ರತ್ ಪೈಗಂಬರ್(ಸ) ಸದಾ ಉಪದೇಶಿಸುತ್ತಿದ್ದರು. ಇದರ ಕಾರಣದಿಂದ ಸತ್ಯನಿಷೇಧಿಗಳ ಸ್ತ್ರೀಯರು ಹೆಚ್ಚು ಧೈರ್ಯದಿಂದ ಮುಸ್ಲಿಮರಿಗೆ ನಷ್ಟ ಉಂಟುಮಾಡಲು ಪ್ರಯತ್ನಿಸುತ್ತಿದ್ದರು. ಆದರೂ ಮುಸ್ಲಿಮರು ಈ ಸಂಗತಿಗಳನ್ನು ಸಹಿಸುತ್ತಾ ಹೋಗುತ್ತಿದ್ದರು.

(LIFE OF MOHOMET by Sir William Muir, page-269, Smith Elder & co, Waterloo Place London 1878)

ಅಬೂದುಜಾನರಿಗೆ ಸಂಬಂಧಿಸಿ ಪ್ರಸಿದ್ಧ ಪೌರಸ್ತ್ಯ ಬರಹಗಾರರಾದ ವಿಲಿಯಂ ಮ್ಯೂರ್ ಬರೆಯುತ್ತಾರೆ: ಯುದ್ಧದ ಆರಂಭದಲ್ಲಿ ಮುಹಮ್ಮದ್(ಸ) ತನ್ನ ಖಡ್ಗವನ್ನು ಹಿಡಿದು ಹೇಳಿದರು: ಯಾರು ಈ ಖಡ್ಗವನ್ನು ಅದರ ಹಕ್ಕಿನೊಂದಿಗೆ  ನನ್ನಿಂದ ಪಡೆಯುವನು? ಉಮರ್, ಝುಬೇರ್ ಹಾಗೂ ಹಲವಾರು ಸಹಾಬರು ಅದನ್ನು ಪಡೆಯಲು ಇಚ್ಛಿಸುತ್ತಿದ್ದರು. ಆದರೆ ರಸೂಲುಲ್ಲಾಹ್(ಸ) ಅವರಿಗೆ ಕೊಡಲಿಲ್ಲ. ಕೊನೆಗೆ ಅಬೂದುಜಾನ(ರ) ಕೇಳಿದಾಗ, ಮುಹಮ್ಮದ್(ಸ) ಅವರಿಗೆ ಕೊಟ್ಟರು. ಅವರು ಆ ಖಡ್ಗದಿಂದ ನಿಷೇಧಿಗಳ ತಲೆಗಳನ್ನು ಶರೀರದಿಂದ ಬೇರ್ಪಡಿಸಲು ಶುರುಮಾಡಿದರು. ಮುಸ್ಲಿಮರ ಅಪಾಯಕಾರಿ ಆಕ್ರಮಣದಿಂದ ಮಕ್ಕಾ ಸೈನ್ಯ ದುರ್ಬಲಗೊಳ್ಳಲು ಆರಂಭವಾಯಿತು. ಇಸ್ಲಾಮಿನ ಸೈನ್ಯದ ಬಲಬದಿಯ ಹಿಂದಿನಿಂದ ಆಕ್ರಮಣ ನಡೆಸಲು ಖುರೈಶಿನ ಸೈನ್ಯ ಹಲವು ಬಾರಿ ಪ್ರಯತ್ನಿಸುತ್ತಿತ್ತು. ಆದರೆ ಮುಹಮ್ಮದ್(ಸ) ಅಲ್ಲಿ ವಿಶೇಷವಾಗಿ ನಿಶ್ಚಯಿಸಿದ್ದ ಐವತ್ತು ಬಿಲ್ಲುಗಾರರು, ಬಾಣಗಳಿಂದ ಅಲ್ಲಿ ನಿಂತು ಹಲ್ಲೆ ನಡೆಸುತ್ತಿದ್ದ ಕಾರಣದಿಂದ ಪ್ರತಿಬಾರಿ ಶತ್ರುಗಳಿಗೆ ಅಲ್ಲಿಂದ ಹಿಮ್ಮೆಟ್ಟಬೇಕಾಗಿ ಬರುತ್ತಿತ್ತು. ಬದ್ರ್ ಯುದ್ಧದ ಸಂದರ್ಭದಲ್ಲಿ ಮುಸ್ಲಿಮರು ತೋರಿಸಿದ್ದ ಶೌರ್ಯ, ಧೈರ್ಯ, ಅಪಾಯ ಮತ್ತು ಮರಣದ ಭಯ ಇಲ್ಲದಿರುವಿಕೆಯು ಅದೇ ಸ್ಥಿತಿ ಉಹದಿನ ಮೈದಾನದಲ್ಲೂ ಕಾಣಬಹುದಾಗಿತ್ತು. ಮಕ್ಕಾ ಸೈನ್ಯದ ಪಂಕ್ತಿಗಳು ಮುರಿಯುತ್ತಾ ಹೋಗುತ್ತಿದ್ದುವು. ಮುಖಕವಚವನ್ನು ಹಾಕಿಕೊಂಡಿದ್ದ ಅಬೂದುಜಾನ ಕೆಂಪು ಬಣ್ಣದ ರೂಮಾಲನ್ನು ತಲೆಗೆ ಕಟ್ಟಿಕೊಂಡು ಮುಹಮ್ಮದ್ ಪೈಗಂಬರ್(ಸ) ನೀಡಿದ್ದ ಖಡ್ಗದಿಂದ ಹಲ್ಲೆ ನಡೆಸಿ ಶತ್ರುಗಳನ್ನು ಕೊಲ್ಲುತ್ತಾ ಹೋಗುತ್ತಿದ್ದರು. ಹಂಝ ತನ್ನ ತಲೆಯಲ್ಲಿ ಉಷ್ಟ್ರ ಪಕ್ಷಿಯ ರೆಕ್ಕೆಗಳಿಂದ ತಯಾರಿಸಿದ ಕಲಶವನ್ನು ಧರಿಸಿಕೊಂಡಿದ್ದ ಕಾರಣ ಎಲ್ಲ ಸ್ಥಳಗಳಲ್ಲಿ ಎದ್ದು ಕಾಣುತ್ತಿದ್ದರು. ಹಝ್ರತ್ ಅಲಿ(ರ) ತನ್ನ ಉದ್ದವಾದ ಧ್ವಜದೊಂದಿಗೆ ಮತ್ತು ಝುಬೇರ್ ತನ್ನ ಹೊಳೆಯುತ್ತಿರುವ ಹಳದಿ ಮುಂಡಾಸನ್ನು ಕಟ್ಟಿಕೊಂಡು ಏಲಿಯಟಿನ ಶೂರರಂತೆ ಹೋಗುವಲ್ಲೆಲ್ಲ ಶತ್ರುಗಳಿಗೆ ಮರಣದ ಮತ್ತು ಅಪಾಯದ ಕರೆಗಂಟೆಯೆಂಬಂತೆ ಇದ್ದರು. ಈ ಮಾದರಿ ಮತ್ತು ದೃಶ್ಯಗಳಿಂದ ನಂತರ ಬಂದು ಇಸ್ಲಾಮಿಗೆ ವಿಜಯ ತಂದುಕೊಟ್ಟ ವೀರರು ತರಬೇತಿ ಪಡೆದಿದ್ದರು. (ಸೀರತ್ ಖಾತುಮುನ್ನಬೀಈನ್, ಪುಟ–490)

ನಾನು ಈಗ ಪ್ರಸ್ತಾಪಿಸಿದ ಸಂಗತಿಗಳು ಸೀರತ್ ಖ಼ಾತಮುನ್ನಬಿಯ್ಯೀನ್‌ನಲ್ಲಿ ಇದೆ.

ಹಝ್ರತ್ ಅಬ್ಬಾಸ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಉಹದ್ ಯುದ್ಧದಿಂದ ಮರಳಿ ಬಂದಾಗ, ಹಝ್ರತ್ ಫಾತಿಮಾರಿಗೆ ತನ್ನ ಖಡ್ಗವನ್ನು ನೀಡುತ್ತಾ ಹೇಳಿದರು: ಹೇ ನನ್ನ ಪುತ್ರಿ, ಇದರಿಂದ ರಕ್ತವನ್ನು ತೊಳೆ. ಹಝ್ರತ್ ಅಲಿ(ರ) ಸಹ ತನ್ನ ಖಡ್ಗವನ್ನು ಹಝ್ರತ್ ಫಾತಿಮಾಗೆ ನೀಡುತ್ತಾ ಹೀಗೆ ಹೇಳಿದರು: ಇದರಿಂದಲೂ ರಕ್ತವನ್ನು ತೊಳೆ. ಇಂದು ಈ ಖಡ್ಗ ನನಗೆ ತುಂಬ ಸಹಾಯಕವಾಗಿತ್ತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ಹೋರಾಟದ ಜವಾಬ್ದಾರಿಯನ್ನು ಉತ್ತಮ ರೀತಿಯಲ್ಲಿ ನೆರವೇರಿಸಿರುವ ಹಾಗೆಯೇ ಖಂಡಿತವಾಗಿಯೂ ಸಹಲ್ ಬಿನ್ ಹನೀಫ್ ಮತ್ತು ಅಬೂದುಜಾನ ಸಹ ಹೋರಾಟದ ಹಕ್ಕನ್ನು ಸರಿಯಾಗಿ ಈಡೇರಿಸಿರುವರು. ಬೇರೊಂದು ವರದಿಯಲ್ಲಿ ಸಹಲ್ ಬಿನ್ ಹನೀಫ್‌ರ ಬದಲಿಗೆ ಹಾರಿಸ್ ಬಿನ್ ಸಮಅ್‌ರ ಹೆಸರು ಸಹ ಬಂದಿದೆ.

(ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–2, ಪುಟ–317, ದಾರುಲ್ ಫಿಕರ್ ಬೈರೂತ್ ಲೆಬನಾನ್ 2003) (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–420, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಝೈದ್ ಬಿನ್ ಅಸ್ಲಮ್ ವರದಿ ಮಾಡುತ್ತಾರೆ: ಹಝ್ರತ್ ಅಬೂದುಜಾನ(ರ) ರೋಗಿಯಾಗಿದ್ದಾಗ, ಅವರ ಬಳಿಗೆ ಜನರು ಬಂದರು. ಆ ಸಮಯದಲ್ಲಿ ಅವರ ಮುಖ ಹೊಳೆಯುತ್ತಿತ್ತು. ಮುಖ ಹೊಳೆಯುತ್ತಿರಲು ಕಾರಣವೇನೆಂದು ಅವರೊಡನೆ ಒಬ್ಬರು ಕೇಳಿದರು. ಹಝ್ರತ್ ಅಬೂದುಜಾನ(ರ) ಹೇಳಿದರು: ನನ್ನ ಕರ್ಮಗಳಲ್ಲಿ ಎರಡು ಕೃತ್ಯಗಳು ನನ್ನ ಪ್ರಕಾರ ತುಂಬ ಭಾರವುಳ್ಳದ್ದೂ ದೃಢವಾದದ್ದೂ ಆಗಿದೆ. ಮೊದಲನೆಯದ್ದೇನೆಂದರೆ, ನನಗೆ ಸಂಬಂಧಪಡದ ಯಾವುದೇ ಸಂಗತಿಯನ್ನು ನಾನು ಹೇಳುವುದಿಲ್ಲ. ಎರಡನೆಯದಾಗಿ, ನನ್ನ ಹೃದಯ ಮುಸ್ಲಿಮರಿಗಾಗಿ ಯಾವಾಗಲೂ ಸ್ವಚ್ಛವಾಗಿ ಇರುತ್ತದೆ. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–420, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಅಬೂದುಜಾನ(ರ) ಯಮಾಮ ಯುದ್ಧದಲ್ಲಿ ಶಹೀದ್ ಆದರು. ಹಝ್ರತ್ ಪೈಗಂಬರರ(ಸ) ನಿಧನದ ನಂತರ ಮುಸೈಲಿಮ ಕಝ್ಝಾಬ್ ಪ್ರವಾದಿತ್ವದ ಸುಳ್ಳುವಾದವನ್ನು ಮಾಡಿದ ನಂತರ ಮದೀನದ ಮೇಲೆ ಹಲ್ಲೆ ನಡೆಸಲು ಉದ್ದೇಶಿಸಿದಾಗ, ಹಝ್ರತ್ ಅಬೂಬಕ್ಕರ್(ರ) ಅದನ್ನು ದಮನಿಸಲು ಹಿಜರಿ 12ರಲ್ಲಿ ಸೈನ್ಯವನ್ನು ಕಳುಹಿಸಿದ್ದರು. ಹಝ್ರತ್ ಅಬೂದುಜಾನ(ರ) ಸಹ ಈ ಸೈನ್ಯದಲ್ಲಿ ಭಾಗಿಯಾಗಿದ್ದರು. ಹಝ್ರತ್ ಅಬೂದುಜಾನ(ರ) ಯಮಾಮ ಯುದ್ಧದಲ್ಲಿ ಶಕ್ತವಾಗಿ ಹೋರಾಡಿದರು ಮತ್ತು ಶಹಾದತಿನ ಪದವಿಯನ್ನು ಪಡೆದರು. ಪ್ರಾಚೀನ ಅರೇಬಿಯಾದ ಗೋತ್ರವಾದ ಬನೂ ಹನೀಫದ ಹಿರಿದಾದ ಒಂದು ಭಾಗ ಮಸೈಲಿಮ ಕಝ್ಝಾಬ್‌ರ ನೇತೃತ್ವದಲ್ಲಿ ಮದೀನದ ವಿರುದ್ಧ ದಂಗೆ ಎದ್ದಿದ್ದರು. ಆ ಗೋತ್ರಕ್ಕೆ ಯಮಾಮದಲ್ಲಿ ಒಂದು ತೋಟವಿತ್ತು. ಅವರು ಅದರಲ್ಲಿ ಇದ್ದುಕೊಂಡು ಯುದ್ಧ ಮಾಡುತ್ತಿದ್ದರು. ಮುಸ್ಲಿಮರಿಗೆ ಒಳಗೆ ಹೋಗಲು ಎಡೆ ಸಿಗುತ್ತಿರಲಿಲ್ಲ. ಹಝ್ರತ್ ಅಬೂದುಜಾನ(ರ) ಮುಸ್ಲಿಮರೊಡನೆ ಹೇಳಿದರು: ನನ್ನನ್ನು ತೋಟದ ಒಳಗೆ ಎಸೆಯಿರಿ. ಮುಸ್ಲಿಮರು ಅವರು ಹೇಳಿದಂತೆ ಮಾಡಿದರು. ಆದರೆ ಅವರು ಗೋಡೆಯ ಮರುಭಾಗದಲ್ಲಿ ಬಿದ್ದ ಕಾರಣದಿಂದ ಅವರ ಕಾಲು ಮುರಿದುಹೋಯಿತು. ಆದಾಗ್ಯೂ ಅವರು ತೋಟದ ಪ್ರವೇಶ ದ್ವಾರದಲ್ಲಿ ಹೋರಾಡುತ್ತಾ ಮುಶ್ರಿಕರನ್ನು ಅಲ್ಲಿಂದ ಸರಿಸಿದರು. ಹೀಗೆ ಮುಸ್ಲಿಮರು ಒಳಗೆ ಪ್ರವೇಶಿಸಿದರು. ಮುಸೈಲಿಮ ಕಝ್ಝಾಬ್‌ರನ್ನು ಕೊಲ್ಲುವುದರಲ್ಲಿ ಅಬ್ದುಲ್ಲಾಹ್ ಬಿನ್ ಝೈದ್ ಮತ್ತು ವಹ್‌ಶಿ ಬಿನ್ ಹರ್‌ಬ್‌ರೊಂದಿಗೆ ಹಝ್ರತ್ ಅಬೂದುಜಾನ(ರ) ಇದ್ದರು. ಯಮಾಮದ ದಿವಸ ಅವರು ಶಹೀದ್ ಆದರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–2, ಪುಟ–318, ದಾರುಲ್ ಫಿಕರ್ ಬೈರೂತ್ ಲೆಬನಾನ್ 2003) (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್, ಸಂಪುಟ–4, ಪುಟ–209, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2010) (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–420, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990) (ಉರ್ದು ದಾಏರಹ್ ಮುಆರಿಫ್ ಇಸ್ಲಾಮಿಯ, ಸಂಪುಟ–8, ಪುಟ–695, ಉರ್ದು ವಿಭಾಗ ಲಾಹೋರ್)

ಒಂದು ವರದಿಯ ಪ್ರಕಾರ ಹಝ್ರತ್ ಅಬುದುಜಾನ(ರ) ಸಿಫ್ಫೀನ್ ಯುದ್ಧದಲ್ಲಿ ಹಝ್ರತ್ ಅಲಿಯರ(ರ) ಕಡೆಯಿಂದ ಯುದ್ಧ ಮಾಡುತ್ತಾ ನಿಧನರಾದರು ಎಂದು ಇದೆ. ಆದರೆ, ಇದು ದುರ್ಬಲವಾದ ವರದಿಯಾಗಿದೆ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–2, ಪುಟ–318, ದಾರುಲ್ ಫಿಕರ್ ಬೈರೂತ್ ಲೆಬನಾನ್ 2003)

ಮೊದಲು ಹೇಳಿದ ವರದಿ ಹೆಚ್ಚು ಸರಿ ಮತ್ತು ಹೆಚ್ಚಿನ ಸ್ಥಳಗಳಲ್ಲಿ ಪ್ರಸ್ತಾಪಿಸಲಾಗಿದೆ. ಹಝ್ರತ್ ಅಬೂದುಜಾನರಿಗೆ ಸಂಬಂಧಿಸಿ ಇನ್ನು ಸ್ವಲ್ಪ ಸಂಗತಿಯನ್ನು ಹೇಳುತ್ತೇನೆ. ಮೊದಲು ಸಹ ಹೇಳಿದ್ದೇನೆ. ಹಝ್ರತ್ ಅಬೂದುಜಾನ ಅನ್ಸಾರಿಯಾಗಿದ್ದರು. ಎಂದರೆ, ಹಝ್ರತ್ ಪೈಗಂಬರ್‌ರನ್ನು(ಸ) ನಂಬಿದ್ದ ನಂತರ ಅವರನ್ನು ಎಲ್ಲ ರೀತಿಯಲ್ಲೂ ಸಹಾಯ ಮಾಡಿದ್ದ ಮದೀನದ ಮುಸ್ಲಿಮರು. ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆ ಹೋಗುವುದಕ್ಕೆ ಮುಂಚಿತವಾಗಿ ಹಝ್ರತ್ ಅಬೂದುಜಾನ(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು. ಮದೀನ ನಿವಾಸಿಯಾದ ಇವರಿಗೆ ಹಝ್ರತ್

ಪೈಗಂಬರರೊಂದಿಗೆ(ಸ) ಬದ್ರ್ ಯುದ್ಧದಲ್ಲಿ ಭಾಗವಹಿಸಲು ಮತ್ತು ಅತ್ಯಂತ ಶೌರ್ಯದಿಂದ ಹೋರಾಡಲು ಸೌಭಾಗ್ಯ ಲಭಿಸಿತ್ತು. ಅದೇ ರೀತಿಯಲ್ಲಿ ಇವರಿಗೆ ಉಹದ್ ಯುದ್ಧದಲ್ಲೂ ಭಾಗವಹಿಸಲು ಸೌಭಾಗ್ಯ ಲಭಿಸಿತ್ತು. ಯುದ್ಧದ ದಿಕ್ಕು ಬದಲಾದಾಗ, ಎಂದರೆ ಮೊದಲು ಮುಸ್ಲಿಮರು ಯುದ್ಧದಲಿ ಮೇಲುಗೈ ಸಾಧಿಸುತ್ತಿದ್ದರು, ಆದರೆ ಒಂದು ಜಾಗದ ಸಂರಕ್ಷಣೆ ಸರಿಯಾಗಿ ಮಾಡದ ಕಾರಣದಿಂದ ಯುದ್ಧದ ದಿಕ್ಕು ಪರಿವರ್ತನೆಗೊಂಡಿತ್ತು. ಸತ್ಯನಿಷೇಧಿಗಳು ಪುನಃ ಆಕ್ರಮಣ ನಡೆಸಿದರು. ಯುದ್ಧದ ಪಗಡೆ ಮುಸ್ಲಿಮರ ವಿರುದ್ಧವಾಯಿತು. ಆಗ ಹಝ್ರತ್ ಪೈಗಂಬರರೊಂದಿಗೆ(ಸ) ಉಳಿದಿದ್ದ ಸಹಾಬಿಯರಲ್ಲಿ ಹಝ್ರತ್ ಅಬೂದುಜಾನ(ರ) ಸಹ ಇದ್ದರು. ಹಝ್ರತ್ ಪೈಗಂಬರರನ್ನು(ಸ) ಸಂರಕ್ಷಣೆ ಮಾಡುತ್ತಾ ಅವರು ತೀವ್ರವಾಗಿ ಗಾಯಗೊಂಡಿದ್ದರು. ಆದರೂ ಅವರು ಹಿಂದೆಸರಿದಿರಲಿಲ್ಲ. ಒಂದು ಸಲ ಅವರು ರೋಗಗ್ರಸ್ತರಾದಾಗ, ತನ್ನ ಸಂಗಡಿಗರೊಡನೆ ಹೀಗೆ ಹೇಳಿದರು: ಬಹುಶಃ ನನ್ನ ಎರಡು ಸತ್ಕರ್ಮಗಳು ಅಲ್ಲಾಹನು ಸ್ವೀಕರಿಸುವನು. ಅದರಲ್ಲಿ ಒಂದೇನೆಂದರೆ, ನಾನು ಯಾವುದೇ ವ್ಯರ್ಥವಾದ ಮಾತುಗಳನ್ನು ಹೇಳುತ್ತಿರಲಿಲ್ಲ, ಯಾರನ್ನು ಹಿಂದಿನಿಂದ ದೂಷಿಸುವುದಿಲ್ಲ, ವ್ಯಕ್ತಿಯ ಗೈರುಹಾಜರಿಯಲ್ಲಿ ಅವರ ಬಗ್ಗೆ ಕೆಟ್ಟದಾಗಿ ಹೇಳುವುದಿಲ್ಲ. ಎರಡನೇ ಸಂಗತಿಯೇನೆಂದರೆ, ಮುಸ್ಲಿಮರಾದ ಯಾರ ಬಗ್ಗೆಯೂ ನನ್ನ ಹೃದಯದಲ್ಲಿ ದ್ವೇಷ ಮತ್ತು ಹಗೆಯ ಭಾವನೆಯಿಲ್ಲ. ಇದರೊಂದಿಗೆ ಇವರ ಪ್ರಸ್ತಾಪ ಮುಕ್ತಾಯವಾಯಿತು. (ಖುತ್‌ಬ ಜುಮ್‌ಅ 16–03–2018)

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅವರ ಜನಾಝ ನಮಾಝ್ ಸಹ ನಿರ್ವಹಿಸುವೆನು. ಅವರಲ್ಲಿ ಒಬ್ಬರು ಶಹೀದ್ ಸಹ ಇದ್ದಾರೆ. ಅವರನ್ನು ಕೆಲವು ದಿನಗಳಿಗೆ ಮುಂಚೆ ಶಹೀದ್ ಮಾಡಲಾಗಿತ್ತು. ಪಿಶಾವರ್ ಜಿಲ್ಲೆಯ ಸಯ್ಯಿದ್ ಜಲಾಲ್ ಸಾಹಿಬ್‌ರ ಮಗನಾದ ಶಹೀದ್ ಮುಕರ್ರಮ್ ಮಹ್ಬೂಬ್ ಖಾನ್ ಸಾಹಿಬ್. ಅವರನ್ನು ಅಹ್ಮದಿಯ್ಯತಿನ ವಿರೋಧಿಗಳು ನವೆಂಬರ್ 8, 2020ರಂದು ಬೆಳಿಗ್ಗೆ 8 ಗಂಟೆಗೆ ಪಿಶಾವರ ಜಿಲ್ಲೆಯ ಶೇಖ್ ಮುಹಮ್ಮದ್ ಗ್ರಾಮದಲ್ಲಿ ಫೈರಿಂಗ್ ಮಾಡಿ ಶಹೀದ್ ಮಾಡಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಲಭಿಸಿದ ಮಾಹಿತಿ ಪ್ರಕಾರ ಮಹ್ಬೂಬ್ ಖಾನ್ ಸಾಹಿಬರು ನವೆಂಬರ್ 6ಗೆ ಖುಶ್‌ಹಾಲ್ ಟೌನ್ ಪಿಶಾವರ್‌ನಿಂದ ತನ್ನ ಮೊಮ್ಮಗಳನ್ನು ಭೇಟಿಯಾಗಲು ಹೋಗಿದ್ದರು. ಮೊಮ್ಮಗಳು ತನ್ನ ಫ್ಯಾಮಿಲಿಯೊಂದಿಗೆ ಶೇಖ್ ಮುಹಮ್ಮದಿ ಗ್ರಾಮದಲ್ಲಿ ಇದ್ದಳು. ನವೆಂಬರ್ 8ಗೆ ಮರಳಿಹೋಗಲಿಕ್ಕಾಗಿ ಮನೆಯಿಂದ ಹೊರಟಿದ್ದರು. ಬಸ್‌ಸ್ಟಾಪಿನ ಸಮೀಪ ತಲುಪುವಷ್ಟರಲ್ಲಿ ಅಪರಿಚಿತನಾದ ಒಬ್ಬ ವ್ಯಕ್ತಿ ಹಿಂದಿನಿಂದ ಬಂದು ಫಾಯರಿಂಗ್ ಮಾಡಿದನು. ಒಂದು ಗುಂಡು ತಲೆಯ ಹಿಂದಿನ ಭಾಗಕ್ಕೆ ತಗುಲಿ ಮುಂದಿನಿಂದ ಹಾದುಹೋಯಿತು. ಅದರಿಂದ ಘಟನೆ ಸ್ಥಳದಲ್ಲೇ ಅವರು ವಫಾತ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಘಟನೆಯ ನಂತರ ಕೊಲೆಗಾರನು ಪರಾರಿಯಾದನು. ದಿವಂಗತರಿಗೆ ಸುಮಾರು 80 ವರ್ಷ ಪ್ರಾಯವಿತ್ತು. ದಿವಂಗತರು ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನಿಂದ 2020ರಲ್ಲಿ ಆಫೀಸರ್ ಸುಪ್ರೆಂಡ್ ಎಂಬ ಸ್ಥಾನದಿಂದ ನಿವೃತ್ತರಾಗಿ ಪೆನ್ಶನರ್ ಎಂಬ ನೆಲೆಯಲ್ಲಿ ಜೀವನ ಸಾಗಿಸುತ್ತಿದ್ದರು. ಶಹೀದರ ತಂದೆಯಾದ ಸಯ್ಯಿದ್ ಜಲಾಲ್ ಸಾಹಿಬರು 1930ರ ಆಸುಪಾಸಿನಲ್ಲಿ ಬೈಅತ್ ಮಾಡಿದರು. ಶಹೀದ್ ಜನ್ಮತಃ ಅಹ್ಮದಿಯಾಗಿದ್ದರು.

ದಿವಂಗತರು ಹಲವಾರು ಗುಣವೈಶಿಷ್ಟ್ಯಗಳನ್ನು ಹೊಂದಿದ್ದರು. ತಹಜ್ಜುದ್ ನಿಯತವಾಗಿ ಅನುಷ್ಠಿಸುತ್ತಿದ್ದರು. ಸಭ್ಯತೆ, ಸಹಾನುಭೂತಿ ಅತಿಥಿ ಸತ್ಕಾರದ ಗುಣಗಳಲ್ಲದೆ, ಉದಾರತೆಯಲ್ಲಿ ಮುಂದಿದ್ದರು. ತಬ್ಲೀಗ್ ಮಾಡುವುದರಲ್ಲಿ ತುಂಬ ಆವೇಶ ಹೊಂದಿದ್ದರು. ಸತ್ಯದ ಸಂದೇಶವನ್ನು ತಲುಪಿಸುವುದರಲ್ಲಿ ತುಂಬ ಮುಂದಿದ್ದರು. ತಬ್ಲೀಗ್ ಮಾಡುವುದರಲ್ಲಿ ಸ್ವಲ್ಪ ಮುನ್ನೆಚ್ಚರಿಕೆ ವಹಿಸಲು ಅವರೊಡನೆ ಹೇಳಲ್ಪಡುವಾಗಲೆಲ್ಲ ಅವರಿಗೆ ಅದರ ಬಗ್ಗೆ ಒಂದೇ ನಿಲುವಾಗಿತ್ತು. ಅದೇನೆಂದರೆ, ಈಗ ಅಲ್ಲಾಹನ ಮುಂದೆ ಹಾಜರಾಗುವ ಸಮಯ ಆಗಿ ಬಿಟ್ಟಿದೆ. ಹೀಗಿರುವಾಗ ಶಹಾದತ್ ಪದವಿ ಸಿಕ್ಕರೆ ನನಗೆ ಅದು ಸೌಭಾಗ್ಯವಾಗಿರುವುದು. ಹೇಗಿದ್ದರೂ ಅವರಿಗೆ ಇದ್ದ ಶಹಾದತಿನ ಅಭಿಲಾಷೆ ಸಹ ಈಡೇರಿತ್ತು. ಮಹ್ಬೂಬ್ ಖಾನ್ ಸಾಹಿಬ್ ಶಹೀದರ ಪತ್ನಿಯಾದ ಮೀರಾಜ್ ಬೇಗಂ ಸಾಹಿಬರ ತಂದೆಯಾದ ಮುಹಮ್ಮದ್ ಸಈದ್ ಸಾಹಿಬ್ ಮತ್ತು ಅವರ ಚಿಕ್ಕಪ್ಪರಾದ ಬಶೀರ್ ಅಹ್ಮದ್ ಸಾಹಿಬ್ ಸಹ 1966ರಲ್ಲಿ ಶಹೀದ್ ಆಗಿದ್ದರು. ಈಗ ಆ ಸೌಭಾಗ್ಯ ಇವರ ಗಂಡನಿಗೂ ಲಭಿಸಿದೆ. ಹೀಗೆ ಅವರು ಶಹೀದರ ಮಗಳು, ಶಹೀದರ ಸಹೋದರನ ಮಗಳು ಮತ್ತು ಶಹೀದರ ಪತ್ನಿಯಾಗಿದ್ದಾರೆ.

ದಿವಂಗತರು ಪತ್ನಿಯನ್ನಲ್ಲದೆ, ಇಬ್ಬರು ಗಂಡು ಮಕ್ಕಳಾದ ಮುನವ್ವರ್ ಸಾಹಿಬ್ ಮತ್ತು ಫರ್ರುಖ್ ಅಹ್ಮದ್ ಸಾಹಿಬ್ ಹಾಗೂ ಇಬ್ಬರು ಪುತ್ರಿಯರಾದ ಧಕಿಯಾ ಬೇಗಂ ಸಾಹಿಬ ಮತ್ತು ವಹೀದ ಬೇಗಂ ಸಾಹಿಬ ಹಾಗೂ 12 ಮೊಮ್ಮಕ್ಕಳನ್ನು ಅಗಲಿದ್ದಾರೆ. ದಿವಂಗತರ ಕಿರಿಯ ಮಗನು ಮೈಕ್ರೋ ಬಯೋಲಜಿಯಲ್ಲಿ ಪಿ.ಎಚ್.ಡಿ.ಮಾಡಿರುವರು. ಅವರು ಆಸ್ಟ್ರೇಲಿಯಾದಲ್ಲಿ ಇದ್ದಾರೆ. ಹಿರಿಯ ಮಗನಾದ ಫರ್ರುಖ್ ಅಹ್ಮದ್ ಸಾಹಿಬರು ಸಹ ವಿದ್ಯಾವಂತರಾಗಿರುವರು. ಅವರು ಇಂಗ್ಲಿಷಿನಲ್ಲಿ ಎಂ.ಎ.ಮಾಡಿರುವರು. ಜರ್ಮನಿಯಲ್ಲಿ ನೆಲೆಸಿದ್ದಾರೆ.

ಅವರ ಮಗನಾದ ಮುನವ್ವರ್ ಅಹ್ಮದ್ ಸಾಹಿಬರು ಹೇಳುತ್ತಾರೆ: ನನ್ನ ತಂದೆ ತನ್ನ ಪ್ರದೇಶದಲ್ಲಿ ಶಾಂತಿ ಸಮಾಧಾನ ಸ್ಥಾಪನೆಯಲ್ಲಿ ಕಾರ್ಯನಿರತರಾಗಿರುತ್ತಿದ್ದರು. ಕೆಲವು ಸಲ ಎರಡು ಪಕ್ಷಗಳ ನಡುವೆ ಜಗಳಗಳು ಆಗುವಾಗ, ಅವರ ನಡುವೆ ರಾಜಿಮಾಡಲು ತನ್ನ ಬಳಿಯಿಂದ ಪರಿಹಾರಧನವನ್ನು ಸಹ ನೀಡುತ್ತಿದ್ದರು. ಅವರು ದರಿದ್ರ ಮತ್ತು ನಿರ್ಗತಿಕರ ಸಹಾಯಕ್ಕಾಗಿ ಪ್ರತಿದಿನ ತಯಾರಿರುತ್ತಿದ್ದರು. ಜನರು ತಮ್ಮ ಆವಶ್ಯಕತೆಗಳನ್ನು ಪೂರೈಸಲು ಯಾವುದೇ ಹಿಂಜರಿಕೆಯಿಲ್ಲದೆ, ಅವರ ಬಳಿಗೆ ಹೋಗುತ್ತಿದ್ದರು. ಅವರು ಅವರ ಸಹಾಯಕ್ಕಾಗಿ ಸದಾ ಸ್ವಲ್ಪ ಹಣ ಮತ್ತು ಧಾನ್ಯಗಳನ್ನು ತಮ್ಮ ಬಳಿ ಇರಿಸುತ್ತಿದ್ದರು. ಬಹಳ ವಿನಯವಂತ ಮತ್ತು ಮಿತಭಾಷಿಯಾಗಿದ್ದರು. ಬಹಳ ಸಹನೆಯುಳ್ಳವರೂ ಸಹಾನುಭೂತಿಯುಳ್ಳವರೂ ಆಗಿದ್ದರು. ಯಾವಾಗಲು ಅವರ ಸಹಾಯಕ್ಕಾಗಿ ತಯಾರಾಗಿರುತ್ತಿದ್ದರು. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಸಂಬಂಧಿಕರಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ಸಿಗಲಿ.

ಎರಡನೇ ಜನಾಝ ಜಮಾಅತಿನ ಮುರಬ್ಬಿಯಾದ ಫಖ್ರ್ ಅಹ್ಮದ್ ಫಖ್ರ್ ಸಾಹಿಬರದ್ದಾಗಿದೆ. 2020 ನವೆಂಬರ್ 1ರಂದು, ಸಂಜೆ 6.15ಗೆ ಒಂದು ರಸ್ತೆ ಅಪಘಾತದಲ್ಲಿ ಮೃತಪಟ್ಟರು. ಅವರ ಮಗನಾದ ಇಹ್ತಿಶಾಮ್ ಅಬ್ದುಲ್ಲಾಹ್‌ರೊಂದಿಗೆ ಅಹ್ಮದ್ ನಗರ್‌ನಿಂದ ಬರುತ್ತಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ತಂದೆ ಮಗನು ಇಬ್ಬರೂ ಈ ಅಪಾಯಕಾರಿ ಅಪಘಾತದಲ್ಲಿ ಘಟನೆ ಸ್ಥಳದಲ್ಲೇ ಮೃತರಾದರು. ಅಲ್ಲಾಹನ ಅನುಗ್ರಹದಿಂದ ಫಖ್ರ್ ಸಾಹಿಬರು ಮೂಸಿಯಾಗಿದ್ದರು. ಫಖ್ರ್ ಸಾಹಿಬರ ತಂದೆಯಾದ ಸೈಫುರ್ರಹ್ಮಾನ್ ಸಾಹಿಬರು ಸ್ವತಃ ಬೈಅತ್ ಮಾಡಿದ್ದರು. ಇವರ ಕುಟುಂಬದಲ್ಲಿ ಇವರ ತಂದೆಗಿಂತ ಮುಂಚೆ ಬೇರೆ ಯಾರೂ ಅಹ್ಮದಿಯಾಗಿ ಇದ್ದಿರಲಿಲ್ಲ. 1968ರಲ್ಲಿ ಅವರು ಬೈಅತ್ ಮಾಡಿದ್ದರು. ಹೀಗೆ ಅವರು ಕುಟುಂಬದ ಮೊದಲ ಅಹ್ಮದಿಯಾದರು. ಫಖ್ರ್ ಅಹ್ಮದ್ ಸಾಹಿಬರು 1996ರಲ್ಲಿ ಜಾಮಿಅ ಅಹ್ಮದಿಯಾ ರಬ್ವದಿಂದ ತೇರ್ಗಡೆಯಾಗಿ ಪಾಕಿಸ್ತಾನದ ಹಲವು ಸ್ಥಳಗಳಲ್ಲಿ ಸೇವೆ ಮಾಡಲು ಸೌಭಾಗ್ಯ ಪಡೆದಿದ್ದರು. ಅವರನ್ನು ಪಶ್ಚಿಮ ಆಫ್ರಿಕದಲ್ಲಿ ಐವರಿಕೋಸ್ಟಿಗೆ ಸಹ ಕಳುಹಿಸಲಾಗಿತ್ತು. ಅನಂತರ ಕಳೆದ ಎಂಟು ವರ್ಷಗಳಿಂದ ಅಹ್ಮದ್‌ನಗರಿನಲ್ಲಿ ಮುಬಲ್ಲಿಗ್‌ರಾಗಿ ಸೇವೆ ಮಾಡುತ್ತಿದ್ದರು. ಇವರ ವಿವಾಹ ಅಲಿ ಅಸ್ಗರ್ ಸಾಹಿಬ್‌ರ ಮಗಳಾದ ತಾಹಿರ ಫಖ್ರ್ ಸಾಹಿಬರೊಂದಿಗೆ ನಡೆದಿತ್ತು. ಅವರಿಗೆ ನಾಲ್ಕು ಪುತ್ರಿಯರು ಮತ್ತು ಒಬ್ಬ ಪುತ್ರ ಇರುವರು. ಮಗನಾದ ಇಹ್ತಿಶಾಮ್ ಅಬ್ದುಲ್ಲಾಹ್ ಸಾಹಿಬರು ತಂದೆಯೊಂದಿಗೆ ಆಕ್ಸಿಡೆಂಟಿನಲ್ಲಿ ಮೃತಪಟ್ಟರು. ಹೀಗೆ ಅವರು ಪತ್ನಿಯನ್ನು ಮತ್ತು ನಾಲ್ಕು ಪುತ್ರಿಯರನ್ನಲ್ಲದೆ, ತಾಯಿಯನ್ನು ಮತ್ತು ಸಹೋದರ ಸಹೋದರಿಯರನ್ನು ಅಗಲಿದ್ದಾರೆ. ಅವರ ಪುತ್ರಿಯರ ಹೆಸರುಗಳು ಹೀಗಿವೆ: ವಜೀಹ, ಅಮತುಸ್ಸಬೂಹ್, ಖಾಫಿಯ ಫಖ್ರ್, ಸಮ್ರೀನ್ ಫಖ್ರ್, ಮೆಹ್ರೀನ್ ಫಖ್ರ್. ಫಖ್ರ್ ಸಾಹಿಬ್‌ರ ಪತ್ನಿಯಾದ ತಾಹಿರ ಸಾಹಿಬ ಬರೆಯುತ್ತಾರೆ: ನಮ್ಮ ವಿವಾಹ ನಡೆದ ಸಮಯದಲ್ಲಿ ಮುರಬ್ಬಿ ಸಾಹಿಬರು ಖುಶಾಬಿನ ಒಂದು ಗ್ರಾಮದಲ್ಲಿ ಡ್ಯೂಟಿ ಮಾಡುತ್ತಿದ್ದರು. ಅಲ್ಲಿ ಅವರ ಪೋಸ್ಟಿಂಗ್ ಆಗಿತ್ತು. ನಾನು ಆ ಸೆಂಟರಿಗೆ ಹೋದಾಗ, ಅವರು ಮುರಬ್ಬಿಯ ಪತ್ನಿಯ ಕರ್ತವ್ಯಗಳನ್ನು ನನಗೆ ಹೇಳಿಕೊಟ್ಟರು. ಈಗ ನೀನು ಸಹ ನನ್ನ ಹಾಗೆ ವಖ್ಫ್ ಆಗಿರುವಿಯಾ, ಆದ್ದರಿಂದ ನೀನೂ ಜಮಾಅತಿನ ಕೆಲಸಗಳಲ್ಲಿ ಉತ್ಸಾಹದಿಂದ ಭಾಗವಹಿಸಬೇಕೆಂದು ಮನವರಿಕೆ ಮಾಡಿಕೊಟ್ಟಿದ್ದರು. ಈ ರೀತಿಯಲ್ಲಿ ನನ್ನ ತರ್ಬಿಯತ್ ಮಾಡಿದ್ದರು. ಅದರ ನಂತರ ಅಲ್ಲಿಂದ ಬದ್‌ಯನಿಗೆ ಅವರು ಟ್ರಾನ್ಸ್‌ಫರ್ ಆದರು. ಮುರಬ್ಬಿ ಸಾಹಿಬರು ಮೊದಲು ಹೋದರು. ನಾನು ಕೆಲವು ದಿನಗಳ ನಂತರ ಹೋಗಿದ್ದೆ. ನಾನು ಅಲ್ಲಿಗೆ ಬರುತ್ತಿರುವ ಬಗ್ಗೆ ಮೊದಲೇ ಸಂದೇಶ ಕಳುಹಿಸಿದ ನಂತರ, ಸೆಂಟರಿಗೆ ಹೋಗಿದ್ದೆ. ನಾನು ಅಲ್ಲಿಗೆ ತಲುಪಿದಾಗ, ಅವರು ಮನೆಯಲ್ಲಿ ಇದ್ದಿರಲಿಲ್ಲ. ನಾನು ಹೊರಗೆ ಬಿಸಿಲಲ್ಲಿ ಕುಳಿತುಕೊಂಡೇ ಇದ್ದೆ. ಮುರಬ್ಬಿ ಸಾಹಿಬರು ಮುಅಲ್ಲಿಮೊಬ್ಬರ ಪತ್ನಿ ರೋಗಿಯಾಗಿದ್ದ ಕಾರಣದಿಂದ ಅವರಿಗೆ ರಕ್ತದಾನ ಮಾಡಲು ದೂರದ ಒಂದು ಆಸ್ಪತ್ರೆಗೆ ಹೋಗಿದ್ದರು. ಅವರು ಮರಳಿ ಬಂದಾಗ ನಾನು ಅವರೊಡನೆ ಹೇಳಿದೆ: ಪೂರ್ತಿ ದಿನ ನಾನು ಬಿಸಿಲ್ಲಲ್ಲಿ ಹೊರಗೆ ಕುಳಿತ್ತಿದ್ದೆ. ನಾನು ದೀರ್ಘವಾದ ಯಾತ್ರೆ ಮಾಡಿ ಬರುತ್ತಿರುವ ಬಗ್ಗೆ ನಿಮಗೆ ಗೊತ್ತಿತ್ತು. ಮತ್ತೇಕೆ ನೀವು ಹೋಗಿದ್ದೀರಿ. ಅವರು ಹೇಳಿದರು: ಆ ಕೆಲಸ ಸಹ ತುಂಬ ಆವಶ್ಯಕವಾದ ಕೆಲಸವಾಗಿತ್ತು. ಈ ರೀತಿಯಲ್ಲಿ ತ್ಯಾಗಗಳನ್ನು ಮಾಡಬೇಕೆಂದು ತಿಳಿಸಿದರು.

ಐವರಿಕೋಸ್ಟಿನಲ್ಲಿ ಇದ್ದಾಗ, ಅಲ್ಲೂ ಅವರು ದೀನಿನ ಸೇವೆಯೊಂದಿಗೆ ಜನಸೇವೆಯ ಕೆಲಸವನ್ನು ಮತ್ತು ಖಿದ್‌ಮತೆ ಖಲ್‌ಖಿನ ಕೆಲಸವನ್ನು ಮಾಡುತ್ತಿದ್ದರು. ಯಾವಾಗಲೂ ಪತ್ನಿ ಮತ್ತು ಮಕ್ಕಳಿಗಿಂತ ಧರ್ಮಕ್ಕೆ ಆದ್ಯತೆ ನೀಡುತ್ತಿದ್ದರು. ಪತ್ನಿ ಹೇಳುತ್ತಾರೆ: ಒಂದು ಸಲ ನನ್ನ ಆರೋಗ್ಯ ಕೆಟ್ಟುಹೋಗಿತ್ತು. ಪ್ರಸವದ ಸಮಯವಾಗಿತ್ತು. ಮುರಬ್ಬಿ ಸಾಹಿಬರು ಆ ಸಮಯದಲ್ಲಿ ನನ್ನನ್ನು ಬಿಟ್ಟು ಮೆಡಿಕಲ್ ಕ್ಯಾಂಪಿಗೆ ಹೋಗಿದ್ದರು. ಅಲ್ಲಾಹನು ಅನುಗ್ರಹಿಸುವನು. ನೀನು ವಖ್ಫ್ ಝಿಂದಗಿಯ ಪತ್ನಿಯಾಗಿದ್ದೀಯ. ನಿನಗೆ ಏನೂ ಆಗಲಿಕ್ಕಿಲ್ಲ ಎಂದು ಮಾತ್ರ ಹೇಳಿ ಹೊರಟಹೋಗಿದ್ದರು. ಒಟ್ಟಿನಲ್ಲಿ, ಮುರಬ್ಬಿ ಸಾಹಿಬರು ಪ್ರತಿಯೊಂದು ಕಾರ್ಯದಲ್ಲಿ ದೀನಿಗೆ ಲೌಕಿಕ ಕಾರ್ಯದ ಮೇಲೆ ಆದ್ಯತೆ ನೀಡಿದ್ದರು. ಅತಿಥಿ ಸತ್ಕಾರ, ದೀನಿನ ಸೇವೆ, ಸೃಷ್ಟಿಯ ಸೇವೆ ಮಾಡುವವರಾಗಿದ್ದರು. ಸ್ವಂತ ಜನರನ್ನು ಮತ್ತು ಇತರರನ್ನು ಪ್ರೀತಿಸುತ್ತಿದ್ದರು. ಮಕ್ಕಳೊಂದಿಗೆ ಗೆಳೆತನದ ಸಂಬಂಧವನ್ನು ಇರಿಸಿದ್ದರು. ಮನೆಯ, ಕುಟುಂಬದ, ಜಮಾಅತಿನ ಮತ್ತು ಜಮಾಅತಿನ ಹೊರಗಿನ ವಿಷಯಗಳನ್ನು ತುಂಬ ಚೆನ್ನಾಗಿ ಮನವರಿಕೆ ಮಾಡಿಸಿಕೊಡುತ್ತಿದ್ದರು ಹಾಗೂ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು. ನೀವು ವಖ್ಫೆ ಝಿಂದಗಿಯ ಮತ್ತು ಮುರಬ್ಬಿಯ ಮಕ್ಕಳಾಗಿದ್ದೀರಿ ಆದ್ದರಿಂದ ಯಾವಾಗಲೂ ದೀನಿಗೆ ಲೌಕಿಕವಾದ ಕಾರ್ಯಕ್ಕಿಂತ ಬೆಲೆಕೊಡಬೇಕೆಂದೂ ಉತ್ತಮ ಮಾದರಿಯನ್ನು ತೋರಿಸಬೇಕೆಂದೂ ಮಕ್ಕಳೊಡನೆ ಸಹ ಹೇಳುತ್ತಿದ್ದರು.

ಐವರಿ ಕೋಸ್ಟಿನ ಮುರಬ್ಬಿಯಾಗಿರುವ ವಾಸಿಫ್ ಸಾಹಿಬರು ಹೇಳುತ್ತಾರೆ: ಫಖ್‌ರ್ ಸಾಹಿಬರು ಮುಬಲ್ಲಿಗ್ ಎಂಬ ನೆಲೆಯಲ್ಲಿ ಐವರಿಕೋಸ್ಟಿನಲ್ಲಿ ಇದ್ದರು. ಬಹಳ ಸ್ನೇಹಮಯಿ, ಹಸನ್ಮುಖಿ ಮತ್ತು ಉತ್ತಮ ಸ್ವಭಾವಗುಣಗಳನ್ನು ಹೊಂದಿದ್ದವರಾಗಿದ್ದರು. ಮನಸ್ಸನ್ನು ಆಕರ್ಷಿಸುವಂತಹ ಮಾತುಕತೆಯಾಗಿತ್ತು ಅವರ ವ್ಯಕ್ತಿತ್ವದ ಒಂದು ವಿಶೇಷತೆ. ಅವರನ್ನು ಭೇಟಿಯಾಗುವವರು ಬೇಗನೇ ಅವರನ್ನು ಇಷ್ಟಪಡುತ್ತಿದ್ದರು. ಐದು ವರ್ಷಗಳಷ್ಟು ಕಾಲ ಓಮೆ ರೀಜನನಲ್ಲಿ ಮುಬಲ್ಲಿಗ್ ಆಗಿ ಡ್ಯೂಟಿ ನೀಡಿದ್ದರು ಉತ್ತಮ ಸ್ವಭಾವ ಮತ್ತು ಸಹಾನುಭೂತಿಯ ಕಾರಣದಿಂದ ಹಿರಿಯರೂ ಕಿರಿಯರೂ ಆದ ಎಲ್ಲರೂ ಅವರೊಡನೆ ಸಂಬಂಧವಿರಿಸುತ್ತಿದ್ದರು. ಜಲ್ಸ ಸಾಲಾನಕ್ಕೆ ಹೋಗಲಿಕ್ಕಾಗಿ ಕೆಲವು ಬಡವರಿಗೆ ರಹಸ್ಯವಾಗಿ ಪ್ರಯಾಣದ ಖರ್ಚನ್ನು ನೀಡುತ್ತಿದ್ದರು. ಅವರು ಅಲ್ಲಿದ್ದಾಗ, ಅವರ ರೀಜನ್ ಜಲ್ಸ ಸಾಲಾನದ ಹಾಜರಿಯಲ್ಲಿ ಮೊದಲ ಸ್ಥಾನವನ್ನು ಹೊಂದಿತ್ತು. ಅಲ್ಲಿಯ ಲೋಕಲ್ ಮುಅಲ್ಲಿಮ್ ಆದ ಸಮಾರ್ ಹಾರೂನ್ ಸಾಹಿಬರು ಹೇಳುತ್ತಾರೆ: ಎರಡುವರೆ ವರ್ಷ ಅವರೊಂದಿಗೆ ಕೆಲಸಮಾಡಿದ್ದೆ. ಸಹೋದರನಂತೆ ನನ್ನ ಗಮನವಹಿಸುತ್ತಿದ್ದರು. ಅವರು ಅತ್ಯಂತ ಪರಿಶ್ರಮಿ ಮತ್ತು ಆವೇಶದಿಂದ ಕೆಲಸ ಮಾಡುತ್ತಿದ್ದ ಮುಬಲ್ಲಿಗ್ ಆಗಿದ್ದರು ಎಂಬುದು ನಾನು ಅವರ ಬಗ್ಗೆ ನೋಟ್ ಮಾಡಿದ ಒಂದು ಸಂಗತಿಯಾಗಿದೆ. ಎಲ್ಲ ಕೆಲಸವನ್ನು ಬಹಳ ಜವಾಬ್ದಾರಿಯಿಂದ ಮತ್ತು ಮಗ್ನತೆಯಿಂದ ಮಾಡುತ್ತಿದ್ದರು. ತನ್ನ ಕೆಲಸಗಳನ್ನು ಬೇಗನೆ ಮುಗಿಸಲು ದೃಢಸಂಕಲ್ಪವನ್ನು ಹೊಂದಿದ್ದರು. ಅದು ತಬ್ಲೀಗಿನ ಕೆಲಸವಾದರೂ ಚಂದಾ ವಸೂಲು ಮಾಡುವ ಕೆಲಸವಾದರೂ ಜಲ್ಸ ಸಾಲಾನಕ್ಕಾಗಿ ತಯಾರಿಯ ಕೆಲಸವಾದರೂ ಸರಿ. ಪ್ರತಿಯೊಂದು ಗ್ರಾಮದಲ್ಲಿ ಜಮಾಅತಿನ ಸಂದೇಶ ಬೇಗನೆ ತಲುಪಬೇಕು ಎಂಬ ಅಭಿಲಾಷೆಯನ್ನು ಹೊಂದಿದ್ದರು. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ. ಅಲ್ಲಾಹನು ಅವರ ಮಕ್ಕಳ ಮತ್ತು ಪತ್ನಿಯ ಸಹಾಯಕ ಮತ್ತು ಸಂರಕ್ಷಕನಾಗಲಿ. ಅವರನ್ನು ಎಲ್ಲ ರೀತಿಯ ಕಷ್ಟತೆಗಳಿಂದ ರಕ್ಷಿಸಲಿ.

ಮೂರನೇ ಜನಾಝ ಈ ಮುರಬ್ಬಿಯಾದ ಫಖ್ರ್ ಅಹ್ಮದ್ ಸಾಹಿಬರ ಮಗನಾದ ಇಹ್ತಿಶಾಮ್ ಅಬ್ದುಲ್ಲಾಹ್‌ರದ್ದಾಗಿದೆ. ನಾನು ಹೇಳಿದಂತೆ ಇವರು ಕೂಡ ತನ್ನ ತಂದೆಯೊಂದಿಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರು. ಅಲ್ಲಾಹನ ಅನುಗ್ರಹದಿಂದ ವಖ್‌ಫೆ ನೌವಿನ ಅನುಗ್ರಹೀತ ಯೋಜನೆಯಲ್ಲಿ ಇದ್ದರು. ಇವರು ಫಸ್ಟ್ ಇಯರ್‌ನಲ್ಲಿ ಕಲಿಯುತ್ತಿದ್ದರು. ಮೂಸಿಯಾಗಿರಲಿಲ್ಲ. ವಸಿಯ್ಯತ್ ಫಾರ್ಮ್ ಭರ್ತಿಮಾಡಿ ಇಟ್ಟಿದ್ದರು. ಭರ್ತಿ ಮಾಡಿರುವುದಾದರೆ, ಹೇಗಿದ್ದರೂ ವಸಿಯ್ಯತಿನ ಇಂಚಾರ್ಜ್ ಇದನ್ನು ಸರಿಮಾಡಬಹುದಾಗಿದೆ. ಅವರ ತಾಯಿ ಹೇಳುತ್ತಾರೆ: ನನ್ನ ಮಗನು ಹಲವು ಉತ್ತಮಗುಣಗಳನ್ನು ಹೊಂದಿದ್ದರು. ವಿಧೇಯನೂ ಒಳ್ಳೆಯವನೂ ಆಗಿದ್ದನು. ವಖ್ಫೆ ನೌ ಆಗಿದ್ದನು. ನಮಾಝ್ ನಿಯತವಾಗಿ ಅನುಷ್ಠಿಸುತ್ತಿದ್ದನು. ಖುದ್ದಾಮುಲ್ ಅಹ್ಮದಿಯಾದ ಖಾಇದಿನ ಪ್ರತಿಯೊಂದು ಆದೇಶವನ್ನು ಪಾಲಿಸುತ್ತಿದ್ದನು. ಡ್ಯೂಟಿ ಇತ್ಯಾದಿಗಳನ್ನು ಬಹಳ ಸಂತೋಷದಿಂದ ಮಾಡುತ್ತಿದ್ದನು. ನಿಧನನಾದ ದಿವಸವೂ ಮಸೀದಿಯಲ್ಲಿ ಡ್ಯೂಟಿ ನೀಡಿದ್ದನು. ಅಲ್ಲಾಹನು ದಿವಂಗತನೊಂದಿಗೆ ಕ್ಷಮೆ ಮತ್ತು ಕಾರುಣ್ಯದಿಂದ ವರ್ತಿಸಲಿ. ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ರಬ್ವದ ಮಿಯಾ ಅಬ್ದುಲ್ಲತೀಫ್ ಸಾಹಿಬರ ಮಗನಾದ ಸನ್ಮಾನ್ಯ ಡಾಕ್ಟರ್ ಅಬ್ದುಲ್ ಕರೀಂ ಸಾಹಿಬರದ್ದಾಗಿದೆ. ಅವರು ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನದ ಇಕ್‌ನೋಮಿಕ್ ಅಡ್‌ವೈಸರ್ ಆಗಿದ್ದರು. ನಿವೃತ್ತರಾಗಿದ್ದರು. ಸೆಪ್ಟೆಂಬರ್ 14ರಂದು 92ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾದ ಮೌಲವಿ ಮುಹಮ್ಮದ್ ಅಲಿ ಸಾಹಿಬರ ಮೊಮ್ಮಗರಾಗಿದ್ದರು. ಖಾದಿಯಾನಿನ ತಾಲೀಮುಲ್ ಇಸ್ಲಾಮ್ ಕಾಲೇಜಿನ ಮೊದಲಿನ ಬಾಚಿನಲ್ಲಿ ಇದ್ದರು. ಪಾರ್ಟಿಶನ್ ನಂತರ ತಾಲೀಮುಲ್ ಇಸ್ಲಾಂ ಕಾಲೇಜ್ ಲಾಹೋರಿನ ವಿದ್ಯಾರ್ಥಿಯೆಂಬ ನೆಲೆಯಲ್ಲಿ ಪಂಜಾಬ್ ಯೂನವರ್ಸಿಟಿಯಿಂದ ಎಂ.ಎ.ಪೂರ್ತಿ ಮಾಡಿದ್ದರು. ನಂತರ ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನದ ವತಿಯಿಂದ ಸ್ಕಾಲರ್‌ಶಿಪ್‌ನಲ್ಲಿ ಜಾರ್ಜ್ ವಾಶಿಂಗ್‌ಟನ್ ಯೂನವರ್ಸಿಟಿಯಲ್ಲಿ ಇಕ್ನೋಮಿಕ್ಸ್‌ನಲ್ಲಿ ಪಿ.ಎಚ್.ಡಿ.ಮಾಡಲಿಕ್ಕೆ ಅಮೇರಿಕ ಹೋದರು. ಅಲ್ಲೂ ಮಸ್ಜಿದ್ ಫಝ್ಲ್‌ನಲ್ಲಿ ಇರುತ್ತಿದ್ದರು. ಅಲ್ಲಿ ಬಿಡುವಿನ ವೇಳೆಯಲ್ಲಿ ತಬ್ಲೀಗಿನ ಕೆಲಸದಲ್ಲಿ ನಿರತರಾಗುತ್ತಿದ್ದರು. ಡಾಕ್ಟರ್ ಸಾಹಿಬರಿಗೆ ತನ್ನ ಸ್ವದೇಶವಾದ ಪಾಕಿಸ್ತಾನದ ಮೇಲೆ ತುಂಬ ಪ್ರೀತಿಯಿತ್ತು. ಅವರು ತಮ್ಮ ಕೆರಿಯರ್‌ನಲ್ಲಿ ಅಂತರ್‌ರಾಷ್ಟ್ರೀಯ ಸ್ಥಾಪನೆಯಾದ ವಲ್ಡ್ ಬ್ಯಾಂಕ್‌ನಲ್ಲಿ ಕೆಲಸ ಮಾಡಿದ್ದರೂ ಪಾಕಿಸ್ತಾನದಲ್ಲೇ ಇದ್ದು ಕೆಲಸ ಮಾಡುವುದನ್ನು ಹೆಚ್ಚು ಇಷ್ಟಪಟ್ಟಿದ್ದರು. ದೀರ್ಘಕಾಲದ ವರೆಗೆ ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನದಲ್ಲಿ ಕೆಲಸ ಮಾಡಿದ್ದರು. ಅಡ್‌ವೈಸರ್ ಎಂಬ ಸ್ಥಾನದಲ್ಲಿದ್ದುಕೊಂಡ ನಂತರ ನಿವೃತ್ತರಾಗಿದ್ದರು. ತಮ್ಮ ಕಾಲಘಟ್ಟದಲ್ಲಿ ಐ.ಎಂ.ಎಫ್. ಮತ್ತು ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ನಂತರ ಸಂಸ್ಥೆಗಳಲ್ಲಿ ಹಲವಾರು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಅಸಾಯಿನ್‌ಮೆಂಟ್‌ಗಳನ್ನು ಯಶಸ್ಸಿನೊಂದಿಗೆ ಪೂರ್ತಿ ಮಾಡಿದ್ದರು. ಹಣಕಾಸು ಸಚಿವಾಲಯದಲ್ಲೂ ಕೆಲವು ಕಾಲ ಕೆಲಸಮಾಡಿದ್ದರು. ಒಂದು ಫೆಡರೇಶನ್ ಬಜಟ್ ಸಹ ಅವರ ಮೇಲ್ನೋಟದಲ್ಲಿ ತಯಾರಾಗಿತ್ತು. ಅವರನ್ನು ಎರಡು ವರ್ಷಗಳಿಗೆ ಐ.ಎಮ್.ಎಫ್.ವತಿಯಿಂದ ಸೂಡಾನ್ ಸರ್ಕಾರದ ಆರ್ಥಿಕ ಸ್ಥಿತಿಗಳನ್ನು ಸುಧಾರಿಸಲಿಕ್ಕಾಗಿ ಸಹ ಕಳುಹಿಸಲಾಗಿತ್ತು. ಸ್ಟೇಟ್ ಬ್ಯಾಂಕಿನಿಂದ ನಿವೃತ್ತರಾದ ನಂತರ ಜಮಾಅತಿನ ಸೇವೆಯ ಸಲುವಾಗಿ ರಬ್ವದಲ್ಲಿ ನೆಲೆಸಲು ತೀರ್ಮಾನಿಸಿದರು. ಹೀಗೆ ಆರ್ಥಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಅವರಿಂದ ಸಲಹೆಗಳನ್ನು ಪಡೆಯಲಾಗುತ್ತಿತ್ತು. ಉತ್ತಮ ಪ್ರಬಂಧಗಳನ್ನು ಬರೆಯುತ್ತಿದ್ದರು. ಸೂಕ್ಷ್ಮ ದೃಷ್ಟಿಯಿಂದ ರಿಸರ್ಚ್ ಮಾಡುತ್ತಿದ್ದರು. ಸಮಸ್ಯೆಗಳಿಗೆ ಪರಿಹಾರಗಳನ್ನು ಮುಂದಿರಿಸುತ್ತಿದ್ದರು. ಅವರು ಕೆಲವು ಪುಸ್ತಕಗಳನ್ನು ಸಹ ಬರೆದಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ. 'ಇಸ್ಲಾಮಿನ ಮೂಲಭೂತ ಸಂಗತಿಗಳು, ಇಸ್ಲಾಂ – ಫಿಲಾಸಫಿ ಆಫ್ ಲೈಫ್ ಮತ್ತು ಆರ್ಥಿಕ ತತ್ವ.ಇವೆಲ್ಲವೂ ಇಂಗ್ಲಿಷಿನಲ್ಲಿ ಬರೆದಿರುವರು. **ಹುರ್ಮತೆ ಸೂದಿಯ** ಮತ್ತು **ಹುಸೂಲೆ ರಿಝ್‌ಕ್**. ಈ ಎರಡು ಪುಸ್ತಕಗಳನ್ನು ಉರ್ದುವಿನಲ್ಲಿ ಬರೆದಿದ್ದರು. ನಿವೃತ್ತರಾದ ನಂತರ 1989ರಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್‌ರ ನಿರ್ದೇಶನದಂತೆ ವಖ್‌ಫ್ ಮಾಡಿ ತಾಶ್ಕಂದ್ ಯೂನಿವರ್ಸಿಟಿಯಲ್ಲಿ ಇಕನೋಮಿಕ್ಸ್ ಕಲಿಸಲಿಕ್ಕಾಗಿ ಉಝ್ಬೇಕಿಸ್ತಾನಿಗೆ ಹೋಗಿದ್ದರು. ಅಲ್ಲಿ ಆರು ತಿಂಗಳು ಸೇವೆ ಸಲ್ಲಿಸಿದ್ದರು. ಅಡವು ಮತ್ತು ಬಡ್ಡಿಯ ವಿಷಯಗಳ ಬಗ್ಗೆ ಶೋಧನೆ ನಡೆಸಲು ಪಂಡಿತರ ಮತ್ತು ಪರಿಣತರನ್ನು ಒಳಗೊಂಡ ಒಂದು ಕಮಿಟಿಯನ್ನು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್ ಮಾಡಿದ್ದರು. ಅದರ ಒಂದು ಸಬ್‌ಕಮಿಟಿ ಸಹ ಇತ್ತು. ಇವರು ಅದರ ಮೆಂಬರ್ ಆಗಿದ್ದರು. ಅದರಲ್ಲಿ ನಾನು ಸಹ ಇವರೊಂದಿಗೆ ಕೆಲಸ ಮಾಡಿದ್ದೇನೆ. ನಾನು ಹೇಳಿದಂತೆ ಇವರು ಬಹಳ ಸೂಕ್ಷ್ಮ ಮತ್ತು ಆಳವಾಗಿ ಪ್ರತಿಯೊಂದು ಸಂಗತಿಯನ್ನು ಪ್ರಬಲವಾದ ಸಾಕ್ಷ್ಯಾಧಾರಗಳೊಂದಿಗೆ ಮಾತನಾಡುತ್ತಿದ್ದರು. ಬಡ್ಡಿ ವ್ಯವಸ್ಥೆಯ ಬಗ್ಗೆ ಅವರು ಬರೆದ ಲೇಖನಗಳನ್ನು ನನಗೂ ಕಳಿಸಿದ್ದಾರೆ. ಅವುಗಳು ತುಂಬ ಉತ್ತಮ ಲೇಖನಗಳಾಗಿವೆ. ಇದರ ಬಗ್ಗೆ ಇನ್ನೂ ಹೆಚ್ಚು ಯೋಚಿಸಲಾಗುವುದು. ಮುಂದಿನ ದಿನಗಳಲ್ಲಿ ಬಡ್ಡಿ ವ್ಯವಸ್ಥೆಗೆ ಎದುರಾಗಿ, ಸರಿಸಾಟಿಯಾಗಿ ಮುಂದಿರಿಸಲಾಗುವ ವ್ಯವಸ್ಥೆಯಲ್ಲಿ ಇವರ ಕೆಲವು ಅಭಿಪ್ರಾಯಗಳನ್ನು ಸಹ ಬಹುಶಃ ಪರಿಗಣಿಸಲಾಗುವುದು. ಇನ್ಶಾ ಅಲ್ಲಾಹ್. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

******************

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

**Love for All, Hatred for None**

**ಪ್ರೀತಿ ಯಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಓ ಮುಸಲ್ಮಾನರೇ! ಮುನ್ನಡೆಯಿರಿ. ಯುದ್ಧ ಮಾಡಿರಿ. ಮುಸಲ್ಮಾನರು ಹೇಳುತ್ತಾರೆ. ಓ ಉಲಮಾ ಮಹಾಶಯರೇ ನೀವು ಮುಂದಾಗಿರಿ ಮತ್ತು ಯುದ್ಧ ಮಾಡಿರಿ. ಏಕೆಂದರೆ ನೀವು ನಮ್ಮ ನಾಯಕರು, ಮಾರ್ಗದರ್ಶಕರು. ಮತ್ತೆ ಇಬ್ಬರೂ ತಮ್ಮ ತಮ್ಮ ಮನೆಗಳತ್ತ ತೆರಳುತ್ತಾರೆ. ಅದರೆ ಅಲ್ಲಾಹನು ನಮಗೆ ಎಂತಹ ಖಡ್ಗ ದಯಪಾಲಿಸಿದ್ದಾನೆಂದರೆ ಅದಕ್ಕೆ ಎಂದೂ ತುಕ್ಕು ಹಿಡಿಯುವುದಿಲ್ಲ. ಅದು ಯಾವ ಯುದ್ಧದಲ್ಲೂ ಮುರಿಯಲ್ಪಡುವುದಿಲ್ಲ. ಹದಿಮೂರು ನುರು ವರ್ಷಗಳು ಸಂದವು. ಲೋಕದ ಕಠಿಣ ಅತಿ ಕಠಿಣ ಸಮುದಾಯಗಳು ಈ ಖಡ್ಗವನ್ನು ಮುರಿಯ ಬಯಸಿದರು. ಅದನ್ನು ಬೇರೆ ಬೇರೆ ಮಾಡಬಯಸಿದರು. ಆದರೆ ಅದು ಎಂದೂ ಮುರಿಯಲ್ಪಡಲಿಲ್ಲ. ಅಂತಹದೊಂದು ಪವಿತ್ರ ಖುರ್‌ಆನ್ ಅಲ್ಲಾಹನು ನಮಗೆ ನೀಡಿರುವನು. ಇದು ಇಡೀ ಲೋಕವನ್ನು ಜಯಿಸುವಂತಹ ಖಡ್ಗವಾಗಿದೆ. ಅಲ್ಲಾಹನು ಹೇಳುವನು. **ಜಾಹಿದ್‌ಹುಮ್ ಬಹಿ ಜಿಹಾದನ್ ಕಬೀರ** -- ಖಡ್ಗದ ಜಿಹಾದ್ ತಮ್ಮ ಆತ್ಮ ವ್ಯಾಮೋಹಗಳ ವಿರುದ್ಧ ಜಿಹಾದ್ ಮತ್ತು ಇತರ ಸಣ್ಣಪುಟ್ಟ ಜಿಹಾದ್ ಗಳಿಗಿಂತ ಅತ್ಯಂತ ಮಹತ್ವವುಳ್ಳ ಮತ್ತು ಮಹತ್ತರವದ ಜಿಹಾದ್ ಕೇವಲ ಪವಿತ್ರ ಖುರ್‌ಆನ್ ಆಗಿದೆ. ಈ ಖಡ್ಗ ಯಾವ ವ್ಯಕ್ತಿಯ ಮೇಲೆ ಬೀಳುವುದು ಅವನ ತಲೆ ಕತ್ತರಿಸಲ್ಪಡುವುದು. ಇದು ಯಾರ ಮೇಲೆ ಬೀಳುವುದು. ಅವನು ಸಹ ಕೊಲ್ಲಲ್ಪಡುವನು. ಅಥವಾ ಇಸ್ಲಾಂ ಸ್ವೀಕರಿಸಿ ಶಾಶ್ವತವಾದ ಜೀವನ ಪಡೆಯುವವನಾಗುತ್ತಾನೆ.

ಹದಿಮೂರು ನೂರು ವರ್ಷಗಳವರೆಗೂ ಇಸ್ಲಾಮ್ ಲೋಕದಾದ್ಯಂತ ಹರಡಲಿಲ್ಲ. ಅಂದರೆ ಅದಕ್ಕೆ ಕಾರಣ ಇಸ್ಲಾಮಿನ ಖಡ್ಗಕ್ಕೆ ತುಕ್ಕು ಹಿಡಿದಿತ್ತು ಎಂದಲ್ಲ. ಬದಲು ಅದಕ್ಕೆ ಪ್ರಬಲ ಕಾರಣವೆಂದರೆ ಮುಸಲ್ಮಾನರು ಆ ಖಡ್ಗದಿಂದ ಕಾರ್ಯನಿರ್ವಹಿಸುವುದನ್ನು ಬಿಟ್ಟಿದ್ದರು. ಇಂದು ಅಲ್ಲಾಹನು ಮತ್ತೆ ಅಹ್ಮಯಅತ್ತಿಗೆ ಆ ಖಡ್ಗ ಕೊಟ್ಟು ನಿಲ್ಲಿಸಿದ್ದಾನೆ. ಮತ್ತೆ ತನ್ನ ಧರ್ಮವನ್ನು ಲೋಕದ ಎಲ್ಲ ಧರ್ಮಗಳ ಮೇಲೆ ವಿಜಯವನ್ನು ನೀಡುವ ಇರಾದೆ ಹೊಂದಿದ್ದಾನೆ. ಆದರೆ ಹಲವು ಮೂಡ ಮುಸಲ್ಮಾನರು ಅಹ್ಮದಿಯತ್ತಿನ ಮೇಲೆ ಆಕ್ರಮಣ ಮಾಡುತ್ತಾ ಹೇಳುತ್ತಾರೆ. ಅಹ್ಮದಿ ಜಿಹಾದ್ ಒಪ್ಪುವುದಿಲ್ಲ ಅವರ ಸ್ಥಿತಿ ಎಂತಹದ್ದಾಗಿತೆಂದರೆ ಉದಾಹರಣೆಗೆ ಒಬ್ಬ ವ್ಯಕ್ತಿ ಚಾಟಿಬಿಲ್ ಹಿಡಿದು ಆಕ್ರಮಣ ಮಾಡಬಯಸುತ್ತಾನೆ. ಚಾಟಿಬಿಲ್‌ಗಳಿಂದ ಎಂದು ಕೋಟೆಗಳನ್ನು ಜಯಿಸುವುದು ಸಾಧ್ಯ, ಎದುರಾಳಿಗಳು ಪ್ರಬಲ ಯುದ್ಧಾಸ್ತ್ರಗಳಿಂದ ಸಿದ್ಧರಾಗಿ ಬಂದಾಗ ಅವರ ಮೇಲೆ ಆರೋಪ ಹೊರಿಸುವುದು ನೀವು ಚಾಟಿಬಿಲ್ ಏಕೆ ತರಲಿಲ್ಲ ಅಂದರೆ ಅದಕ್ಕಿಂತ ದೊಡ್ಡ ಹಾಸ್ಯಾಸ್ಪದ ಮಾತು ಬೇರೆ ಇದೆಯೇ. ಈ ಮೂಢರು ತನ್ನ ಮೂಢತನದಿಂದ ಪ್ರಪಂಚದಲ್ಲೆಡೆ ಇಸ್ಲಾಮಿನ ಸಂದೇಶವನ್ನು ತಲುಪಿಸಿದ ವ್ಯಕ್ತಿಯನ್ನು, ಜಿಹಾದನ್ನು ನಂಬುವುದಿಲ್ಲ ಎನ್ನುತ್ತಾರೆ. **(ತಫ್ಸೀರ್ ಕಬೀರ್ ಸಂಪುಟ 6 ಪುಟ 512–513 ಮುದ್ರಣ 2010 ಖಾದಿಯಾನ್)**

---

*(ಪುಟ ಸಂಖ್ಯೆ 02ರ ಉಳಿದ ಭಾಗ)*

"'ನಾವು ಹೀಗೆ ಹಝ್ರ್‌ರತ್ ರಸೂಲುಲ್ಲಾಹ್(ಸ) ರವರ ಹದೀಸುಗಳಿಂದ ಅದರ ಸತ್ಯಾಸತ್ಯತೆ ಕಂಡು ಹಿಡಿಯುತ್ತೇನೆ. ಬಹಳಷ್ಟು ಹದೀಸುಗಳು ಇಂತಹ ಮತ ಹೊಂದಿದವರ ದೃಷ್ಟಿಯಲ್ಲಿ ಸರಿಯಾಗಿವೆ ಅವು ನಮ್ಮ ದೃಷ್ಟಿಯಲ್ಲಿ ಸರಿಯಲ್ಲ, ಬಹಳಷ್ಟು ಹದೀಸುಗಳು ಅವರ ದೃಷ್ಟಿಯಲ್ಲಿ ದುರ್ಬಲವಾಗಿವೆ ಮತ್ತು ಹಝ್ರ್‌ರತ್ ರಸೂಲುಲ್ಲಾಹ್(ಸ) ರವರ ನುಡಿಯನ್ವಯ ಸ್ವಪ್ನದಿಂದ ಸರಿಯಾಗಿರುತ್ತದೆ.

ಮತ್ತೆ ಅವರು(ಅ) ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರನ್ನು ಸಂಬೋಧಿಸಿ ಹೇಳಿದರು. ಇದೀಗ ನಾನು ಈ ಮಾತಿನ ಮೇಲೆ ಹೆಚ್ಚು ಒತ್ತು ನೀಡುವುದಿಲ್ಲ. ಶ್ರೀಯುತರ ವಿಶ್ವಾಸದ ವಿವರಣೆಯಿಂದ ಪ್ರತಿಯೋರ್ವ ವಿವೇಕಶೀಲನೂ ಯೋಚಿಸಬಹುದು. ಇದು ನಿಮ್ಮದೆ ವಿಶ್ವಾಸವಾಗಿದೆ. ಈ ವಿಶ್ವಾಸವಿಲ್ಲದಿರುತ್ತಿದ್ದರೆ ನೀವು ಅದನ್ನು ಪ್ರಸ್ತಾಪಿಸುತ್ತಿರಲಿಲ್ಲ. ಏಕೆಂದರೆ ಯಾವುದನ್ನು ಮನುಷ್ಯನು ಸರಿ ಎಂದು ಭಾವಿಸುತ್ತಾನೋ ಅದನ್ನೇ ಪ್ರತಿಪಾದನೆಗಾಗಿ ದಾಖಲಿಸುತ್ತಾನೆ. ನೀವು ಅದೇ ದಾವೆಯ ಸಮರ್ಥನೆಯಲ್ಲಿ ಒಂದು ಬುಖಾರಿಯ ಹದೀಸನ್ನು ಪ್ರಸ್ತಾಪಿಸಿದ್ದೀರಿ. ಮುಹದ್ದೀಸ್ (ಸಜ್ಜನರ) ಗಳ ದೇವವಾಣಿ ಶೈತಾನನ ಹಸ್ತಕ್ಷೇಪದಿಂದ ಮುಕ್ತವಾಗಿರುತ್ತದೆ. ಅಲ್ಲಿ ನೀವು ಆ ಕಥನವನ್ನು ಒಪ್ಪಿಕೊಂಡಿರುತ್ತೀರಿ. ವಿಶ್ವಾಸ ರೂಪದಲ್ಲಿರದಿದ್ದರೂ ಸಾಧ್ಯತೆ ರೂಪದಲ್ಲಿ ಅವಶ್ಯವಾಗಿ ಸಮರ್ಥಕರಾಗಿದ್ದೀರಿ. (ಅದೇ ಪುಟ–28)

ಉತ್ತರವಾಗಿ ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಬರೆದರು. ನನ್ನ ಯಾವುದೇ ವಿವರಣೆ ಅಥವಾ ಗ್ರಂಥದಲ್ಲಿ ಇಬ್ನು ಅರಬಿಯರ ಸಮರ್ಥನೆ ದೊರೆಯುವುದಿಲ್ಲ. ನನ್ನ ಸ್ಪಷ್ಟವಾದ ನಿಲುವು ನಬಿ ಅಲ್ಲದವರನ್ನು ತೀರ್ಪುಗಾರನೆಂದು ಭಾವಿಸುವುದಿಲ್ಲ. ಖುರ್‌ಆನ್ ಸುನ್ನತ್ ಪಾಲಿಸುವವನಾಗಿದ್ದೇನೆಯೇ ಹೊರತು ಯಾವ ಸಜ್ಜನರ ಅನುಪಾಲಕನಲ್ಲ. ನೀವು ನನ್ನ ಮೇಲೆ ಅಪವಾದ ಹೊರಿಸುತ್ತಿದ್ದೀರಿ. ಎಲ್ಲಿಯವರೆಗೆ ನನ್ನ ವಿಶ್ವಾಸದ ಕುರಿತು ಆಕ್ಷೇಪವಿದೆಯೋ ಅದರ ಉತ್ತರ ಇಶಾಅತುಸ್ಸುನ್ನದ ಅದೇ ಪುಟದಲ್ಲಿದೆ. ನಾನು ಇಬ್ನು ಅರಬಿಯರ ಕಥನವನ್ನು ನಮೂದಿಸಿದ ಕಾರಣ ದೇವವಾಣಿಯನ್ನು ನಿರ್ಣಾಯಕ ಎಂದು ನಂಬುವುದರಲ್ಲಿ ಬರಾಹೀನ್ ಅಹ್ಮದಿಯರ ಗ್ರಂಥಕಾರರು ಒಬ್ಬರೇ ಅಲ್ಲ. ಮತ್ತು ಈ ಸಮಸ್ಯೆ ಹೊಸ ಹಾಗೂ ಅದ್ಭುತವೇನಲ್ಲ. ಅದನ್ನು ಯಾರು ನಂಬದೇ ಇರಲ್ಲ. ಅದರಿಂದ ಸ್ಪಷ್ಟವಾಗುತ್ತಿದೆ. ನಾನು ಅವರ ಕಥನವನ್ನು ದಾಖಲಿಸುವ ಮೂಲಕ ಬರಾಹೀನೇ ಅಹ್ಮದಿಯಾ ಗ್ರಂಥಕರ್ತರನ್ನು ರಕ್ಷಿಸಬಯಸುತ್ತಿದ್ದೆ. ನಾನು ಮನವರಿಕೆ ಮಾಡಬಯಸುತ್ತಿದ್ದೆ. ಇಂತಹ ದೇವವಾಣಿಯನ್ನು ಬದ್ಧನೆಂದು ಭಾವಿಸುತ್ತೇನೆ. (ಅದೇ ಪುಟ–33)

ಆಗ ಹಝ್ರ್‌ರತ್ ಮೌಲಾನಾ ಅಬ್ದುಲ್ ಕರಿಂ ಸಾಹಿಬ್ ಸಿಯಾಲ್ಕೋಟಿ ಪ್ರಕಟಿಸಿದರು ಹಝ್ರ್‌ರತ್ ಮಿರ್ಝಾ ಸಾಹಿಬ್ ಈ ವಿಶ್ವಾಸದಲ್ಲಿ ಒಬ್ಬರು ಮಾತ್ರ. ಅಲ್ಲದಿದ್ದರೆ ಇನ್ನೂ ಹಲವರು ಅದೇ ವಿಶ್ವಾಸ ಹೊಂದಿದವರಾದರೆ ಅವರ ರಕ್ಷಣೆಗೋಸ್ಕರ ದಾಖಲಿಸಿದ್ದೆ ಎಂಬುದರ ಅರ್ಥವೇನು? ಅವರು ಹೇಳುತ್ತಾರೆ. ಅಂತೂ ಅದರಲ್ಲಿ ಸಂಶಯವೇನು ಉಳಿಯಲಿಲ್ಲ. ಬಟಾಲವಿ ಸಾಹಿಬ್ ಭಗೀರಥ ಪ್ರಯತ್ನ ಮಾಡಿ ಹಝ್ರ್‌ರತ್ ಮಸೀಹ್ ಮೌಊದ್(ಅ) ರನ್ನು ತಫ್ರುದ್ (ಒಬ್ಬಂಟಿ) ಯ ಅಪವಾದದಿಂದ ಸಂರಕ್ಷಿಸಿದರು.

ಸಯ್ಯದ್‌ನಾ ಹಝ್ರ್‌ರತ್ ಮಸೀಹ್ ಮೌಊದ್(ಅ) ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ ಬರೆದರು. ನಾನು ಹೇಳುವುದೇನೆಂದರೆ. ನಿಮ್ಮ ಮೊದಲ ವಿವರಣೆಯಲ್ಲಿ ತಾವು ಇಬ್ನು ಅರಬಿಯರ ಸಮರ್ಥಕರಾಗಿದ್ದರೆ ನೀವು ಸಮರ್ಥಕರಲ್ಲ ಎಂದಾದರೆ, ಬುಖಾರಿ ಹದೀಸನ್ನು ಏಕೆ ಪ್ರಸ್ತಾಪಿಸಿದ್ದೀರಿ? ಅದರಲ್ಲಿ ಬರೆಯಲಾಗಿದೆ. ಮುಹದ್ದಿಸ್ ಸಹ ನಬಿಯಂತೆಯೇ ಸಂದೇಶವಾಹಕರಾಗಿದ್ದಾರೆ. ನೀವು ಏಕೆ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್‌ರವರ ಕಥನ ದಾಖಲಿಸಿದ್ದೀರಿ. ಮುಹದ್ದಿಸರ ದೇವವಾಣಿಯೂ ನಬಿಯಂತೆ ಶೈತಾನನ ಹಸ್ತಕ್ಷೇಪದಿಂದ ಮುಕ್ತವಾಗಿರುತ್ತದೆ ಎಂದು. ನೀವು ಬುಖಾರಿ ಹದೀಸ್ ನಂಬುಬುದಿಲ್ಲ ಎಂದಾದರೆ ಹಿಂದಿನ ಹೇಳಿಕೆಯನ್ನು ಸಮರ್ಥಿಸಿಕೊಳ್ಳಬೇಕು. ನಾನು ಮುಹದ್ದಿಸಿನ ದೇವವಾಣಿಯನ್ನು ಶೈತಾನನ ಹಸ್ತಕ್ಷೇಪದಿಂದ ಮುಕ್ತನೆಂದು ಭಾವಿಸುವುದಿಲ್ಲ ಎಂದು ನನಗೆ ಆಶ್ಚರ್ಯವಾಗುತ್ತದೆ. ನೀವು ಒಂದೆಡೆ ಬುಖಾರಿ, ಬುಖಾರಿ ಎನ್ನುತ್ತೀರಿ. ಇನ್ನೊಂದೆಡೆ ಅದರ ವಿರುದ್ಧ ನಡೆದುಕೊಳ್ಳುತ್ತೀರಿ. ಒಬ್ಬ ಮುಹದ್ದಿಸಿಗೆ ಒಂದು ಹದೀಸಿನ ಮರ್ಮ ಸ್ಪಷ್ಟವಾದರೆ ಪದೇ ಪದೇ ದೇವವಾಣಿಯಿಂದ ಪ್ರೇರಣೆ ನೀಡಲ್ಪಟ್ಟರೆ ಬುಖಾರಿ ಹದೀಸಿನ್ವಯ ಆ ಹದೀಸನ್ನು ದುರ್ಬಲವೆಂದು ಪರಿಗಣಿಸುವುದಿಲ್ಲವೇ, ಮುಹದ್ದಿಸಿನ ಆ ಹದೀಸನ್ನು ಒಪ್ಪಬೇಕಾಗಿದೆ ಎಂದು. ಅದಾಗ್ಯೂ ನಿಮ್ಮ ವಿಶ್ವಾಸ. ಹೇಗೆ ನಿಮ್ಮ ಮೇಲೆ ಮಿಥ್ಯಾರೋಪ ಮಾಡಿದಂತಾಯಿತು? ಹಝ್ರ್‌ರತ್ ಮೌಲ್ವಿ ಸಾಹಿಬ್ ತಾವು ಇಂತಹ ಪದಗಳನ್ನು ಏಕೆ ಉಪಯೋಗ ಮಾಡುತ್ತಿದ್ದೀರಿ. ಇತ್ತಬುಲ್ಲಾಹ್ (ಅಲ್ಲಾಹನಿಂದ ಭಯಪಡಿರಿ) ಎಂಬ ವಿಷಯ ಏಕೆ ಗ್ರಹಿಸುತ್ತಿಲ್ಲ (ಅದೇ ಪುಟ–544)

ಆಗ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲವಿ ಸಾಹಿಬ್ ಬರೆದರು. ನನ್ನ ಆದರಣಿಯ ಮಿತ್ರರೆ, ನಾನು ಬುಖಾರಿಯನ್ನು ನಂಬುತ್ತೇನೆ. ಈ ಹದೀಸಿನಲ್ಲಿ ಮುಹದ್ದಿಸರ ಪ್ರಾಮುಖ್ಯತೆ ಕುರಿತು ಏನು ಬರೆಯಲಾಗಿದೆಯೋ ಅದರಲ್ಲಿ ನನ್ನ ವಿಶ್ವಾಸವಿದೆ. ಅದರ ಜೊತೆಯಲ್ಲಿಯೇ ಈ ವಿಶ್ವಾಸವಿದೆ. ಯಾವ ವ್ಯಕ್ತಿ ಮುಹದ್ದಿಸ್ ಎಂದು ಹೇಳಿಕೊಂಡು, ಸಹೀ ಬುಖಾರಿ ಅಥವಾ ಸಹೀ ಮುಸ್ಲಿಂ ಹದೀಸುಗಳನ್ನು ದೇವವಾಣಿ ಎಂದು ಹೇಳಿ ಆ ಹದೀಸನ್ನು ದುರ್ಬಲ ಎಂದು ಹೇಳಿದರೆ ಅವನು ಮುಹದ್ದಿಸ್ ಅಲ್ಲ. ಶೈತಾನನ ಸಹಚರನಾಗಿದ್ದಾನೆ. ವಾಸ್ತವದ ಮುಹದ್ದಿಸ್ ಮತ್ತು ದೇವವಾಣಿ ಹೊಂದಿದ ವ್ಯಕ್ತಿ ಎಂದರೆ ಅವನು ಹದೀಸ್ ಮತ್ತು ದೇವವಾಣಿ ಪುರಾತನ ಪವಿತ್ರ ಖುರ್‌ಆನ್ ಸಹೀ ಹದೀಸುಗಳಿಗೆ ವಿರುದ್ಧವಾಗಿರಬಾರದು. ಮುಹದ್ದಿಸ್ ಅಥವಾ ದೇವವಾಣಿಯ ದಾವೆದಾರರು ಅದರ ಜೊತೆಯಲ್ಲಿ ಹೀಗೆ ನುಡಿಯಬೇಕು. ನನಗೆ ದೇವದೂತರು ನಿಮಿತ್ತ ಮಾಡಿದ್ದಾರೆ ಅಥವಾ ಅಲ್ಲಾಹನು ತನ್ನ ವಾಣಿಯನ್ನು ನೀಡಿದ್ದಾನೆ. ಅಥವಾ ರಸೂಲುಲ್ಲಾಹ್(ಸ) ನುಡಿದರು. ಸಹಿಹೈನ್ ಹದೀಸುಗಳು ದುರ್ಬಲವಾಗಿವೆ ಎಂದಾದರೆ ನಾನು ಅವನಿಗೆ ಶೈತಾನನ ಸಹಚರ ಎಂದು ಭಾವಿಸುವೆ, ಅವನು ಮುಹದ್ದಿಸ್ ಅಲ್ಲ, ಬದಲು ಸಾಕ್ಷಾತ್ ಶೈತಾನನೆಂದು ನಕಲಿ ಮುಹದ್ದಿಸ್‌ನೆಂದು ನಂಬುವೆನು. ಏಕೆಂದರೆ ಮುಹದ್ದಿಸ್ ಆಗಿ ಹೀಗೆ ಹೇಳುವುದು ನನಗೆ ದೇವವಾಣಿಯಾಗಿದೆ. ಪವಿತ್ರ ಖುರ್‌ಆನ್ ಅಲ್ಲಾಹನ ಗ್ರಂಥವಲ್ಲ. ಅಂತಹವನಿಗೆ ನಾನು ನಂಬುವೆನು. ನೀವು ಸಹ ಮುಹದ್ದಿಸ್‌ನೆಂದು ನಂಬಲಾರಿರಿ. ಅದೇ ಕಾರಣದಿಂದ ಪ್ರಸಕ್ತ ಕಾಲದಲ್ಲಿ ಮುಸ್ಲಿಮರು ಬುಖಾರಿಯನ್ನು ನಂಬುತ್ತಾರೆ. ಆದರೆ ನಿಮ್ಮನ್ನು ಮುಹದ್ದಿಸ್‌ನೆಂದು ಸ್ವೀಕರಿಸುವುದಿಲ್ಲ. ಅವರು ಬುಖಾರಿ ಹದೀಸನ್ನು ತಿರಸ್ಕರಿಸಲು ಸಾಧ್ಯವಿಲ್ಲ. (ಅದೇ ಪುಟ 78).

**(ಮುಂದುವರಿಯುವುದು)**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.1, Thursday, 17 December 2020, Issue No. 49

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

**(ಬದರ್ ಸಂಚಿಕೆ 48ರ ವರದಿಯ ಉಳಿದ ಭಾಗ)**

* ಇನ್ನೋರ್ವ ವಿದ್ಯಾರ್ಥಿನಿ Uterus ಬಗ್ಗೆ ಪ್ರಶ್ನೆ ಕೇಳಿದರು. ಹಲವು ಮಹಿಳೆಯರ ಜನ್ಮದಿಂದಲೇ uterus ಇರುವುದಿಲ್ಲ ಅಥವಾ ಸರಿಯಾಗಿ ಕೆಲಸ ನಿರ್ವಹಿಸುವುದಿಲ್ಲ. ಎರಡು ವರ್ಷಗಳ ಹಿಂದೆ ಕೆಲವು ವೈದ್ಯರು ಯಶಸ್ವಿ ರೀತಿಯಲ್ಲಿ Experiment ನಡೆಸಿದ್ದರು. ಅವರ ತಾಯಂದಿರ uterus ತೆಗೆದು ಅವರಿಗೆ Transparant coneive ಮಾಡದಷ್ಟು ವೃದ್ಧೆ ಅಂತೂ ಇಲ್ಲ, ಶರೀರ ಸ್ವೀಕರಿಸುವುದಾದರೆ ಅದು ಶರೀರದ ಭಾಗವಾಗಿ ಬಿಡುತ್ತದೆ. ನನ್ನ ದೃಷ್ಟಿಯಲ್ಲಿ ಇದು Kidney (ಮೂತ್ರಪಿಂಡ) ಬದಲಾವಣೆಯ ರೀತಿಯೇ ಆಗಿದೆ. ಜನ್ಮ ತಾಳುವ ಮಗು ಆ ದಂಪತಿಗಳ male ಮತ್ತು cell male ಯಿಂದಲೇ ಆಗಿದ್ದರೆ ಸರಿಯಾಗಿದೆ. ಯಾರು ಮತ್ತೊಬ್ಬ ಪುರುಷನ sperm ಪಡೆದುಕೊಳ್ಳುತ್ತಾರೋ ಅದು ತಪ್ಪಾಗಿರುತ್ತದೆ.

* ಒಬ್ಬ ವಿದ್ಯಾರ್ಥಿನಿಯು ಕೇಳಿದರು. ರೇಮೋಥೆರಪಿ, Hyperthemia ಜೊತೆ ಒಳ್ಳೆಯದಾಗಿ ಕಾರ್ಯ ನಿರ್ವಹಿಸುತ್ತದೆಯೇ, ಅದಾಗ್ಯೂ ಅದರ ಮಧ್ಯೆ ಯಾವ connection ಇಲ್ಲ?

* ಮಹಪಾರಾ ಸಾಹಿಬಾ ಹೇಳಿದರು. Hyperthermia ದಿಂದ ಕಣಗಳು ದುರ್ಬಲವಾಗುತ್ತವೆ. ಮತ್ತೆ chemotherapy ಉತ್ತಮವಾಗಿರುತ್ತದೆ. Hyperthermia ದಿಂದ Chemotherapy ಯ ಅವಶ್ಯಕತೆ ಕಡಿಮೆಯಿರುತ್ತದೆ.

* ಒಬ್ಬ ವಿದ್ಯಾರ್ಥಿನಿಯು ಕೇಳಿದರು. Chemotherapy ಯನ್ನು ಗಿಡ ಮೂಲಿಕೆಗಳಿಂದ ಜೊತೆಯಲ್ಲಿ ಚಿಕಿತ್ಸೆ ಮಾಡಿದರೆ ಒಳ್ಳೆಯದಾಗಬಹುದೇ?

* ಮಹಪಾರಾ ಸಾಹಿಬಾ ಹೇಳಿದರು. ಅದರ ಮೇಲೆ ನಾನು ಸಂಶೋಧನೆ ನಡೆಸಲಿಲ್ಲ. ಆಗ ಹುಝೂರ್ ಹೇಳಿದರು: ಅದರ ಮೇಲೆ ನೀವು ಸಂಶೋಧನೆ ನಡೆಸಿ.

* ಆ ವಿದ್ಯಾರ್ಥಿನಿ ಇನ್ನೊಂದು ಪ್ರಶ್ನೆ ಕೇಳೀದರು. Allopathy ಚಿಕಿತ್ಸೆ ಎಷ್ಟರಮಟ್ಟಿಗೆ ಮಡಬಹುದು. ಅದಾಗ್ಯೂ ಅದರಿಂದ side effect ಆಗುವುದು ಹೆಚ್ಚು.

ಹುಝೂರ್ ಹೇಳಿದರು. ಡಾ॥ ಹೇಳುವವರೆಗೆ ಮಾಡುತ್ತಿರಿ. ವಿದ್ಯಾರ್ಥಿನಿ ಕೇಳಿದರು. ಹುಜೂರ್ ಡಾಕ್ಟರ್‌ಗಳು ಹಣ ಸಂಪಾದನೆಗೋಸ್ಕರ ಹೇಳುತ್ತಾರೆ.

ಆಗ ಹುಝೂರ್ ಹೇಳಿದರು. ಡಾಕ್ಟರ್ ಹಣ ಸಂಪಾದನೆಗೋಸ್ಕರ ಹೇಳುತ್ತಿದ್ದಾರೆಂಬ ಭಾವನೆಯಿದ್ದರೆ ಮಾಡಿಸುವುದು ಬೇಡ. ಕೆಲವು ಯೂರೋಪಿಯನ್ ದೇಶಗಳಲ್ಲಿ ಏಷಿಯನ್ ಜನರನ್ನು Labarotery Test ಗೋಸ್ಕರ ಇಟ್ಟುಕೊಂಡಿದ್ದಾರೆ. ಏನೂ ತಿಳಿಯದಿದ್ದಾಗ Pain killer ಕೊಟ್ಟುಬಿಡುತ್ತಾರೆ. ಇನ್ನಿತರ ಚಿಕಿತ್ಸೆ ಸಹ ಜೊತೆಯಲ್ಲಿ ಮಾಡಿಸಿಕೊಳ್ಳಬೇಕು. ಒಂದು ಸಂದರ್ಭದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅಸ್ವಸ್ಥರಾಗಿದ್ದರು. ಅವರು ಮೊದಲು ನಾಟಿ ಔಷಧಿ ಉಪಯೋಗಿಸುತ್ತಿದ್ದರು. ಮತ್ತೆ ಎಲೊಪೆಥಿಕ್ ಮತ್ತೆ ಹೋಯಿಯೋಪೆಥಿಕ್ ಉಪಯೋಗಿಸಿದರು. ಒಬ್ಬ ನಿರ್ದಾಕ್ಷಣ್ಯ ಸ್ವಭಾವದವನು ಹೇಳಿದನು. ನೀವು ಮೂರು ರೀತಿಯ ಔಷಧಿಗಳನ್ನು ತೆಗೆದುಕೊಂಡಿದ್ದೀರಿ. ಹುಝೂರ್(ರ) ಹೇಳಿದರು. ಇದು ಚಿಕಿತ್ಸೆ ಆಗಿದೆ. ಇದು ದೇವನಲ್ಲ. ಅಲ್ಲಾಹನು ಯಾವುದರಲ್ಲಿ ಶಿಫಾ (ಗುಣಲಕ್ಷಣ) ಇಟ್ಟಿದ್ದಾನೋ ನನಗೆ ಗೊತ್ತಿಲ್ಲ. ಅದಕ್ಕೆ ನಾನು ಮೂರನ್ನೂ ಉಪಯೋಗಿಸಿದ್ದೇನೆ.

ಅನಂತರ ಇನ್ನೋರ್ವ ವಿದ್ಯಾರ್ಥಿನಿ ತನ್ನ ಒಂದು ಪ್ರಬಂಧ ಓದಿ ಹೇಳಿದರು.

ಅದರ ಶೀರ್ಷಿಕೆ " Discussion of Head scraf from the pedgogical piont of view" ಅಂದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಹಿಜಾಬ್ (ಪರದೆ) ಯ ಕುರಿತು ಚರ್ಚೆ ಎಂದಾಗಿತ್ತು.

ಹಿಂದಿನ ಹತ್ತು ವರ್ಷಕ್ಕಿಂತ ಹೆಚ್ಚು ಅವಧಿಯಿಂದ ಜರ್ಮನಿಯಲ್ಲಿ ಸಾರ್ವಜನಿಕ ಸೇವೆಗಳಲ್ಲಿ ಅಂದರೆ ಶಿಕ್ಷಣ ಮತ್ತು Law (ಕಾನೂನು) ಇತ್ಯಾದಿ ಕ್ಷೇತ್ರಗಳಿಂದ ಸಂಬಂಧಿಸಿದ ಮಹಿಳೆಯರ ಮೇಲೆ ಹಿಜಾಬ್ ಧರಿಸುವುದಕ್ಕೆ ನಿಷೇಧ ಹೇರಲಾಗಿದೆ. ಅದಕ್ಕೆ ಕಾರಣ ಇಸ್ಲಾಮ್ ವಿರೋಧಿ ರಾಜಕಾರಣಿಗಳ ವಾದವಾಗಿದ್ದವು. ಚರ್ಚೆಯ ವೇಳೆ ಎಲ್ಲ ಪಕ್ಷದವರ ಮಾತು ಕೇಳಲಾಗುತ್ತಿರಲಿಲ್ಲ. ಇಸ್ಲಾಮಿನ ಈ ನಿರ್ದೇಶನ ವಿರುದ್ಧ ಏಕಪಕ್ಷೀಯ ಚಳುವಳಿ ಹೂಡಲಾಗಿತ್ತು. ಮತ್ತೆ ನಿಧಾನವಾಗಿ ಈ ಚರ್ಚೆಯ ದಿಕ್ಕು ಬದಲಾಯಿತು. ಮತ್ತು ಇಸ್ಲಾಮಿನ ವಿರುದ್ಧ ಹರಡಲಾಗುತ್ತಿರುವ ಈ ದೃಷ್ಟಿಕೋನಗಳನ್ನು ಬದಲಾಯಿಸಲಾಯಿತು. ಜನವರಿ 2015 ರಲ್ಲಿ ಜರ್ಮನಿಯಲ್ಲಿ ಕೋರ್ಟ್, ಶಿಕ್ಷಕಿಯರ ಹೊರತು ಉಳಿದ ಮಹಿಳೆಯರ ಮೇಲಿಂದ ಹಿಜಾಬ್ Ban (ನಿಷೇಧ) ಅನ್ನು ಅಂತ್ಯಗೊಳಿಸಲಾಯಿತು. ಅದಕ್ಕೆ ಹಲವು ಬುದ್ಧಿಜೀವಿಗಳು ಸ್ವಾಗತಿಸಿದರು ಮತ್ತು ಅದನ್ನು ಪ್ರಜಾಪ್ರಭುತ್ವ ಹಾಗೂ ಸಮಾನತೆಯ ಸೂಚಕ ಎಂದರು.

* ಹುಝೂರ್ ಅನ್ವರ್ ಹೇಳಿದರು. ನೀವು ಎಷ್ಟೊಂದು ವೇಗವಾಗಿ ಓದಿದ್ದೀರೆಂದರೆ, ಯಾರಿಗಾದರೂ ಅರ್ಥವಾಗಿದೆ ಅಥವಾ ಇಲ್ಲವೆಂಬುದೇ ತಿಳಿಯುತ್ತಿಲ್ಲ.

* ಒಂದು ವಿದ್ಯಾರ್ಥಿನಿ ಪ್ರಶ್ನೆ ಮಾಡಿದರು. ನಮಗೆ ಯೂರೋಪಿಯನ್ ಸಮಾಜದ ನ್ಯೂನತೆಗಳನ್ನು ಎತ್ತಿ ಹಿಡಿಯಲು ಯಾವ ವಿಷಯಗಳ ಮೇಲೆ Thesis ಬರೆಯಬಹುದಾಗಿದೆ.

ಹುಝೂರ್ ಹೇಳಿದರು. Morals (ನೈತಿಕತೆ) ಮುಖ್ಯವಾಗಿವೆ. ಅದರ ಪರಿಭಾಷೆ ಭಿನ್ನವಾಗಿದೆ. ಉದಾಹರಣೆಗೆ ಯೂರೋಪಿನಲ್ಲಿ ವಿವಾಹವಿಲ್ಲದೆ ಸ್ತ್ರೀ ಪುರುಷರ ತನ್ನ ಮರ್ಜಿಯಿಂದ ಸಂಬಂಧವಿರಿಸಿಕೊಳ್ಳುವುದು ನೈತಿಕತೆ (Moral) ಎಂದು ಭಾವಿಸುತ್ತಾರೆ. ಅದಕ್ಕೆ ಯಾರು ಹಿಡಿಯುವವರಿಲ್ಲ, ಒತ್ತಾಯದಿಂದ ಸಂಬಂಧ ಬಯಸಿದರೆ ಹಿಡಿಯುತ್ತಾರೆ. ಇಸ್ಲಾಮ್ ಹೇಳುವುದು ನಿಮ್ಮ ಈ ನೈತಿಕತೆಯ ಪರಿಭಾಷೆ ತಪ್ಪಾಗಿದೆ. ಪ್ರತಿಯೊಂದಕ್ಕೆ ಒಂದು ವಿಧಾನವಿದೆ, ವಿವಾಹ ಮಾಡಿಕೊಂಡರೆ ನೆಮ್ಮದಿ ದೊರೆಯುವುದು, ವಿವಾಹದ ಮೇರೆಗೆ ಸಂಬಂಧ ಹೊಂದಿರಿ. ಸಂತಾನ ಬೆಳೆಸಿರಿ. ಮತ್ತೆ ಅದೇ ರೀತಿಯಲ್ಲಿ ಪಾರ್ಲಿಮೆಂಟ್‌ಗಳು, Home secretary ಇದರ ಬಗ್ಗೆ ಕಾನೂನು ಪಾಸು ಮಾಡುತ್ತಿದೆ. ಅದಾಗ್ಯೂ ಇಸ್ಲಾಮ್ ಮತ್ತು ಬೈಬಲ್ ಸಹ ಹೇಳುವುದು ಇದು ತಪ್ಪು ಎಂದು. ಪವಿತ್ರ ಖುರ್‌ಆನಿನಲ್ಲಿ ಇದೆ. "ಅದೇ ಕಾರಣದಿಂದ ಒಂದು ಸಮುದಾಯಕ್ಕೆ ಶಿಕ್ಷೆಯಾಯಿತು". ಹೀಗೆ ನೀವು ವಿಷಯ ಪ್ರಸ್ತಾಪಿಸಬಹುದು. ನಿಮ್ಮ ಬೆಳೆಯುತ್ತಿರುವ ಜ್ಞಾನದಲ್ಲಿ ಹಿಜಾಬ್ ಕುರಿತು ಸಂಶಯಗಳು ಉಳಿದಿದ್ದರೆ ಇದೀಗ ನಾನು ಹೇಳಿದ್ದೆ. ಮುಸ್ಲಿಮ್ ಮಹಿಳೆಯರ ಅಭಿಮತವಾಗಿದೆ. ತಮ್ಮ ಧರ್ಮದ ಅನುಸರಣೆಯಲ್ಲಿ ನಾವು ಧರಿಸುತ್ತೇವೆ. ಎಂದು ಇಸ್ಲಾಮ್ ಕಣ್ಣು ಮುಚ್ಚಿ ಅನುಸರಣೆ ಮಾಡಲು ಹೇಳುವುದಿಲ್ಲ. ಕೇವಲ ಒಂದು ಮಾತು ಕಣ್ಣು ಮುಚ್ಚಿ ವಿಶ್ವಾಸ ತರುವುದಾಗಿದೆ. ಅದು ಅಲ್ಲಾಹನ ಮೇಲಿನ ವಿಶ್ವಾಸವಾಗಿದೆ. ಅದು ಅದೃಶ್ಯ ವಿಚಾರಗಳ ಮೇಲೆ ವಿಶ್ವಾಸ ತರುವುದಾಗಿದೆ. ಅದು ಏಕೆಂದರೆ ಮತ್ತೆ ನಿಧಾನವಾಗಿ ವಿಶ್ವಾಸ ವೃದ್ಧಿಸುವುದು. ಆಗ ಅಲ್ಲಾಹನು ಸ್ವಯಂ ತನ್ನನ್ನು ಪ್ರಕಟಪಡಿಸುವನು. ಪರದೆ (ಹಿಜಾಬ್) ಧರಿಸುವ ಆಜ್ಞೆಯು ತನ್ನ ಅಸ್ತಿತ್ವದ ಸಂಕೇತವಾಗಿದೆ. ಅದರಿಂದ ಸಾತ್ವಿಕರು ಪರದೆಯನ್ನು ನೋಡಿ ಜಾಗ್ರತೆ ವಹಿಸುತ್ತಾರೆ. ಇಸ್ಲಾಮ್ ಕೇವಲ ತನ್ನ ಶಿರವನ್ನು ಹೊದಿಸಿಕೊಳ್ಳಲು ಹೇಳಲಿಲ್ಲ. ಬದಲು ಅದರ ಯುಕ್ತತೆ ಹೀಗೆ ಹೇಳಿತು. ಅದರಿಂದ ನೀವು ಇತರರಿಂದ ಆಗುವ ಅಡ್ಡಿ ಆತಂಕಗಳಿಗೆ ರಕ್ಷಣೆ ಪಡೆಯುವಿರಿ ಎಂದು. ಆ ನಷ್ಟದಿಂದ ರಕ್ಷಿಸಿಕೊಳ್ಳಲು ನಿಮಗೆ ಪುರುಷ ಮತ್ತು ಮಹಿಳೆಯರ ಮಧ್ಯ ಒಂದು ಅಡ್ಡಗೋಡೆ (Barrier) ಇಡಬಯಸಿದೆ.

**(ಮುಂದುವರಿಯುವುದು)**

## ಜಲ್ಸ ಸಾಲಾನ ಖಾದಿಯಾನ್ 2020 ರದ್ದುಗೊಳಿಸಲಾಗಿದೆ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಎಲ್ಲಾ ಸದಸ್ಯರು ಹಾಗೂ ಹುದ್ದೆದಾರರಿಗೆ ತಿಳಿಸುವುದೇನೆಂದರೆ ಈ ವರ್ಷ ಡಿಸೆಂಬರ್ 25 ರಿಂದ 27ರವರೆಗೆ ನಡೆಯ ಬೇಕಾದ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ಖಾದಿಯಾನ್ ದೇಶದಾದ್ಯಂತ ಹರಡಿರುವ ಸಾಂಕ್ರಾಮಿಕ ರೋಗ ಕೊರೋನದಿಂದ ಹಾಗೂ ಪ್ರವಾಸಿಗಳಿಗೆ ಆಗುವ ಅಸೌಕರ್ಯದ ಕಾರಣದಿಂದ ಹುಝೂರ್(ಅಬಿಅ)ರವರ ನಿರ್ದೇಶನದ ಪ್ರಕಾರ ರದ್ದುಗೊಳಿಸಲಾಗಿದೆ.

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಮರ್‌ಕಝಿಯಾ, ಖಾದಿಯಾನ್)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.